X

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೧೩
ವಿಚಾರ ಸಾಹಿತ್ಯಮಾಲೆ – ೩೪
ಭಾರತೀಯ ವಿದ್ಯಾ ಭವನದ, ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ.ವಿ. ನರಸಿಂಹಮೂರ್ತಿ**

# ಕಾನೂನು ಮತ್ತು ಸಂಸ್ಕೃತಿ

## ಭವನದ ಗ್ರಂಥ ವಿಶ್ವವಿದ್ಯಾನಿಲಯ


ಮಾಲೆಯ
ಮೂಲ ಸಂಪಾದಕರು
**ಕೆ.ಎಂ. ಮುನ್ಷಿ**
**ಆರ್.ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ.ಕೆ. ಬಿರ್ಲಾ** – ಸದಸ್ಯರು
**ಎಸ್.ಜಿ. ನೇವಾತಿಯ** – ಸದಸ್ಯರು
**ಜಿ.ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್.ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ.ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)




# ಕಾನೂನು ಮತ್ತು ಸಂಸ್ಕೃತಿ

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತ:**
**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**
**–ಋಗ್ವೇದ, I. ೮೯–೧**


ಮೂಲ
**ಎಂ.ಸಿ. ಸೆಟಲ್‌ವಾಡ್**
ಅನುವಾದ
**ಡಾ. ಸಿ.ಕೆ.ಎನ್. ರಾಜ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Kanunu mattu Samskriti :** Kannada translation of *Law and Culture* by **M.C. Setalvad;** Kannada translation by **Dr. C.K.N. Raja ;** Editor-in-Chief : **Dr. Pradhan Gurudatta;** Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxii + 39 ; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxii + ೩೯
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ।। ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು - ೫೬೦೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು - ೫೬೦ ೦೦೧
ದಿನಾಂಕ : ೫-೮-೨೦೦೯
ಸಿಎಂ/ಪಿಎಸ್/೧೪೭/೦೯

## ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು-ಆಯಾಮದ ಅದರ ಚಟುವಟಿಕೆಗಳು ಅರಳಿನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ-ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ-ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ-ಸೂಚನೆ-ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ-ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ-ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭರತೀಯು ವಿದ್ಯಾಭವನದಂದ ರಾಷ್ಟ್ರೀಯು ಮಹತ್ವದ ಸಂಸ್ಥೆಯು ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯು ಮಾಲೆಯು ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

## ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು, ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.



ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತ್ತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ-ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ-ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ.ದೇ.ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ-ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ-ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ-ಗರಿಮೆಗಳನ್ನು ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ ಶಿಲಾನ್ಯಾಸ



ಕಾರ್ಯಕ್ರಮವು ದಿನಾಂಕ:೦೧.೦೯.೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್.ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ:೧೯.೦೮.೨೦೦೯ರ ಬೆಳಗ್ಗೆ ೧೧.೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಈ ಕಟ್ಟಡ-ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

**(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :**

(i) "ಕನ್ನಡ ಸಾಹಿತ್ಯ ಹಿರಿಮೆ-ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

### (ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ.ಎಸ್.ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ.ಟಿ.ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ



ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

### (ಇ) ಪ್ರಕಟಣೆಗಳು :

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ.ಡಿ.ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವದ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ.ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ



ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾ ಭವನದ ಎಲ್ಲ ಪ್ರಧಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ.ವಿ. ನರಸಿಂಹಮೂರ್ತಿಯವರ ದಕ್ಷಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನು ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿಕೊಟ್ಟಿರುವ ಡಾ. ಸಿ.ಕೆ.ಎನ್ ರಾಜ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎನ್.ಎಸ್. ಶಾರದಾ ಪ್ರಸಾದ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ|| ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ.ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್.ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಕಾನೂನು ಮತ್ತು ಸಂಸ್ಕೃತಿ' ಎಂಬ ಪುಸ್ತಕ ಖ್ಯಾತ ಲೇಖಕರಾದ ಡಾ. ಸಿ.ಕೆ.ಎನ್. ರಾಜ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಏಕರ್ನಾಟಕ

**ಎ.ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾಭವನ**
ಚೌಪಾಟಿ ರೋಡ್, ಬೊಂಬಾಯಿ
ವಿಜಯ ದಶಮಿ, ಸೆಪ್ಟೆಂಬರ್ ೨೮,೧೯೬೩

**ಕೆ.ಎಂ. ಮುನ್ಷಿ**

## ಮೂಲ ಪ್ರಕಾಶಕರ ಟಿಪ್ಪಣಿ

ಭಾರತದ "ನ್ಯಾಯಪ್ರಜ್ಞೆಯ ಮೂರ್ತಿ" ಎಂದೇ ಪರಿಗಣಿಸಲ್ಪಟ್ಟಿರುವ ಮತ್ತು ಮಾಜಿ ಅಟಾರ್ನಿ ಜನರಲ್‌ರವರೂ ಆಗಿದ್ದ ಶ್ರೀ ಎಂ.ಸಿ. ಸೆಟಲ್‌ವಾಡ್‌ರವರು ಭವನದ ವಾರ್ಷಿಕ ಮುನ್ಷಿದತ್ತಿ ಯೋಜನೆಯಡಿಯಲ್ಲಿ "ಸಂಸ್ಕೃತಿ ಮತ್ತು ಕಾನೂನು ನಡುವಣ ಪರಸ್ಪರ ಸಂಬಂಧ"ವನ್ನು ಕುರಿತು ಮೂರು ಉಪನ್ಯಾಸಗಳನ್ನು ನೀಡಿದರು. ಈ ಉಪನ್ಯಾಸಗಳನ್ನು ಇಪ್ಪತ್ತೇಳನೆಯ ಭಾರತೀಯ ವಿದ್ಯಾಭವನದ ಸಂಸ್ಥಾಪನಾ ದಿನೋತ್ಸವದ ಸಂದರ್ಭದಲ್ಲಿ ೧೯೬೪ನೆಯ ಇಸವಿ ಡಿಸೆಂಬರ್ ತಿಂಗಳಿನ ೨೧, ೨೨ ಮತ್ತು ೨೩ನೆಯ ತಾರೀಖುಗಳಂದು ನೀಡಲಾಯಿತು.

ಈ ಉಪನ್ಯಾಸಗಳನ್ನು ಈಗ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ. ಸಾರ್ವಜನಿಕರ ಒತ್ತಾಯ ಪೂರ್ವಕ ಕೋರಿಕೆಯ ಫಲವಾಗಿ ಪ್ರಕಟಣೆ ಹೊರ ಬಂದಿದೆ.

**ಪ್ರಕಾಶಕರು**

**Blank**



## ಪರಿವಿಡಿ


| | |
|---|---|
| ಮೊದಲ ಮಾತು | v |
| ಶುಭಾಕಾಂಕ್ಷೆ | vi |
| ಪ್ರಾಸ್ತಾವಿಕ ನುಡಿ | viii |
| ಪೀಠಿಕೆ | x |
| ಅರಿಕೆ | xvi |
| ಮೂಲ ಸಂಪಾದಕರ ಪ್ರಸ್ತಾವನೆ | xvii |
| ಮೂಲ ಪ್ರಕಾಶಕರ ಟಿಪ್ಪಣಿ | xvii |
| ೧. ಸಂಸ್ಕೃತಿ ಮತ್ತು ಕಾನೂನು ನಡುವಣ ಆಂತರಿಕ ಸಂಬಂಧ | ೧ |
| ೨. ಪ್ರಾಚೀನ ಭಾರತದಲ್ಲಿ ಕಾನೂನು ಮತ್ತು ಸಂಸ್ಕೃತಿ | ೧೪ |
| ೩. ಆಧುನಿಕ ಭಾರತದಲ್ಲಿ ಕಾನೂನು ಮತ್ತು ಸಂಸ್ಕೃತಿ | ೨೬ |
| ೪. ಗ್ರಂಥಋಣ | ೩೯ |

Blank



# ಕಾನೂನು ಮತ್ತು ಸಂಸ್ಕೃತಿ

# ೧. ಸಂಸ್ಕೃತಿ ಮತ್ತು ಕಾನೂನು ನಡುವಣ ಆಂತರಿಕ ಸಂಬಂಧ

ಪ್ರತಿಯೊಂದು ಸಮಾಜವೂ ತನ್ನ ವಿಕಸನ ಪಥದಲ್ಲಿ ನಿರ್ದಿಷ್ಟವಾದ ಬೌದ್ಧಿಕ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಸಂಚಯಿಸುತ್ತದೆ. ಈ ಮೌಲ್ಯಗಳ ಸರಾಸರಿಯನ್ನೇ ಪ್ರಾಯಶಃ ಒಂದು ಗೊತ್ತಾದ ಕಾಲದಲ್ಲಿನ ಸಮಾಜದ ಸಂಸ್ಕೃತಿ ಎಂದು ಹೇಳಬಹುದು. ಸಮಾಜದ ಅಂಗವೇ ಆದ ಜನಗಳ ನಂಬಿಕೆಗಳು, ಸಿದ್ಧಾಂತಗಳು, ಪಕ್ಷಪಾತಗಳು ಮತ್ತು ವಿರುದ್ಧ ಲಕ್ಷಣಗಳೆಲ್ಲಾ ಈ ಮೌಲ್ಯಗಳು ರೂಪಿತವಾಗುವುದರಲ್ಲಿ ತಮ್ಮವೇ ಆದ ಪಾಲನ್ನು ಹೊಂದಿವೆ. ಒಂದು ಸಮಾಜ ತನ್ನದೇ ಆದ ಹವ್ಯಾಸ ಮತ್ತು ಚಟುವಟಿಕೆಗಳನ್ನು ಹೊಂದಿರುತ್ತದೆ. ಇವುಗಳ ಪರಿಣಾಮವಾಗಿ ಅದರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಮನೋಭಾವಗಳು ಅವಶ್ಯಕವಾಗಿ ಪ್ರತಿಬಿಂಬಿತವಾಗುತ್ತವೆ. ಈ ಮನೋಭಾವ ಕ್ರಮೇಣ ಸಮಾಜದ ಚಿಂತನೆಗಳು ಮತ್ತು ಜೀವನದ ಮೇಲೆ ಪ್ರಭಾವ ಬೀರುತ್ತದೆ. ಆ ಸಮಾಜ ಸಾಧಿಸುವುದಕ್ಕಾಗಿ ಇಟ್ಟುಕೊಂಡಿರುವ ಕೆಲವು ಆದರ್ಶಗಳಲ್ಲಿ ಇದು ಪ್ರತಿಬಿಂಬಿತವಾಗುತ್ತದೆ. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದವರೆಗೆ, ಒಂದು ಸಮಾಜದ ಚಿಂತನೆ ಮತ್ತು ಜೀವನವನ್ನು ರೂಪಿಸುವಲ್ಲಿ ಮತೀಯ ನಂಬಿಕೆಗಳು ಪ್ರಬಲವಾದ ಶಕ್ತಿಗಳಾಗಿದ್ದವು. ಚಿಂತನಶೀಲತೆ, ತಾಂತ್ರಿಕತೆ ಮತ್ತು ವೈಜ್ಞಾನಿಕ ಚಿಂತನೆಗಳು ಮುಂದುವರಿದ ಸಮಾಜಗಳ ಚಿಂತನಶೀಲರ ಮೇಲೆ ಹೆಚ್ಚಾಗಿ ಪ್ರಭಾವ ಬೀರಿ ಆ ಸಮಾಜಕ್ಕೆ ಒಂದು ಹೊಸದಿಶೆಯಲ್ಲಿ ತಿರುವನ್ನು ನೀಡಿವೆ. ಅವುಗಳ ಪ್ರಭಾವ ಪ್ರತಿಯೊಂದು ರಾಷ್ಟ್ರದ ಮನಸ್ಸುಗಳ ಮೇಲೆ ಅಗಾಧವಾಗಿದ್ದು, ನವಚಿಂತನಾ ಪಥಗಳ ಕಡೆ ಅವನ್ನು ಅವಶ್ಯಕವಾಗಿ ಸೆಳೆದಿವೆ. ತತ್ಫಲವಾಗಿ ಅವು ಹೊಸ ಸೂತ್ರಗಳನ್ನು ತಮ್ಮ ಗುರಿ ಸಾಧಿಸಲು ಮತ್ತು ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ತಮ್ಮ ಮುಂದೆ ಇಟ್ಟುಕೊಂಡಿವೆ. ಇವು ಮತ್ತು ಇನ್ನೂ ಅನೇಕ ಅಂಶಗಳು ಒಂದು ಸಮಾಜದ ಸಂಸ್ಕೃತಿಯ ವಿನ್ಯಾಸದೊಳಗೆ ಹೆಣೆದುಕೊಂಡು ಬಿಡುತ್ತವೆ. ಸಾಮಾಜಿಕ ಪ್ರಜ್ಞೆಯ ಮೂಲಚಾಲಕ ಬಲಗಳ ಪೂರ್ಣತೆಯೇ ಸಂಸ್ಕೃತಿಯೆಂದು ವಿವರಿಸಬಹುದು.

ವಿಜ್ಞಾನಕ್ಷೇತ್ರದ ಒಬ್ಬ ವಿದ್ವಾಂಸ ಸಂಸ್ಕೃತಿಯನ್ನು ವಿಶಾಲವಾಗಿ ಈ ರೀತಿ ವಿಭಜಿಸುತ್ತಾನೆ.

ಅ) ಕೌಶಲದಿಂದ ನಿರ್ಮಿಸಲ್ಪಟ್ಟ ವಸ್ತುಗಳು ವಾಸ್ತವಿಕಕಾರ್ಯಗಳಿಗಾಗಿ ಸೃಷ್ಟಿಸಲ್ಪಟ್ಟ ವಾಸ್ತವಿಕ ಪದಾರ್ಥಗಳು;

ಆ) ಸಮಾಜಕ್ಕಾಗಿ ನಿರ್ಮಿತವಾದವುಗಳು, ವ್ಯವಸ್ಥೆಗಳು ಮತ್ತು ಸಂಸ್ಥೆಗಳು - ಇವು ಸಾಮಾಜಿಕ ಮತ್ತು ರಾಜಕೀಯ ಘಟಕಗಳಿಗೆ ಚೌಕಟ್ಟನ್ನು ಒದಗಿಸಿ ಸಮಾಜದ ಸದಸ್ಯರ ನಡುವೆ ಸಾಮಾಜಿಕ ಸಂಬಂಧಗಳನ್ನು ಉಳಿಸಿಕೊಂಡು ಹೋಗುವಂತಹವುಗಳು,

ಇ) ಮನೋಜನ್ಯ ವಿಷಯಗಳು, ಸಂಸ್ಕೃತಿಗೊಂಡು ಮಾನಸಿಕ ಚೌಕಟ್ಟನ್ನು ಒದಗಿಸುವಂತಹ ಮಾನಸಿಕ ರಚನೆಗಳು. ಇವು ಬೌದ್ಧಿಕ ಸೌಂದರ್ಯೋಪಾಸಕ, ನೈತಿಕ ಅಥವಾ ಇನ್ನಾವುದೇ ಮಾನಸಿಕ ಕ್ರಿಯೆಗಳಿಗೆ ಚಾಲನೆ ನೀಡುವಂತವುಗಳು.

ಮತ್ತು ಕಾನೂನೆಂದರೇನು ? ಇಲ್ಲಿ ನಾವು ತತ್ವಶಾಸ್ತ್ರಜ್ಞರು ಕರೆಯುವಂತಹ ಪ್ರಕೃತಿ ನ್ಯಾಯಶಾಸ್ತ್ರ ಅಥವಾ "ನಿರಂತರ ದೇವರ ನ್ಯಾಯ"ದ ಬಗ್ಗೆ ಆಸಕ್ತಿ ಹೊಂದಿಲ್ಲ. ಅದನ್ನು ನಾವು ಥಾಮಸ್ ಆಕ್ವೆನಾಸ್‌ನ ಮಾತುಗಳಲ್ಲಿ ಹೇಳುವುದಾದರೆ, "ಮಾನವಕ್ರಿಯೆಗಳ ಒಂದು ಅಳತೆಗೋಲು ಅಥವಾ ನಿಯಮ ವಿವೇಚನೆಯಿಂದ ಕಲ್ಪಿತವಾದ ಮತ್ತು ಸಾಮಾನ್ಯ ಒಳಿತಿನ ದೃಷ್ಟಿಯಿಂದ ಜಾರಿಗೊಳಿಸಲ್ಪಟ್ಟ ನಿಯಮ..... ಜನಾಂಗದ ಉಸ್ತುವಾರಿಯಲ್ಲಿರುವವನು ಸಾಮಾನ್ಯ ಒಳಿತಿಗಾಗಿ ರಚಿಸಿದ ಮತ್ತು ಜಾರಿಗೊಳಿಸಿದ ವಿವೇಚನಾ ಸುಗ್ರೀವಾಜ್ಞೆ."ಬೇರೆ ಮಾತುಗಳಲ್ಲಿ ಹೇಳುವುದಾದರೆ ಸಮಾಜದ ಸಂಸ್ಕೃತಿ ಮಾನವನಿರ್ಮಿತ ಕಾನೂನಿನೊಡನೆ ಹೊಂದಿರುವ ಪರಸ್ಪರ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಅಂತಹ ಕಾನೂನಿನ ವೈಶಿಷ್ಟ್ಯಗಳನ್ನು ಟಾಯಿನ್‌ಬೀ ಈ ಮಾತುಗಳಲ್ಲಿ ಹೇಳಿದ್ದಾನೆ:

"ಯಾವುದೇ ನಿರ್ದಿಷ್ಟವಾದ ಕಾನೂನಿನ ವ್ಯಾಪ್ತಿಯೊಳಗೆ ಬರಬಹುದಾದಂತಹ ಎಲ್ಲಾ ಮಾನವ ಸನ್ನಿವೇಶಗಳಲ್ಲಿ ಏಕರೂಪವಾದ ಸಂದರ್ಭಗಳಲ್ಲಿ ಸಮಂಜಸವಾಗಿ ಅನ್ವಯಿಸಲ್ಪಡಲು ಅದು ಉದ್ದೇಶಿತವಾಗಿದೆ. ತನ್ನ ವ್ಯಾಪ್ತಿಯೊಳಗೆ ಬರುವ ಎಲ್ಲರ ಮೇಲೆ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮತ್ತು ನಿಷ್ಪಕ್ಷಪಾತವಾಗಿ ವಿಧಿಸಲು ಕಾನೂನಿದೆಯೆಂಬುದನ್ನು ಪರಿಣಾಮದಿಂದ ಹೇಳಬಹುದಾಗಿದೆ. ಇದಕ್ಕೂ ಹೆಚ್ಚಾಗಿ ಹೇಳಬೇಕೆಂದರೆ ಕಾನೂನಿನ ಉದ್ದೇಶ ಸಮಂಜಸವಾದ ನಿರೂಪಣೆ ಮತ್ತು ಪರಿಣಾಮಕಾರೀ ಆಡಳಿತಕ್ಕೆ ಮಾತ್ರವಲ್ಲ, ಅದು ನೈತಿಕವಾಗಿಯೂ ಸರಿಯಾದದ್ದೆಂದು ಸಂಬಂಧಪಟ್ಟವರೆಲ್ಲರೂ ಮಾನ್ಯತೆ ನೀಡಬೇಕು."



ಸ್ವಲ್ಪಮಟ್ಟಿಗೆ ಪ್ರಯತ್ನಿಸಿ ಸಂಕ್ಷಿಪ್ತವಾಗಿ ಹೇಳುವುದಾದರೆ ಸಮಾಜದ ಕಾರ್ಯನಿರ್ವಹಣೆಗಾಗಿ ರಚಿಸಲ್ಪಟ್ಟಿರುವ ನಿಯಮಗಳು ಮತ್ತು ನಿಯಂತ್ರಣಗಳ ಮೊತ್ತವೇ ಕಾನೂನೆಂದು ನಾವು ಸಮಾಜದೊಡನೆ ಕಾನೂನಿನ ಸಂಬಂಧವನ್ನು ವಿವರಿಸುವಾಗ ಹೇಳಬಹುದು.

ಈ ರೀತಿ ನಾವು ಅರ್ಥಮಾಡಿಕೊಂಡಿರುವ ಕಾನೂನು, ಸಮಾಜದ ಬೌದ್ಧಿಕ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಪ್ರತಿಬಿಂಬಿಸಬೇಕು ಮತ್ತು ಅದು ರೂಪಿತವಾಗಿರುವುದೇ ಆ ಮೌಲ್ಯಗಳನ್ನು ನಿಯಂತ್ರಿಸುವುದಕ್ಕಾಗಿ ಎಂಬುವುದು ಸಹಜವೇ ಆಗಿದೆ.

ಮಾನವ ಸಮಾಜ ತನ್ನ ಅಭಿವೃದ್ಧಿಯ ಪ್ರಾರಂಭಿಕ ಹಂತದಲ್ಲಿ ಆಡಳಿತಕ್ಕಾಗಿ ಸೂತ್ರೀಕೃತ ನಿಯಂತ್ರಣಗಳ ವ್ಯವಸ್ಥೆಯನ್ನು ಹೊಂದಿರಲಿಲ್ಲ. ಕುಟುಂಬ, ಅಥವಾ ಗ್ರಾಮೀಣ ಜನಾಂಗ ಅಥವಾ ಬುಡಕಟ್ಟು ತನ್ನದೇ ಆದ ನಂಬಿಕೆಗಳು, ಸಂಪ್ರದಾಯಗಳು ಮತ್ತು ಆಚರಣೆಗಳನ್ನು ನಿರ್ದಿಷ್ಟವಾದ ಸಾಮಾಜಿಕ ಘಟಕದ ಕಾನೂನಾಗಿ ಪರಿಗಣಿಸಿದ್ದವು. ಆದ್ದರಿಂದ ಸ್ವಾಭಾವಿಕವಾಗಿಯೇ ಒಂದು ಗೊತ್ತಾದ ಸಾಮಾಜಿಕ ಪಂಗಡದ ಆಚರಣೆಯನ್ನು ಪ್ರತಿನಿಧಿಸುವ ಸಂಪ್ರದಾಯ ಕ್ರಮೇಣ ನಿರ್ಬಂಧಿಸುವ ನಿಯಮದ ಶಕ್ತಿಯನ್ನು ಗಳಿಸಿತು. ತಾವು ಸಂಪ್ರದಾಯ ಬದ್ಧರಾಗಿದ್ದಂತೆ ಕರ್ತವ್ಯಗಳ ಪಾಲನೆ ಮತ್ತು ಹೊಣೆಗಾರಿಕೆಗಳ ನಿರ್ವಹಣೆಯನ್ನು ತನ್ನ ಸದಸ್ಯರ ಮೇಲೆ ಸಾಮಾಜಿಕ ಪಂಗಡ ಹೇರುತ್ತಿತ್ತು ಮತ್ತು ಯಾವನಾದರೂ ಸದಸ್ಯ ಅಂಗೀಕೃತ ಆಚರಣೆಗಳಿಗನುಗುಣವಾಗಿ ನಡೆಯಲು ವಿಫಲನಾದಾಗ ಶಿಕ್ಷೆಯನ್ನು ನೀಡುತ್ತಿತ್ತು. ತನ್ನ ಪ್ರಾರಂಭಿಕ ದಿನಗಳಲ್ಲಿ ಮಾನವ ಜನಾಂಗ ತಿಳಿದುಕೊಂಡಿದ್ದ ಕಾನೂನೇ ಅದಾಗಿತ್ತು. ತಾವು ಸಿದ್ಧಪಡಿಸುವ ನಿಯಮಗಳೆಂದು ಪರಿಗಣಿಸಿ ಜಾರಿಗೊಳಿಸುವ ಈ ಸಾಮಾಜಿಕ ಪಂಗಡಗಳ ಮೌಲ್ಯಗಳಲ್ಲದೇ ಸ್ಪಷ್ಟವಾಗಿ ಬೇರೆ ಇನ್ನೇನೂ ಆಗಿರಲಿಲ್ಲ.

ನಾಗರಿಕತೆ ಬೆಳೆದಂತೆ ಮತ್ತು ಅದರಲ್ಲೂ ಪಶ್ಚಿಮದಲ್ಲಿ ವಿಶಿಷ್ಟವಾಗಿ ಕೈಗಾರಿಕಾ ಕ್ರಾಂತಿಯ ನಂತರ, ಸಮಾಜ ಹೆಚ್ಚು ಹೆಚ್ಚಾಗಿ ಸಂಕೀರ್ಣವಾಯಿತು. ಸಮಾಜದ ಹಿರಿಯರು ಜ್ಞಾಪಿಸಿಕೊಂಡು ಜಾರಿಗೊಳಿಸುತ್ತಿದ್ದ ಸಂಪ್ರದಾಯಗಳು ಮತ್ತು ಆಚರಣೆಗಳಿಂದ ಅದನ್ನು ನಿಯಂತ್ರಿಸುವುದು ಇನ್ನು ಮುಂದೆ ಅಸಾಧ್ಯವಾಯಿತು. ಮಹತ್ತರವಾದ ಮತ್ತು ಹೆಚ್ಚು ಸಂಕೀರ್ಣತೆಯಿಂದ ಕೂಡಿದ ಸುವ್ಯವಸ್ಥಿತ ಸರ್ಕಾರದ ರೂಪಗಳು ಕ್ರಮೇಣ ಹೊರಹೊಮ್ಮಿದವು. ಅಂತಿಮವಾಗಿ ಇದೇ ಶಾಸನರಚನಾ ವ್ಯವಸ್ಥೆಯನ್ನೊಳಗೊಂಡಿರುವ ಉನ್ನತವಾಗಿ ಸುವ್ಯವಸ್ಥಿತವಾದ ಆಧುನಿಕ ರಾಷ್ಟ್ರವಾಗಿ ಅಭಿವೃದ್ಧಿ ಹೊಂದಿತು. ಆಧುನಿಕ ವ್ಯವಸಾಯಾಧಾರಿತ ಮತ್ತು ಕೈಗಾರಿಕಾಧಾರಿತ

ಸಮಾಜದ ಸಂಕೀರ್ಣತೆಗಳಲ್ಲಿ ಶಾಸನ ರಚನೆ ವಿಶೇಷವಾದ ಪ್ರಾವೀಣ್ಯವಿರುವ ತಜ್ಞರ ತಂಡದ ಕೆಲಸವಾಗಿದೆ. ಸಮಾಜಕ್ಕೆ ಸೇರಿದ ಸರ್ಕಾರವನ್ನು ನಡೆಸುತ್ತಿರುವವರ ಘೋಷಿತ ಆಶೋತ್ತರಗಳನ್ನು ನಿಯಮಗಳು ಮತ್ತು ನಿಬಂಧನೆಗಳಲ್ಲಿ ಈ ತಜ್ಞರು ಅಳವಡಿಸಬೇಕು. ಆ ಜನಗಳು, ನಿರಂಕುಶಪ್ರಭುಗಳಾಗಿರಬಹುದು ಅಥವಾ ಸ್ವಲ್ಪ ಜನಾಧಿಪತ್ಯದ ಪಂಗಡಗಳಿರಬಹುದು ಅಥವಾ ಜನಗಳನ್ನು ಪ್ರತಿನಿಧಿಸುವ ಜನಪ್ರಿಯ ಸಂಸ್ಥೆಗಳಾಗಿರಬಹುದು.

ಕಾನೂನು ಅಗತ್ಯವಾಗಿ ಹಿಂಬಾಲಿಸಬೇಕೇ ವಿನಾ ಮುಂದಾಳತ್ವದಲ್ಲಿರಬಾರದು ಮತ್ತು ಸ್ಪಷ್ಟವಾಗಿ ಸೂತ್ರೀಕರಿಸಲ್ಪಟ್ಟ ಸಾಮಾಜಿಕ ಭಾವನೆಗಳಿಗೆ ಮಾತ್ರ ಪ್ರತಿಕ್ರಿಯಿಸಬೇಕು ಎಂಬುದು ಕೆಲವರ ನಂಬಿಕೆಯಾದರೆ ಮತ್ತೆ ಹಲವರು ಹೊಸ ಸೂತ್ರಗಳ ಸೃಷ್ಟಿಯಲ್ಲಿ ಕಾನೂನು ಒಬ್ಬ ನಿರ್ಣಾಯಕ ನಿಯೋಗಿಯಾಗಿರಲೇಬೇಕೆಂದು ನಂಬುತ್ತಾರೆ. ಈ ಎರಡು ತಂಡಗಳ ನಡುವೆ ಸಾಕಷ್ಟು ಚರ್ಚೆ ನಡೆದಿದೆ. ಕಾನೂನು "ಕಂಡು ಹಿಡಿಯಲ್ಪಟ್ಟಿತೇ" ವಿನಾ "ಮಾಡಲ್ಪಡಲಿಲ್ಲ" ಎಂದು ಸ್ಯಾವಿನಿ ಅಭಿಪ್ರಾಯಪಡುತ್ತಾನೆ. ಸಾರ್ವಜನಿಕ ಅಭಿಪ್ರಾಯ ಸಂಪೂರ್ಣವಾಗಿ ಅಭಿವ್ಯಕ್ತಗೊಂಡ ಮೇಲಿನ ಶಾಸಕಾಂಗ ಕ್ರಿಯಾಶೀಲವಾಗಬೇಕೆಂದು ಸ್ಯಾವಿನಿ ಹೇಳುತ್ತಾನೆ. ಕಾನೂನನ್ನು ನಿಯಮ ಸಂಗ್ರಹ ಮಾಡುವ ಪ್ರವೃತ್ತಿಯನ್ನು ಅವನು ನಿರ್ದಿಷ್ಟವಾಗಿ ಖಂಡಿಸಿದನು. ಸ್ಯಾವಿನಯ ಕಾಲದ ನಂಬಿಕೆಗಳ ದಿನಗಳಿಂದ ನಾವು ಬಹಳ ಮಟ್ಟಿಗೆ ಬಹುದೂರ ಸರಿದಿದ್ದೇವೆ. ಅದರ ಬದಲು ಬೆಂಥಾಮನ ಸಿದ್ಧಾಂತ ಇಂದು ಪ್ರಚಲಿತವಾಗಿದೆ. ಕಾನೂನು ಸಾಮಾಜಿಕ ಸುಧಾರಣೆಗಳನ್ನು ಭಾವಿಸಲ್ಪಟ್ಟ ಸಾಮಾಜಿಕ ಆವಶ್ಯಕತೆಗಳನ್ನು ಭಾಗಶಃ ಪ್ರತಿಕ್ರಿಯಿಸಲು ಮತ್ತು ಭಾಗಶಃ ಉತ್ತೇಜಿಸುವ ಮೂಲಕ ಸಾಮಾಜಿಕ ಸುಧಾರಣೆಗಳನ್ನು ಜಾರಿಗೆ ತರುವ ಕ್ರಿಯಾಶೀಲ ಶಾಸನಬದ್ಧ ಉಪಕರಣವಾಗಬೇಕೆಂದು ಬೆಂಥಾಮ್ ಮತ್ತು ಅವನ ಅನುಯಾಯಿಗಳು ನಂಬಿದ್ದರು. ಹತ್ತೊಂಬತ್ತನೆಯ ಶತಮಾನದಲ್ಲಿ ಪಾಶ್ಚಿಮಾತ್ಯ ಸಮಾಜ ಕಂಡ ನಾಗರೀಕರಣ ಮತ್ತು ಔದ್ಯಮೀಕರಣದ ನಂತರ ಇಪ್ಪತ್ತನೆಯ ಶತಮಾನದ ರಾಜಕೀಯ ಮತ್ತು ಸಾಮಾಜಿಕ ಪರಿಸರದಲ್ಲಿ ಉಂಟಾದ ಕ್ರಾಂತಿಕಾರಕ ಬದಲಾವಣೆಗಳು ಸ್ಯಾವಿನಿಯ ಸಿದ್ಧಾಂತವನ್ನು ಕೇವಲ ಇತಿಹಾಸದ ಸಂಗತಿಯಾಗಿ ಮಾತ್ರ ಮಾಡಿದೆ.

ಭದ್ರತೆಯನ್ನು ಕಾಪಾಡುವುದೇ ಕಾನೂನಿನ ಪ್ರಮುಖವಾದ ಉದ್ದೇಶಗಳಲ್ಲೊಂದು. ಅದರ ಪ್ರಧಾನವಾದ ಗುರಿಯೇ ಅದೆಂದು ಹೇಳಬಹುದು ಮತ್ತು ಅದರ ಅಭಿವೃದ್ಧಿಗೆ ಶಕ್ತಿಶಾಲಿಯಾದ ಉತ್ತೇಜನವನ್ನು ನೀಡುವುದೂ ಅದೇ ಆಗಿದೆ. ಭದ್ರತೆಯನ್ನು ಸಂರಕ್ಷಿಸುವ ತನ್ನ ಬಯಕೆಯಲ್ಲಿ ಕಾನೂನು ಪದೇ ಪದೇ ಸ್ಥಾವರವಾಗುತ್ತದೆ ಮತ್ತು ತನ್ನ ಸುತ್ತಮುತ್ತಲಿನ ಸಾಮಾಜಿಕ ಬದಲಾವಣೆಗೆ



ಅನೇಕಸಲ ಕುರುಡಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಕಾನೂನು ನಾಮಕಾವಸ್ತೆಗೆ ಮಾತ್ರ ಇರುತ್ತದೆ ಮತ್ತು ಕಾಲಕ್ರಮೇಣ ಕಾನೂನು ಭದ್ರತೆಯನ್ನು ಕಾಪಾಡುವುದರ ಬದಲು ತನ್ನದೇ ಆದ ಗುರಿ ಮುಟ್ಟುವುದರಲ್ಲಿ ಸೋಲುತ್ತದೆ ಮತ್ತು ಅದಕ್ಕಿಂತ ಬಲಿಷ್ಠವಾದ ಶಕ್ತಿಗಳಿಂದ ಉಲ್ಲಂಘಿಸಲ್ಪಡುತ್ತದೆ. ಆದ್ದರಿಂದ ಕಾನೂನು ಸಾಮಾಜಿಕ ಅಭಿವೃದ್ಧಿಗನುಗುಣವಾಗಿ ತಾನು ರೂಪಗೊಳ್ಳುವುದಕ್ಕೂ ಮುಂಚೆ ತುಂಬಾ ಕಾಲಾಂತರವನ್ನು ಬಿಡಬಾರದು. ಆದರೆ ಈ ಮಾತಿನ ಅರ್ಥ ಕಾನೂನು ಒಬ್ಬ ವಿಧೇಯನಾದ ಸೇವಕನ ಪಾತ್ರವನ್ನು ಮಾತ್ರ ವಹಿಸಬೇಕೆಂದಲ್ಲ. ಕಾನೂನು ರಚನಾತ್ಮಕ ಮತ್ತು ವಾಸ್ತವಿಕ ಕರ್ತವ್ಯವನ್ನು ಹೊಂದಿರಬಹುದು ಮತ್ತು ತಾನೇ ಸಾಮಾಜಿಕ ಪರಿವರ್ತನೆಯ ಉಪಕರಣವಾಗಬಹುದು.

ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳು ಸಮಾಜದ ಕಾನೂನಿನ ಮೇಲೆ ಯಾವ ರೀತಿ ಪರಿಣಾಮವನ್ನುಂಟು ಮಾಡುತ್ತದೆಂಬುದು, ಯಾವ ಸ್ವರೂಪದ ಸರ್ಕಾರ ರಾಜ್ಯದ ಕಾರ್ಯ ನಿರ್ವಹಿಸುತ್ತದೆಂಬುದನ್ನು ಬಹಳವಾಗಿ ಅವಲಂಬಿಸುತ್ತದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಜನಾಂಗ ಸಂಪೂರ್ಣವಾಗಿ ವಿರೋಧಿಸುವ ಕಾನೂನನ್ನು ಹೇರಲು ಸಾಧ್ಯವಿಲ್ಲ. ಪ್ರಜಾಸತ್ತಾತ್ಮಕ ವ್ಯವಸ್ಥೆ ಇದ್ದರೂ, ಮತ್ತು ಜನತಾ ಪ್ರಾತಿನಿಧ್ಯ ಶಾಸನ ಸಭೆಗಳಲ್ಲಿದ್ದರೂ ಶಾಸನ ರಚನೆಯ ಮೇಲಿನ ನಿಯಂತ್ರಣ ಅಂತಹ ರಾಜ್ಯಗಳಲ್ಲಿಯೂ ಕಡಿಮೆ ಸಂಖ್ಯೆಯಲ್ಲಿರುವ ಸಮಾಜದ ಧುರೀಣರ ಕೈಯಲ್ಲೇ ಇರುತ್ತದೆ. ಸಮಾಜದ ಸದಸ್ಯರಲ್ಲಿ ಬಹುಜನಗಳ ಮೇಲೆ ವಿಶ್ವಾಸಪೂರ್ವಕ ಹತೋಟಿಯನ್ನು ಹೊಂದಿದ್ದೇವೆಂದು ಭಾವಿಸುವ ಈ ಧುರೀಣರು, ಕೆಲವು ಸಲ ಸಾಮಾಜಿಕ ಅಭಿಪ್ರಾಯ ರೂಪಗೊಳ್ಳುವುದಕ್ಕಿಂತ ತುಂಬಾ ಮುಂಚೆಯೇ ಕ್ರಿಯಾಶೀಲರಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಗಳಿಗೆ ದಾರಿ ತೋರುತ್ತಾರೆ. ಅಂತಹ ಬದಲಾವಣೆಗೆ ಜನರನ್ನು ಸಿದ್ಧಪಡಿಸಿದ ನಂತರವೇ ಇದನ್ನು ಮಾಡಬೇಕು. ಹಾಗಲ್ಲದೇ ಸರ್ವಾಧಿಕಾರಿಗಳಿಂದ ಆಳಲ್ಪಟ್ಟ ಸಮಾಜಗಳಾದರೆ. ಅವು ಶಕ್ತಿಯುತವಾದ ಕ್ರಾಂತಿಕಾರಿ ಪಕ್ಷಗಳ ರೂಪದಲ್ಲಿರಬಹುದು ಅಥವಾ ಸರ್ವಾಧಿಕಾರಿಯೇ ಇರಬಹುದು. ಈ ಪರಮೋಚ್ಚ ಆಳುವವರು ವಿಧಿಸುವ ಕಾನೂನೇ ಕೆಲವು ಸಲ ಸಮಾಜದ ರಚನೆ ಮತ್ತು ದೃಷ್ಟಿಕೋನಗಳಲ್ಲಿ ಬಹಳ ಆಮೂಲಾಗ್ರ ಸ್ವರೂಪದ ಬದಲಾವಣೆಗಳನ್ನುಂಟುಮಾಡಬಹುದು.

ಅಮೆರಿಕದಲ್ಲಿ ಗುಲಾಮಗಿರಿಯನ್ನು ರದ್ದುಮಾಡಿ ಸಮಾಜದಲ್ಲಿ ಮಹತ್ತರವಾದ ಬದಲಾವಣೆಯನ್ನು ಮಾಡಿದ ಕತೆಯೇ ಕಾನೂನು ಮತ್ತು ಸಾಮಾಜಿಕ ಮೌಲ್ಯಗಳ ನಡುವಣ ಪರಸ್ಪರ ಕ್ರಿಯೆಗೆ ಸ್ಪಷ್ಟವಾದ ಉದಾಹರಣೆಯಾಗುತ್ತದೆ. ಜನಸಂಖ್ಯೆಯಲ್ಲಿ ಬಹುತೇಕ ಮಂದಿ ಮನುಷ್ಯರನ್ನು ಪದಾರ್ಥಗಳಂತೆ ಮಾರಾಟ

ಮಾಡುವುದಕ್ಕೆ ಮತದ ಮತ್ತು ಕ್ರೈಸ್ತಮತೀಯ ದೃಷ್ಟಿಗಳಿಂದ ವಿರೋಧಿಸಿದ್ದರು. ದಕ್ಷಿಣದ ಅನೇಕ ರಾಜ್ಯಗಳ ಆರ್ಥಿಕ ವ್ಯವಸ್ಥೆ ಗುಲಾಮಗಿರಿಯನ್ನು ಮುಂದುವರಿಸಿಕೊಂಡು ಹೋಗುವುದನ್ನೇ ಅವಲಂಬಿಸಿತ್ತು. ಅಮೆರಿಕ ಸಂಯುಕ್ತ ಸಂಸ್ಥಾನಗಳ ವರಿಷ್ಠ ನ್ಯಾಯಾಲಯ ಆಗಿನ ಮುಖ್ಯ ನ್ಯಾಯಾಧೀಶರಾಗಿದ್ದ ಟ್ಯಾನಿ ದಕ್ಷಿಣ ರಾಜ್ಯಗಳಿಂದ ತಪ್ಪಿಸಿಕೊಂಡಿದ್ದ ನೀಗ್ರೋಗಳಿಗೆ ಪೌರಹಕ್ಕುಗಳನ್ನು ನಿರಾಕರಿಸಿದ್ದರು. ಅಮೆರಿಕ ಸಂಯುಕ್ತ ಸಂಸ್ಥಾನಗಳ ಖ್ಯಾತ ಅಧ್ಯಕ್ಷ ಅಬ್ರಹಾಂ ಲಿಂಕನ್, ಅಂತರ್ ಯುದ್ಧದ ಸಮಯವನ್ನು ಉಪಯೋಗಿಸಿ ಗುಲಾಮರನ್ನು ಮುಕ್ತಗೊಳಿಸಿದರು. ಅಬ್ರಹಾಂ ಲಿಂಕನ್ ಗುಲಾಮಗಿರಿಗೆ ಶತ್ರುವಾಗಿದ್ದರೂ, ಅವನು ಗುಲಾಮಗಿರಿ ರದ್ಧತಿಪರವಾಗಿರಲಿಲ್ಲ. ಲಿಂಕನ್ ಹೇಳಿದ "ಹೋರಾಟದಲ್ಲಿ ತನ್ನ ಪ್ರಮುಖ ಉದ್ದೇಶ ಒಕ್ಕೂಟವನ್ನು ರಕ್ಷಿಸುವುದೇ ಆಗಿತ್ತು. ಗುಲಾಮಗಿರಿಯನ್ನು ಉಳಿಸುವುದಾಗಲೀ, ನಾಶಮಾಡುವುದಾಗಲೀ ಖಂಡಿತ ಅಲ್ಲ. ಗುಲಾಮರನ್ನು ಮುಕ್ತಗೊಳಿಸದೇ ಒಕ್ಕೂಟವನ್ನು ಉಳಿಸಬಹುದಾಗಿದ್ದರೆ ನಾನು ಅದನ್ನೇ ಮಾಡುತ್ತಿದ್ದೆ. ಎಲ್ಲಾ ಗುಲಾಮರನ್ನು ಮುಕ್ತಗೊಳಿಸುವುದರಿಂದ ಒಕ್ಕೂಟವನ್ನು ಉಳಿಸಬಹುದಾಗಿದ್ದರೆ ನಾನು ಅದನ್ನೇ ಮಾಡುತ್ತಿದ್ದೆ." ಯುದ್ಧವನ್ನು ಗೆದ್ದು ಒಕ್ಕೂಟವನ್ನು ಉಳಿಸಿಕೊಳ್ಳಬೇಕಾದರೆ ಗುಲಾಮರನ್ನು ಮುಕ್ತಗೊಳಿಸಲೇ ಬೇಕೆಂಬುದನ್ನು ಲಿಂಕನ್ 1862ರ ಬೇಸಿಗೆಯ ವೇಳೆಗೆ ಮನಗಂಡರು. 1863ರ ಹೊಸವರ್ಷದ ದಿನ ಗುಲಾಮರೆಲ್ಲರ ವಿಮುಕ್ತಿಯನ್ನು "ಸಂವಿಧಾನದಿಂದ ಅಧಿಕೃತವಾಗಿ ಸೈನ್ಯದ ಆವಶ್ಯಕತೆಯ ದೃಷ್ಟಿಯಿಂದ ಒಂದು ನ್ಯಾಯಯುತ ಕ್ರಿಯೆ" ಯಾಗಿ ಘೋಷಿಸಲಾಯಿತು. ಸ್ವಾತಂತ್ರ್ಯಾನಂತರದ ಅಮೆರಿಕದ ಇತಿಹಾಸದ ಯಾವುದೇ ಪ್ರಸಂಗಕ್ಕಿಂತ, ಮಾನವ ಸಂಬಂಧಗಳ ವಿಷಯದಲ್ಲಿ ನಿಗೂಢವಾಗಿ ಹೆಚ್ಚು ಕ್ರಾಂತಿಕಾರಿಯಾಗಿರುವ ಈ ಘೋಷಣೆ ಅಂತರ್ ಯುದ್ಧವನ್ನು ಒಂದು ಧರ್ಮಯುದ್ಧದ ಘನತೆಗೇರಿಸಿತೆಂದು ಹೇಳಲಾಗಿದೆ. ಘೋಷಣೆ ಮತ್ತು ಹದಿಮೂರನೆಯ ತಿದ್ದುಪಡಿಯಿಂದ ಅದರ ಸ್ಥಿರೀಕರಣ, ಒಕ್ಕೂಟವನ್ನು ರಕ್ಷಿಸುವ ಅಗತ್ಯತೆಯಿಂದ ಪ್ರೇರಿತವಾಗಿ ಸಮಾಜದಲ್ಲಿ ಐತಿಹಾಸಿಕ ಬದಲಾವಣೆ ಮತ್ತು ಅದರ ಮಾನವೀಯ ಮೌಲ್ಯಗಳಲ್ಲಿಯೂ ಬದಲಾವಣೆಯನ್ನುಂಟುಮಾಡಿತು.

ಪ್ರಗತಿಶೀಲ ಸಮಾಜಗಳು ಸ್ಥಾನಮಾನದಿಂದ ಕರಾರಿನೆಡೆಗೆ ಅಭಿವೃದ್ಧಿ ಹೊಂದಿವೆಯೆಂಬ ಅಭಿಪ್ರಾಯವನ್ನು ಮೇಯ್ನ್ ವ್ಯಕ್ತಪಡಿಸಿದ್ದಾನೆ. ಅಭಿವೃದ್ಧಿ ಹೊಂದುತ್ತಿರುವ ಕೈಗಾರಿಕಾ ಸಮಾಜಕ್ಕೆ, ಮಾನವರು ಮತ್ತು ಸಮಾಜಗಳು ಸ್ವತಂತ್ರವಾಗಿ ಚಲಿಸಲು, ಕರಾರು ಒಂದು ನ್ಯಾಯಯುತ ಉಪಕರಣವನ್ನು ಒದಗಿಸಿತು..... ವೈಯಕ್ತಿಕ ತೀರ್ಮಾನಗಳಿಂದ ಹೊರಗಿರುವ ಸಂಬಂಧಗಳು ಮತ್ತು



ಸ್ಥಿತಿಗಳಿಂದ ನಿರ್ಧಾರಿತವಾದ ಕಾನೂನುಬದ್ಧ ಸ್ಥಾನಮಾನಕ್ಕೆ ಬದಲಾಗಿ ಕರಾರು ವ್ಯಕ್ತಿಗೆ ಉದ್ಯೋಗ ನೀಡುವ ದೇಶವನ್ನು ಬದಲಾಯಿಸಲು ವ್ಯಕ್ತಿಗೆ ಅವಕಾಶ ಮಾಡಿಕೊಡುತ್ತದೆ. ಗುಲಾಮಗಿರಿ ಮತ್ತು ವ್ಯಕ್ತಿ ಸ್ವಾತಂತ್ರ್ಯದ ನಡುವಣ ಭಾವನಾತ್ಮಕ ಹೋರಾಟದ ಹಿಂದೆ ಸ್ಥಾನಮಾನ ಮತ್ತು ಕರಾರಿನ ನಡುವಣ ಸ್ಪರ್ಧೆ ಇದೆ. ದಕ್ಷಿಣದ ಸ್ಥಾವರ ಗ್ರಾಮೀಣ ಮತ್ತು ಪಿತೃಪ್ರಧಾನ ಸಮಾಜ ಶ್ರೇಣೀಕೃತ ಅಚಲತೆಯನ್ನು ಅಪೇಕ್ಷಿಸಿತು. ಸಾಮಾಜಿಕ ಪ್ರಮಾಣದಲ್ಲಿ ಆಸ್ತಿಯ ಒಂದು ಭಾಗವಾದ ಗುಲಾಮ, ಕೆಳಸ್ತರದಲ್ಲಿದ್ದರೂ, ಅವನ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಅನೇಕ ವೇಳೆ ಚಲನಶೀಲ ಮತ್ತು ಸ್ವತಂತ್ರ ಆರ್ಥಿಕ ಸಮಾಜದಡಿಯಲ್ಲಿರುವವರಿಗಿಂತ ಉತ್ತಮವಾಗಿತ್ತು. ಇದನ್ನೇ ಔದ್ಯಮೀಕರಣಗೊಂಡ ವ್ಯಾಪಾರೀ ಮನೋಭಾವವನ್ನು ಉತ್ತರ ಬಯಸಿದ್ದು ಮತ್ತು ಸಾಧಿಸಿದ್ದು.

ಇತ್ತೀಚಿನ ವರ್ಷಗಳಲ್ಲಿ ನೀಗ್ರೋವಿನ ಸ್ಥಾನಮಾನದಲ್ಲಿ ರಾಷ್ಟ್ರದಲ್ಲಿ ಮಹತ್ತರ ಸಾಮಾಜಿಕ ಪರಿವರ್ತನೆಯನ್ನು ತರುವಲ್ಲಿ ಸಂಯುಕ್ತ ಸಂಸ್ಥಾನದ ವರಿಷ್ಠ ನ್ಯಾಯಾಲಯ ಸಾಧನವಾಗಿದೆ. ಬದಲಾಗುತ್ತಿರುವ ಸಾಮಾಜಿಕ ಸ್ಥಿತಿ ಮತ್ತು ಅಭಿಪ್ರಾಯದೊಡನೆ ಸಮನಾಗಿ ಹೆಜ್ಜೆ ಹಾಕುತ್ತಾ ಕ್ರಮೇಣ ಹಾಗೂ ಹಂತ ಹಂತವಾಗಿ ವರಿಷ್ಠ ನ್ಯಾಯಾಲಯ ಮುಂದುವರಿದಿದೆ. ರಾಜ್ಯಗಳ ಪ್ರತ್ಯೇಕತಾ ಶಾಸನಗಳಲ್ಲಿ "ಸಮ, ಆದರೆ ಬೇರೆ" ಸೂತ್ರ ಮಾರ್ಗದರ್ಶಕ ತತ್ವವಾಗಿ 1896ರಲ್ಲಿ ಅಂಗೀಕೃತವಾಯಿತು. ಬಿಳಿಯ ಮಕ್ಕಳಿಗೆ ಶಾಲೆಗಳಲ್ಲಿ ಒದಗಿಸುವ ಸೌಲಭ್ಯಗಳನ್ನು ಪ್ರತ್ಯೇಕ ಶಾಲೆಗಳಲ್ಲಿ ನೀಗ್ರೋಗಳ ಮಕ್ಕಳಿಗೂ ಒದಗಿಸಿದ್ದೇ ಆದಲ್ಲಿ ಅಮೆರಿಕ ಸಂವಿಧಾನದಲ್ಲಿ ಅಳವಡಿಸಿರುವ ಸಮಾನತಾತತ್ವದ ಆವಶ್ಯಕತೆಗಳನ್ನು ಪೂರೈಸಿದಂತಾಗುತ್ತದೆಯೆಂಬ ಅಭಿಪ್ರಾಯವಿತ್ತು. 1954ರಲ್ಲಿ ನ್ಯಾಯಾಲಯ ಸಂಪೂರ್ಣವಾಗಿ ಅದರ ಅಭಿಪ್ರಾಯವನ್ನು ಬದಲಾಯಿಸಿತು. ಸಾರ್ವಜನಿಕ ಶಿಕ್ಷಣಕ್ಷೇತ್ರದಲ್ಲಿ "ಬೇರೆ, ಆದರೆ ಸಮಾನ" ತತ್ವಕ್ಕೆ ಸ್ಥಳವಿಲ್ಲವೆಂದು ನ್ಯಾಯಾಲಯ ತೀರ್ಪು ನೀಡಿತು. ಪ್ರತ್ಯೇಕ ಶೈಕ್ಷಣಿಕ ಸೌಲಭ್ಯಗಳೇ ಮೂಲತಃ ಅಸಮಾನವೆಂದು ನ್ಯಾಯಾಲಯ ಹೇಳಿತು. ನ್ಯಾಯಾಲಯದ ಅಭಿಪ್ರಾಯದಲ್ಲಿ ಆಮೂಲಾಗ್ರ ಬದಲಾವಣೆಯಾಗಲು ಪ್ರಮುಖ ಕಾರಣಗಳನ್ನು ಗುರುತಿಸಲಾಗಿದೆ. ಅವೇನೆಂದರೆ (1896 ರಿಂದ 1954) ಮಧ್ಯಂತರ ಅವಧಿಯಲ್ಲಿ ರಾಷ್ಟ್ರದಲ್ಲೇ ಮಹತ್ತರ ಬದಲಾವಣೆಗಳಾದವು. ಅವೇ ನೀಗ್ರೋಗಳ ಶೈಕ್ಷಣಿಕ ಸ್ಥಾನಮಾನದಲ್ಲಿ ಮತ್ತು ಅವರೆಡೆಗೆ ಜವಾಬ್ದಾರಿಯುತ ವ್ಯಕ್ತಿಗಳ ಮನೋಭಾವದಲ್ಲಿ ಕ್ರಮೇಣ ಆದ ಬದಲಾವಣೆಗಳ, ಪ್ರಮುಖ ಸಾಮಾಜಿಕ ಪಂಗಡಗಳು, ಅಂದರೆ, ಸಶಸ್ತ್ರದಳಗಳು, ಚರ್ಚ್‌ಗಳು ಮತ್ತು ವಿಶ್ವವಿದ್ಯಾನಿಲಯಗಳು ಮತ್ತು ಕೊನೆಯ ಪಕ್ಷ ಸುವ್ಯವಸ್ಥಿತ

ಕಾರ್ಮಿಕರ ಒಂದು ಭಾಗದಲ್ಲಿ ಆದ ಬದಲಾವಣೆಗಳೇ ಮುಖ್ಯ ಕಾರಣಗಳು. ಅಮೆರಿಕದ ಸಮಾಜದ ಬದಲಾದ ಪರಿಸ್ಥಿತಿಗಳಿಗೆ ಸೂಕ್ತವಾಗುವಂತೆ ಕಾಲದಿಂದ ಕಾಲಕ್ಕೆ ಅಮೆರಿಕದ ಸಂವಿಧಾನಕ್ಕೆ ವಿಶ್ಲೇಷಣೆ ಮಾಡುವುದರಲ್ಲಿ ಹಲವಾರು ಬದಲಾವಣೆಗಳನ್ನು ಈ ಹಲವಾರು ವರ್ಷಗಳಲ್ಲಿ ಮಾಡಿ ವರಿಷ್ಠ ನ್ಯಾಯಾಲಯ ಪ್ರಮುಖವಾದ ಪಾತ್ರವನ್ನು ವಹಿಸಿರುವ ಬಗ್ಗೆಯೂ ನಾವೀಗ ಗಮನಹರಿಸಬೇಕು. ಶಾಸನಸಭೆಗಳಿಗಿಂತಲೂ ನ್ಯಾಯಾಲಯಗಳು ಸಮಾಜವನ್ನು ರೂಪಿಸುವುದರಲ್ಲಿ ಹೆಚ್ಚಿನ ಅನುಕೂಲಕರ ಸ್ಥಾನದಲ್ಲಿರುವುದರಿಂದ, ಒಂದು ದೇಶದಲ್ಲಿ ನ್ಯಾಯಾಲಯಗಳು ವಿಶಿಷ್ಟವಾದ ಸ್ಥಾನವನ್ನು ಪಡೆಯುತ್ತವೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಶಾಸನ ರಚನೆ ವಿಧಿಸಿರುವ ಅನೇಕ ಹಂತಗಳನ್ನು ಹಾದು ಹೋಗಬೇಕಾಗುತ್ತದೆ ಮತ್ತು ಕೆಲವು ಸಲ ಜನರ ಒಪ್ಪಿಗೆಗೆ ಒಪ್ಪಿಸಲ್ಪಡಬೇಕಾಗುತ್ತದೆ ಅಥವಾ ಜನರಿಂದ ಚುನಾಯಿತರಾದ ಪ್ರತಿನಿಧಿಗಳಿರುವ ಸದನಗಳ ಮತಕ್ಕೆ ಒಪ್ಪಿಸಲ್ಪಡಬೇಕಾಗುತ್ತದೆ. ಚುನಾಯಿಸುವವರ ಮತಗಳನ್ನು ತಾವು ಅಧಿಕಾರದಲ್ಲಿ ಮುಂದುವರಿಯಲು ಅವಲಂಬಿಸಲೇಬೇಕಾದ ಸರ್ಕಾರಗಳು ತಾವು ಅಪೇಕ್ಷಣೀಯವೆಂದು ಪರಿಗಣಿಸುವ ಸುಧಾರಣೆಗಳನ್ನು ತರಲು ಹಿಂತೆಗೆಯುತ್ತವೆ. ಕಾರಣ, ಜನತೆ ಇದನ್ನು ವಿರೋಧಿಸಬಹುದೆಂಬ ಭೀತಿ. ಈ ದೃಷ್ಟಿಯಲ್ಲಿ ನೋಡಿದಾಗ ನ್ಯಾಯಾಲಯಗಳು ಒಳ್ಳೆಯದಾದ ಸ್ಥಾನದಲ್ಲಿಯೇ ಇವೆ. ನ್ಯಾಯಾಲಯಗಳು ಕಾನೂನನ್ನು ಬದಲಾಯಿಸುವುದಿಲ್ಲ. ಪ್ರಚಲಿತ ಕಾನೂನಿಗೆ ಸರಿಯಾದ ವಿಶ್ಲೇಷಣೆ ಅಥವಾ ಅರ್ಥ ವಿವರಣೆ ನೀಡುತ್ತವೆಂದು ಆಗಾಗ್ಗೆ ಹೇಳಿದರೂ, ಅರ್ಥ ವಿವರಣೆ ನೀಡುವ ನೆಪದಲ್ಲಿ ವಾಸ್ತವಿಕವಾಗಿ ಕಾನೂನಿನಲ್ಲಿ ಬದಲಾವಣೆಗಳನ್ನು ಮಾಡುತ್ತಾರೆ. ಆಂಗ್ಲೋ- ಸ್ಯಾಕ್ಸನ್ ಮಾದರಿಯ ನ್ಯಾಯತತ್ವ ವ್ಯವಸ್ಥೆಯನ್ನು ಅನುಸರಿಸುವ ದೇಶಗಳ ನ್ಯಾಯಾಲಯದ ತೀರ್ಪುಗಳು ಕಾನೂನಿನ ಸ್ಪಷ್ಟೀಕರಣಗಳಾಗಿ ಪರಿಗಣಿಸಲ್ಪಟ್ಟ ಸಮಾಜಕ್ಕೆ ಅಗತ್ಯವಾದ ಬದಲಾವಣೆಗಳನ್ನು ಕಾನೂನಿನಲ್ಲಿ ತರುವಲ್ಲಿ ಆಗಿಂದಾಗ್ಗೆ ಯಶಸ್ವಿಯಾಗಿವೆ. ಇದಕ್ಕೇ "ನ್ಯಾಯಾಲಯದ ಶಾಸನ ರಚನೆ"ಯೆಂದು ಮನ್ನಣೆ ನೀಡಲಾಗಿದೆ. ಆದರೆ ಅಂತಹ ಶಾಸನ ರಚನೆಯ ವ್ಯಾಪ್ತಿ ಮತ್ತು ಕ್ಷೇತ್ರ ತುಂಬಾ ಚಿಕ್ಕದೆಂದು ನಾವು ಒಪ್ಪಲೇಬೇಕು. ಕಾರಣ, ಶಾಸನಾಂಗಗಳ ಶಾಸನ ರಚನೆಯ ವ್ಯಾಪ್ತಿ ಮತ್ತು ಕ್ಷೇತ್ರ ತುಂಬಾ ವಿಶಾಲವಾದದ್ದು.

ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಬದಲಾವಣೆಗಳು ಯಾವ ರೀತಿ ಕಾನೂನಿನ ಮೇಲೆ ಮತ್ತು ಕಾನೂನಿನ ಕಲ್ಪನೆಗಳ ಮೇಲೆ ಪ್ರಭಾವ ಬೀರುತ್ತವೆಂಬುದು ಸಾಮಾಜಿಕ ಕಲ್ಪನೆಯಾದ ಕುಟುಂಬಕ್ಕೆ ಸಂಬಂಧಿಸಿದ ಸುಧಾರಣೆಗಳಿಂದ ಸಾಕಷ್ಟು ವಿವರಿಸಲ್ಪಟ್ಟಿದೆ. ಔದ್ಯಮೀಕರಣಗೊಂಡ ಸಮಾಜದ ಬೆಳವಣಿಗೆಗೆ ಮುಂಚೆ ಕುಟುಂಬ



ಒಂದು ಚಿಕ್ಕ ಘಟಕವಾಗಿದ್ದು, ವ್ಯಾಪಾರ ವಿನಿಮಯಗಳ ಸಂಬಂಧವೇ ಅದಕ್ಕಿರಲಿಲ್ಲ. ತಂದೆಯೇ ಅದರ ಮುಖ್ಯಸ್ಥನಾಗಿ ಪ್ರಧಾನ ಸ್ಥಾನದಲ್ಲಿದ್ದು, ತಾಯಿಯಾದವಳು ಗೃಹಕೃತ್ಯದಲ್ಲಿ ಪ್ರಭಾವಿಯಾಗಿದ್ದಳು. ಆಧುನಿಕ ಔದ್ಯಮೀಕರಣಗೊಂಡ ಸಮಾಜದ ವ್ಯವಸ್ಥೆ ಸಾಮಾಜಿಕ ಘಟಕವೆನಿಸಿದ್ದ ಕುಟುಂಬವನ್ನು ಬಹಳಮಟ್ಟಿಗೆ ದುರ್ಬಲಗೊಳಿಸಿದೆ. ಆಧುನಿಕ ಸಮಾಜದ ನಗರೀಕರಣದಿಂದ ಮತ್ತು ಬೃಹತ್ ಪಟ್ಟಣಗಳ ಬೆಳವಣಿಗೆಯಿಂದ ಈ ಅವನತಿ ಬಹಳ ಶೀಘ್ರಗತಿಯಲ್ಲೇ ನಡೆದಿದೆ. ಮತೀಯ ಭಾವನೆಗಳ ಕುಂದುತ್ತಿರುವ ಪ್ರಭಾವ ಮತ್ತು ವಿಜ್ಞಾನ ಹಾಗು ತಾಂತ್ರಿಕ ಕ್ಷೇತ್ರಗಳಲ್ಲಿ ಆಗಿರುವ ಹೊಸ ಬೆಳವಣಿಗೆಗಳ ಮೇಲೆ ಆಧಾರಿತವಾದ ವೈಚಾರಿಕ ನಂಬಿಕೆಗಳ ಬೆಳವಣಿಗೆ ಕೌಟುಂಬಿಕ ಸಂಬಂಧಗಳ ಬಲದ ಮೇಲೆ ಪರಿಣಾಮವನ್ನುಂಟುಮಾಡಿವೆ. ಹೊಸ ನಂಬಿಕೆಗಳು ಮತ್ತು ಸಾಮಾಜಿಕ ಧ್ಯೇಯಗಳಿಗೆ ಕಾರಣವಾಗಿರುವ ಈ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳು, ವಿವಾಹಕ್ಕೆ ಸಂಬಂಧಿಸಿದ ಕಾನೂನುಗಳಲ್ಲಿ ಗಮನಾರ್ಹವಾದ ಬದಲಾವಣೆಗಳನ್ನುಂಟು ಮಾಡಿವೆ. ಅನೇಕ ಕಾನೂನಿನ ವ್ಯವಸ್ಥೆಗಳಲ್ಲಿ ಒಡೆಯಲಾಗದ್ದೆಂದು ಪರಿಗಣಿಸಲ್ಪಟ್ಟಿರುವ ವಿವಾಹಬಂಧನ, ಈಗ ಅನೇಕ ಕಾರಣಗಳಿಂದಾಗಿ ಬೇರ್ಪಡಿಸಲ್ಪಡಬಹುದು. ಅಷ್ಟೇ ಅಲ್ಲದೇ, ಕೆಲವು ಸಲ ಪತಿ ಪತ್ನಿಯರ ಇಷ್ಟಕ್ಕನುಗುಣವಾಗಿಯೂ ವಿವಾಹ ವಿಚ್ಛೇದನವಾಗಬಹುದು. ಬದಲಾಗುತ್ತಿರುವ ಆಧುನಿಕ ಸಾಮಾಜಿಕ ಸ್ಥಿತಿಗತಿಗಳ ಪರಿಣಾಮವಾಗಿ ಸಮಾಜದಲ್ಲಿ ಮಹಿಳಾ ವಿಮೋಚನೆ ಅನಿವಾರ್ಯವಾಗಿದೆ. ಅದರ ಪರಿಣಾಮವಾಗಿ ಸ್ತ್ರೀಯರ ಆಸ್ತಿಯ ಹಕ್ಕುಗಳ ಮೇಲಣ ಅನೇಕ ನಿರ್ಬಂಧಗಳು ಸಡಿಲಿಸಲ್ಪಟ್ಟಿವೆ ಅಥವಾ ರದ್ದಾಗಿವೆ.

ಅಪವಾದಾತ್ಮಕ ಪ್ರಸಂಗಗಳ ಮತ್ತು ಪೋಷಕರ ಆದೇಶ ವಿವಾಹವಿಚ್ಛೇದನಾ ಪತ್ರವನ್ನು ಹೊರತುಪಡಿಸಿ ಇನ್ನಾವ ಸಂದರ್ಭಗಳಲ್ಲೂ ವಿವಾಹ ವಿಚ್ಛೇದನಕ್ಕೆ ಮನ್ನಣೆ ನೀಡಲು, ಕ್ಯಾಥೋಲಿಕ್ ಚರ್ಚ್ ನಿರಂತರವಾಗಿ ನಿರಾಕರಿಸಿದೆ. ಸಮಾಜದಲ್ಲಿ ಆಧುನಿಕ ಮಹಿಳೆಯ ವಿಮೋಚನೆಯ ಸ್ಪಷ್ಟವಾದ ಫಲವಾಗಿ ಕ್ಯಾಥೋಲಿಕ್ ಪಂಥೀಯವಲ್ಲದ ದೇಶಗಳಲ್ಲಿ ವಿವಾಹ ವಿಚ್ಛೇದನದ ಕಾರಣಗಳನ್ನು ಕ್ರಮೇಣ ವಿಶಾಲಗೊಳಿಸಲಾಗಿದೆ. ಇದಲ್ಲದೇ ಮತೀಯ ಮತ್ತು ಸಾಮಾಜಿಕ ನಿಷೇಧಗಳಲ್ಲಿ ಅನೇಕವುಗಳಲ್ಲಿ ಕಾಠಿಣ್ಯ ಕಡಿಮೆಯಾಗುತ್ತಿರುವುದು ಕ್ಯಾಥೋಲಿಕ್ ಮತದ ಆಂತರಿಕ ಮಂಡಲಿಗಳ ಮೇಲೆ ಪರಿಣಾಮವನ್ನುಂಟು ಮಾಡಿವೆಯೆಂದು ಹೇಳಲಾಗಿದೆ. ಸಾಮಾಜಿಕ ಪರಿಸರ ಮತ್ತು ಆಚರಣೆಗಳಲ್ಲಿ ಮೇಲಿಂದ ಮೇಲೆ ಆಗುತ್ತಿರುವ ಬದಲಾವಣೆಗಳನ್ನು ಸಕಾಲದಲ್ಲಿ ಗುರುತಿಸದಿದ್ದರೆ, ಚರ್ಚಿನ ಮತೀಯ ಮತ್ತು ನ್ಯಾಯ ಸಿದ್ಧಾಂತಗಳು ಮತ್ತು ಜೀವನದ ವಾಸ್ತವಿಕ ಸಂಗತಿಗಳ ನಡುವೆ ಕಾಲದ

ಅಂತರ ಅನಿವಾರ್ಯವಾಗಿ ಇರಲೇಬೇಕಾಗಿಬರುತ್ತದೆ. ಅಂತಿಮವಾಗಿ ಅದರ ಫಲವಾಗಿ ನ್ಯಾಯಸಿದ್ಧಾಂತ ತಿರಸ್ಕಾರಕ್ಕೆ ಮತ್ತು ಅಲಕ್ಷ್ಯಕ್ಕೆ ಗುರಿಯಾಗುತ್ತದೆ.

ಶರಿಯತ್ ಕಾನೂನಿನ ಮೇಲೆ ಆಧಾರಿತವಾಗಿರುವ ಮುಸ್ಲಿಂ ಪ್ರಪಂಚದ ಸುಭದ್ರವಾದ ಮತ್ತು ಸವ್ಯವಸ್ಥಿತವಾದ ಸಂಪ್ರದಾಯಬದ್ಧತೆಯೂ, ಮುಸ್ಲಿಂ ದೇಶಗಳನ್ನು ಸುತ್ತುವರಿದಿರುವ ಸಮಾಜಗಳಲ್ಲಿನ ಸಾಮಾಜಿಕ ಬದಲಾವಣೆಗಳಿಂದ ಪ್ರಭಾವಿತವಾಗುತ್ತಿದೆ. ಭಾಗಶಃ ಶರಿಯತ್ ಮೇಲೆ ಮತ್ತು ಭಾಗಶಃ ಆಧುನಿಕ ದೇಶಗಳ ನ್ಯಾಯತತ್ತ್ವದ ಮೇಲೆ ಆಧಾರಿತವಾಗಿರುವ ಸುಧಾರಣಾ ಶಾಸನಗಳನ್ನು ಕೆಲವು ಇಸ್ಲಾಮೀ ರಾಜ್ಯಗಳು ಜಾರಿಗೆ ತಂದಿವೆ. ಮುಸ್ಲಿಮರ ಕೌಟುಂಬಿಕ ನ್ಯಾಯಕ್ಷೇತ್ರದಲ್ಲೂ ಬದಲಾವಣೆಗಳಾಗಿವೆ. ಅದರಲ್ಲೂ ಮಹಿಳೆಯರ ಸ್ಥಾನಮಾನದ ವಿಷಯದಲ್ಲಿ ಈ ಬದಲಾವಣೆಗಳು ಅತ್ಯಂತ ಗಮನಾರ್ಹವಾಗಿವೆ. ಈ ಬದಲಾವಣೆಗಳಲ್ಲಿ ಹಲವು, ನ್ಯಾಯಾಲಯಗಳು ಹಿಂದಿನ ದಿನಗಳಲ್ಲಿ ಅಂಗೀಕರಿಸಿದ್ದಕ್ಕಿಂತ ಹೆಚ್ಚು ಉದಾರವಾದ ವಿಶ್ಲೇಷಣೆಯನ್ನು ಶರಿಯತ್ ಮೇಲೆ ಮಾಡಿ, ನೀಡಿದ ತೀರ್ಪುಗಳ ಆಧಾರದ ಮೇಲೆ ಆಗಿರುವುದು ನಿಜಕ್ಕೂ ಗಮನಾರ್ಹ ಮತ್ತು ಆಸಕ್ತಿ ಕೆರಳಿಸುವಂತಹುದು. ಹೊಸ ಸಾಮಾಜಿಕ ಭಾವನೆಗಳು ಮತ್ತು ಅಭಿಪ್ರಾಯಗಳಿಗನುಗುಣವಾಗಿ ಕಾನೂನನ್ನು ರೂಪಿಸುವುದಕ್ಕೋಸ್ಕರ ಹಿಂದೂ ಮತ್ತು ಮುಸ್ಲಿಂ ಕಾನೂನಿನ ಭಾಷ್ಯಕಾರರು ಶತಮಾನಗಳಿಂದ ವಿಶ್ಲೇಷಣೆಯ ನೆಪದಲ್ಲಿ ಕಾನೂನನ್ನು ಬದಲಾಯಿಸುವ ತಂತ್ರವನ್ನು ಉಪಯೋಗಿಸುತ್ತ ಬಂದಿದ್ದಾರೆ.

ಅಸ್ತಿತ್ವದಲ್ಲಿರುವ ವಿಶಾಲವಾದ ಸಾಮಾಜಿಕ ಮೌಲ್ಯಗಳೊಡನೆ ಹೊಂದಾಣಿಕೆ ಇರುವಂತೆ ಕಾನೂನನ್ನು ಬದಲಾಯಿಸುವ ನಿದರ್ಶನಗಳನ್ನು ಇದುವರೆಗೆ ನಾವು ಕಂಡಿದ್ದೇವೆ. ಆದರೆ ದೂರದೃಷ್ಟಿಯುಳ್ಳ ಸಮಾಜದಲ್ಲಿನ ವ್ಯಕ್ತಿಗಳು ಅಥವಾ ಪಂಗಡಗಳು ಅವರು ಅಲ್ಪಸಂಖ್ಯೆಯಲ್ಲಿದ್ದರೂ ಸಹ, ಪ್ರಚಲಿತ ಸಾಮಾಜಿಕ ಭಾವನೆಗಳಿಗಿಂತಲೂ ಮುಂಚೆಯೇ ಕಾನೂನಿನಲ್ಲಿ ಬದಲಾವಣೆಗಳನ್ನು ಮಾಡಿ ತನ್ಮೂಲಕ ಸಮಾಜದ ಪ್ರಗತಿಯನ್ನು ತ್ವರಿತಗೊಳಿಸಿದ್ದಾರೆ. ಬಹುದೊಡ್ಡ ಜನಸಂಖ್ಯೆಯು ಗುಂಪಿನ ಅಭಿಪ್ರಾಯಗಳ, ಧಾಟಿಗೆ ಈ ರೀತಿಯಾಗಿ ಜಾರಿಗೊಳಿಸಲ್ಪಟ್ಟ ಕಾನೂನಿನ ಸುಧಾರಣೆಗಳು ವಿರೋಧವಾಗಿದ್ದರೆ, ತಮ್ಮ ಉದ್ದೇಶ ಸಾಧನೆ ತಮ್ಮ ಇತ್ತೀಚಿನ ಇತಿಹಾಸ ಕೆಲವು ಅಂತಹ ಪ್ರಯತ್ನಗಳಿಗೆ ಉದಾಹರಣೆಗಳನ್ನು ಒದಗಿಸುತ್ತದೆ. ನಮ್ಮ ಸಂವಿಧಾನ ಅಸ್ಪೃಶ್ಯತೆಯನ್ನು ರದ್ದುಮಾಡಿದೆ ಮತ್ತು ಅದನ್ನು ಶಿಕ್ಷಾರ್ಹವಾಗಿ ಮಾಡಿದೆ. ಇಲ್ಲಿ ಕಾನೂನು ಸಮಾಜವನ್ನು ಪ್ರಗತಿಯತ್ತ ಕೊಂಡೊಯ್ಯಲು ಪ್ರಯತ್ನಿಸಿದೆ. ಜನಾಂಗಕ್ಕೇ ದಾರಿದೀಪವಾಗಲು ಪ್ರಯತ್ನಿಸಿದೆ. ಕಾನೂನನ್ನು ಸಂವಿಧಾನದಲ್ಲಿ ಅಳವಡಿಸಿದ್ದರೂ



ಮತ್ತು ರಾಷ್ಟ್ರದ ಮುಖಂಡರ ಮತ್ತು ಪ್ರಬಲವಾದ ಆಳುವ ಪಕ್ಷದ ಬೆಂಬಲವನ್ನು ಹೊಂದಿದ್ದರೂ ಹಿಂದೂ ಸಮಾಜದ ಬಹು ದೊಡ್ಡ ಸಂಖ್ಯೆಯ ಒಪ್ಪಿಗೆಯನ್ನು ಪಡೆದಿದೆಯೆಂದು ಹೇಳಲಾಗದು. ಹುಡುಗ ಹುಡುಗಿಯರ ಮದುವೆಗೆ ಕನಿಷ್ಠ ವಯೋಮಿತಿಯನ್ನು ವಿಧಿಸಿರುವ ಕಾನೂನಿನ ಬಗ್ಗೆಯೂ ಇದೇ ತರಹದ ಟೀಕೆಯನ್ನು ಮಾಡಬಹುದು.

ಈ ದೃಷ್ಟಿಯಲ್ಲಿ, ಸರ್ವಾಧಿಕಾರೀ ಸರ್ಕಾರಗಳು ಭಿನ್ನವಾದ ಮತ್ತು ಅನುಕೂಲಕರವಾದ ಆಧಾರದ ಮೇಲೆ ನಿಲ್ಲುತ್ತವೆ. ಸಾರ್ವಜನಿಕ ಅಭಿಪ್ರಾಯಗಳಾಗಲೀ, ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳಾಗಲೀ ಅವರ ಕ್ರಿಯೆಗೆ ಅಡ್ಡ ಬರುವುದಿಲ್ಲ. ಸಮಾಜದಲ್ಲಿ ರೂಢಿಯಲ್ಲಿರುವ ಆಚರಣೆಗಳಿಗೆ ಸಂಪೂರ್ಣವಾಗಿ ಭಿನ್ನವಾದ ಧ್ಯೇಯಗಳು ಮತ್ತು ಆಚರಣೆಗಳನ್ನು ಕಾನೂನಿನ ಮತ್ತು ಸಂವಿಧಾನೀಯ ಬದಲಾವಣೆಗಳ ಮೂಲಕ ಬಲಾತ್ಕಾರವಾಗಿ ಜನಾಂಗದ ಮೇಲೆ ಹೇರಲು ಸಮರ್ಥರಾಗುತ್ತಾರೆ. ಆದರೆ ಇಂತಹ ದೇಶಗಳಲ್ಲೂ ಕಾನೂನಾಗಲೀ ಅಥವಾ ಡಿಕ್ರಿಯಾಗಲೀ ಜಾರಿಗೊಳಿಸಬಯಸುವ ಬದಲಾವಣೆಗಳು ಅನಿವಾರ್ಯವಾಗಿ ನಿರ್ದಿಷ್ಟವಾದ ಪರಿಮಾಣದಲ್ಲಿ ಸಾರ್ವಜನಿಕ ಅಭಿಪ್ರಾಯದಿಂದ ಪ್ರಭಾವಿತವಾಗುತ್ತವೆ. ಈ ಸರ್ಕಾರಗಳು ಅಂಗೀಕರಿಸುವ ಕಾನೂನಿನ ಕ್ರಮಗಳು, ಸಮಾಜದಿಂದ ಏನೇ ಆಗಲಿ ನಿಷ್ಕ್ರಿಯ ಒಪ್ಪಿಗೆಯನ್ನು ಪಡೆಯಲೇಬೇಕು ಮತ್ತು ತಮ್ಮೊಡನೆ ಸಮಾಜದ ಜ್ಞಾನವಂತರನ್ನು ಹೇಗಾದರೂ ಕೊಂಡೊಯ್ಯಬೇಕು. ಸೋವಿಯತ್ ಕಾನೂನಿನಲ್ಲಿ ಇತ್ತೀಚೆಗೆ ಆಗಿರುವ ಬದಲಾವಣೆಗಳು ಮುಕ್ತವಾದ ವೈವಾಹಿಕ ಬಂಧನದ ವಿಚ್ಛೇದನೆಯ ಮೂಲಭಾವನೆಯಿಂದ ನಿರ್ಗಮಿಸುವ ಪ್ರವೃತ್ತಿಯನ್ನು ಸ್ಪಷ್ಟವಾಗಿ ತೋರಿಸುತ್ತವೆ. ರಾಷ್ಟ್ರದ ಹಿತಾಸಕ್ತಿಗಳೇ ಪ್ರಧಾನವೆಂದು ಪರಿಗಣಿಸಲ್ಪಟ್ಟಿರುವ ಸೋವಿಯತ್ ರಾಷ್ಟ್ರದಲ್ಲಿ ಸರ್ವತಂತ್ರ ಸ್ವತಂತ್ರವಾದ ಸರ್ಕಾರ ರೂಪುಗೊಂಡಿದೆ. ಅನೇಕ ಕ್ಷೇತ್ರಗಳಲ್ಲಿ ಸೋವಿಯತ್ ಕಾನೂನು ವಿಕಸನಗೊಂಡಿರುವುದಕ್ಕೆ ನಿಸ್ಸಂಶಯವಾಗಿ ಬಹಳ ಮಟ್ಟಿಗೆ ರಾಷ್ಟ್ರದ ಸ್ವರೂಪದಲ್ಲಿ ಆಗಿರುವ ಬದಲಾವಣೆಯೇ ಕಾರಣ. ಆದರೆ ವಿವಾಹ ಬಂಧನಕ್ಕೆ ಸಂಬಂಧಿಸಿದಂತೆ ಭಾಗಶಃ ಹಳೆಯ ಭಾವನೆಗಳಿಗೆ ಹಿಂತಿರುಗಿರುವುದು, ವಿವಾಹ ವ್ಯವಸ್ಥೆಯ ಪ್ರಾಮುಖ್ಯತೆ ಮತ್ತು ಸೋವಿಯತ್ ಸಮಾಜಕ್ಕೆ ಅದರ ಅಗತ್ಯತೆ ನೀಡಿರುವ ಮಾನ್ಯತೆಯನ್ನು ಸೂಚಿಸುತ್ತದೆ. ಸಾಮಾಜಿಕ ಅಭಿಪ್ರಾಯಗಳು ಮತ್ತು ಸಂಸ್ಕೃತಿ ಪರಮಾಧಿಕಾರವುಳ್ಳ ಸರ್ಕಾರಗಳ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರುತ್ತವೆಂಬುದಕ್ಕೆ ಇದಕ್ಕಿಂತ ಮಹತ್ತರವಾದ ನಿದರ್ಶನವನ್ನು ನೀಡಲು ಸಾಧ್ಯವಿಲ್ಲ. ಭೂತಕಾಲದಿಂದ ಕ್ರಾಂತಿಕಾರಿಯಾದ ವಿಭಿನ್ನತೆಯನ್ನು ಹೊಂದಲು ನಿಶ್ಚಯಿಸಿದ್ದ

ಪರಮಾಧಿಕಾರವುಳ್ಳ ಸರ್ಕಾರವೂ ಇದಕ್ಕೆ ಹೊರತಾಗಲಿಲ್ಲ.

ಸಾಮಾಜಿಕ ವಿಕಸನದ ಹರಿಕಾರನಾಗಿ ಕಾನೂನಿಗೆ ಒಂದು ನಿರ್ದಿಷ್ಟವಾದ ಸ್ಥಾನವಿದೆ. ಆದರೆ ಅದು ಸಮಾಜದ ಪುನರ್ ನಿರ್ಮಾಣದಲ್ಲಿ ಸೀಮಿತ ಪಾತ್ರವನ್ನು ನಿರ್ವಹಿಸಬಹುದು. ಯಾವಾಗಲೂ ಸಮಾಜವನ್ನೇ ಹಿಂಬಾಲಿಸುವ ವಿಧೇಯನಾದ ಸೇವಕನ ಪಾತ್ರವನ್ನು ಅದು ಸಂಪೂರ್ಣವಾಗಿ ನಿರ್ವಹಿಸಬಾರದಾದರೂ, ಅದು ಯಜಮಾನನ ಪಾತ್ರವನ್ನು ಅದೇ ರೀತಿ ನಿರ್ವಹಿಸಲು ಸಾಧ್ಯವಿಲ್ಲ. ಭದ್ರತೆಯ ಸಂರಕ್ಷಣೆ ಮತ್ತು ಅವ್ಯವಸ್ಥತೆಯ ವಿರುದ್ಧ, ಭದ್ರತೆಯನ್ನು ಅಳವಡಿಸುವುದು ಒಂದು ಸಮಾಜದಲ್ಲಿ ಕಾನೂನಿನ ಮುಖ್ಯ ಕರ್ತವ್ಯಗಳಾಗಿವೆ. ಈ ಉದ್ದೇಶಗಳನ್ನು ಪೂರೈಸುವುದಕ್ಕಾಗಿ ಅದು ಯಾವಾಗಲೂ ಸಾಮಾಜಿಕ ಪರಿವರ್ತನೆಯನ್ನು ಗೌರವಿಸಲು ಸಿದ್ಧವಿರಬೇಕು ಮತ್ತು ಅದರೊಡನೆ ಮುನ್ನಡೆಯಬೇಕು. ಕಾನೂನು ಕೆಲವು ಸಲ ತಾನೇ ಪ್ರಗತಿಪರವಾಗಿ ಮುನ್ನಡೆದು ಸಮಾಜವನ್ನು ಪ್ರಗತಿ ಮತ್ತು ಸುಧಾರಣೆಯತ್ತ ಕೊಂಡೊಯ್ಯಬೇಕು. ಸಾಕಷ್ಟು ಮಟ್ಟಿಗೆ ಸಾರ್ವಜನಿಕ ಅಭಿಪ್ರಾಯ ಮತ್ತು ಸಾಮಾಜಿಕ ಮೌಲ್ಯಗಳ ಬದಲಾವಣೆಯಿಂದ, ಈ ಪಾತ್ರ ಅಗತ್ಯವಾಗಿ ನಿರ್ವಹಿಸಲ್ಪಡಬೇಕು. ಕಾನೂನು ಅವುಗಳನ್ನು ಉಲ್ಲಂಘಿಸಲಾಗದು. ಹಾಗೆ ಉಲ್ಲಂಘಿಸಿದರೆ, ಕಾನೂನು ತನ್ನ ಉದ್ದೇಶದಲ್ಲೇ ವಿಫಲಗೊಂಡಿದೆಯೆಂದು ಹೇಳಬಹುದು. ಕಾನೂನು ಮತ್ತು ಸಮಾಜದ ಸಾಂಸ್ಕೃತಿಕ ಮೌಲ್ಯಗಳ ನಡುವೆ ಸೂಕ್ಷ್ಮವಾದ ಮತ್ತು ನಿರಂತರವಾದ ಹೊಂದಾಣಿಕೆ ಮಾಡಲ್ಪಟ್ಟ ಸಮಸ್ಥಿತಿಯನ್ನು ಕಾಪಾಡಿಕೊಳ್ಳಬೇಕು. ಕಾನೂನು ಮತ್ತು ಸಾಮಾಜಿಕ ಸಂಸ್ಕೃತಿಗಳ ಮೌಲ್ಯಗಳ ಪೈಕಿ ಒಂದು ಇನ್ನೊಂದಕ್ಕಿಂತ ತುಂಬಾ ಹಿಂದೆ ಇರಬಾರದು. ಪ್ರಜಾಸತ್ತಾತ್ಮಕ ಸ್ವರೂಪದ ಸರ್ಕಾರದಡಿ, ಸಮಾಜವಾದಿ ರಾಷ್ಟ್ರವೊಂದನ್ನು ವಿಕಾಸಗೊಳಿಸಲು ಪ್ರಯತ್ನಿಸುತ್ತಿರುವ ನಮ್ಮಲ್ಲಿ ಶಾಸಕರಾದವರು ತುಂಬಾ ಕಷ್ಟಕರ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ನಮ್ಮ ಭಾರತದಂತಹ ರಾಷ್ಟ್ರದಲ್ಲಿ ಫ್ರೀಡ್‌ಮನ್ ಹೇಳಿದಂತೆ - "ಸಾಮಾಜಿಕ ವಿಕಸನ ಮತ್ತು ಕಾನೂನು ಪರಿವರ್ತನೆ ನಡುವಣ ಅಂತರ್ ಕ್ರಿಯೆಗಳಲ್ಲಿ ಬಹುದೊಡ್ಡ ವೈವಿಧ್ಯತೆ ಕಡ್ಡಾಯವಾಗಿ ಇರಲೇಬೇಕು." ಜೀವನದ ವಾಸ್ತವಿಕ ಸಂಗತಿಗಳು ಮತ್ತು ಕಾನೂನಿನ ನಡುವೆ, ಸಾಮಾಜಿಕ ಜೀವನದ ಬದಲಾಗುತ್ತಿರುವ ವಿನ್ಯಾಸಗಳು ಮತ್ತು ಸೂತ್ರಗಳಿಂದ ಸೃಷ್ಟಿಯಾಗುತ್ತಿರುವ ಹಾಗೂ ಹೆಚ್ಚುತ್ತಿರುವ ಅಂತರಗಳಿಂದ ಒತ್ತಡಗಳು ಉದ್ಭವಿಸಬಹುದು. ಅಂತಿಮವಾಗಿ ಕಾನೂನು ಜೀವನದ ವಾಸ್ತವಿಕ ಸಂಗತಿಗಳಿಗೆ ಪ್ರತಿಸ್ಪಂದಿಸಲೇಬೇಕು. ಪ್ರಾಕೃತಿಕ ಸಂಪನ್ಮೂಲಗಳ ಮರುಹಂಚಿಕೆಗೆ ಅಥವಾ ಹೊಸದಾದ ಸಾಮಾಜಿಕ ನ್ಯಾಯ ಸೂತ್ರಕ್ಕಾಗಿ ರಾಷ್ಟ್ರೀಯ ತುರ್ತುಪರಿಸ್ಥಿತಿಯುಂಟಾಗಿ ಥಟ್ಟನೆ ಪ್ರಬಲವಾದ ಕೋರಿಕೆ ಬರಬಹುದು.



ಕ್ರಿಯಾಶೀಲತೆಗೆ ಕಾಲ ಪಕ್ವವಾಗುವವರೆಗೆ ಅಧಿಕೃತ ಅಭಿಪ್ರಾಯವನ್ನು ನಿಧಾನವಾಗಿ ರೂಪಿಸುವ ದೂರದೃಷ್ಟಿಯಿಂದ ಕೂಡಿದ ಚಿಂತನಶೀಲರಾದ ವ್ಯಕ್ತಿಗಳ ಸಣ್ಣ ಗುಂಪೊಂದು ಇರಬಹುದು.

ನಮ್ಮ ಹೊಸ ಪ್ರಜಾಪ್ರಭುತ್ವ ಎಲ್ಲ ಬಿರುಗಾಳಿಗಳನ್ನೂ ಎದುರಿಸಬೇಕಾದರೆ ಮತ್ತು ಸಂಪದ್ಭರಿತವಾಗಬೇಕಾದರೆ ಮತ್ತು ಅದರ ಜೊತೆಗೇ ನಮ್ಮ ಮಹತ್ತರವಾದ ಸಾಂಸ್ಕೃತಿಕ ಪರಂಪರೆಗೆ ಪ್ರೋತ್ಸಾಹ ನೀಡಬೇಕಾದರೆ, ಶಾಸಕರು ಮತ್ತು ಸಾಮಾಜಿಕ ಧುರೀಣರು ಈ ಸತ್ಯಗಳನ್ನು ಮನಗಾಣಬೇಕು.

* * * *

# ೨. ಪ್ರಾಚೀನ ಭಾರತದಲ್ಲಿ ಕಾನೂನು ಮತ್ತು ಸಂಸ್ಕೃತಿ

ಅನೇಕ ಪ್ರಾಚೀನ ಸಮಾಜಗಳ ಅಭಿವೃದ್ಧಿಯ ಪ್ರಾರಂಭಿಕ ಹಂತದಲ್ಲಿ, ಕಾನೂನು ಮತ್ತು ಸಂಸ್ಕೃತಿ ಬೇರ್ಪಡಿಸಲಾಗದ್ದೆಂದೇ ಹೇಳಬೇಕು. ಕಾರಣ, ಆಗಿನ ಕಾಲದಲ್ಲಿ ಮತೀಯ, ನೈತಿಕ ಮತ್ತು ಕಾನೂನುಬದ್ಧ ಹೊಣೆಗಾರಿಕೆಗಳ ನಡುವಣ ವ್ಯತ್ಯಾಸವನ್ನು ಗುರುತಿಸುವ ಮಟ್ಟದ ಹಂತವನ್ನು ಅದು ತಲುಪಿರಲಿಲ್ಲ. "ಧರ್ಮ" ಎಂಬ ಪದದ ಸಾಂಪ್ರದಾಯಿಕ ಅರ್ಥ ನಿರೂಪಣೆ ಹೀಗಿದೆ - "ವೇದಗಳಲ್ಲಿ ಪಾಂಡಿತ್ಯವಿರುವವರು ಅನುಸರಿಸುವ ಮತ್ತು ದ್ವೇಷ ಮತ್ತು ಅತೀವ ಮೋಹದಿಂದ ಮುಕ್ತರಾಗಿರುವ ಗುಣವಂತರ ಅಂತಸ್ಸಾಕ್ಷಿಯಿಂದ ಮಾನ್ಯತೆ ಪಡೆದಿರುವುದು ಧರ್ಮವೆನಿಸಿಕೊಳ್ಳುತ್ತದೆ. ಜಾತ್ಯತೀತ ಕಾನೂನೆಂಬ ವಿಶಿಷ್ಟವಾದ ಸಿದ್ಧಾಂತ ಮಾನವನ ನಾಗರಿಕತೆಯ ಮೊದಲಿನ ಹಂತಗಳಲ್ಲಿ ತಿಳಿದೇ ಇರಲಿಲ್ಲ. ಮತೀಯ ಮತ್ತು ನೈತಿಕ ಮೂಲ ತತ್ವಗಳು ಕಾನೂನಿನ ತತ್ವಗಳೊಡನೆ ಬೆರೆತಿದ್ದವು."

ಆದಿಮಾನವ ತನ್ನ ನಾಗರಿಕತೆಯನ್ನು ಬುಡಕಟ್ಟು ಅಥವಾ ಅಲೆಮಾರೀ ಪಂಗಡಗಳಲ್ಲಿ ಅಭಿವೃದ್ಧಿಪಡಿಸಿದ ನಂತರ ಗ್ರಾಮೀಣ ಜನಾಂಗಗಳು ಬಂದವೆಂಬುದನ್ನು ನಾನು ಮುಂಚೆಯೇ ಉಲ್ಲೇಖಿಸಿದ್ದೇನೆ. ಜನರು ಆಚರಿಸುವ ನಿಯಮಗಳು ಮತ್ತು ಆಚರಣೆಗಳು ಕ್ರಮೇಣ ಸಂಪ್ರದಾಯಗಳಾಗಿ ರೂಪುಗೊಂಡು, ತನ್ನಲ್ಲಿ ಮತದ ಮತ್ತು ನೀತಿಯ ಅಂಶಗಳು ಮತ್ತು ಸಾಮಾಜಿಕ ನಡವಳಿಕೆಯ ಹಲವು ಬದ್ಧಪಡಿಸುವ ನಿಯಮಗಳು ಇತ್ಯಾದಿಗಳನ್ನು ಒಳಗೊಂಡು ಒಂದು ರೀತಿಯಲ್ಲಿ ಕಾನೂನೇ ಆಗಿತ್ತು. ಅವರ ನಡವಳಿಕೆಯ ಒಟ್ಟು ಮೊತ್ತ ಮತ್ತು ಅವರಲ್ಲಿನ ವಿವೇಕಗಳ ಬೋಧನೆಗಳು ಈ ಸಾಮಾಜಿಕ ಪಂಗಡಗಳನ್ನು ನಿಯಂತ್ರಿಸುವ ಕಡ್ಡಾಯ ನಿಯಮಗಳಾಗಿ ರಚಿತವಾದವು. ಒಂದು ರೀತಿಯಲ್ಲಿ ಈ ನಿಯಮಗಳು ಈ ಸಾಮಾಜಿಕ ಪಂಗಡಗಳ ಸಂಸ್ಕೃತಿಯನ್ನು ರಚಿಸುತ್ತವೆಯೆಂದೇ ಹೇಳಬಹುದು. ಅವರಿಗೆ ಸಂಬಂಧಿಸಿದಂತೆ ಸಂಸ್ಕೃತಿ ಮತ್ತು ಕಾನೂನು ಪರಸ್ಪರ ಬೆರೆತು ಒಂದು ವಿನ್ಯಾಸಕ್ಕೆ ಜನಿಸಿದವೆಂಬುದನ್ನು ಪ್ರಾಮಾಣಿಕವಾಗಿ ಹೇಳಬಹುದು.

ಅಭಿವೃದ್ಧಿಯಲ್ಲಿ ಇನ್ನೂ ಹೆಚ್ಚಿನ ಹಂತವನ್ನು ತಲುಪಿದಾಗ ಸಮಾಜ ಇನ್ನೂ



ಹೆಚ್ಚು ಸಂಕೀರ್ಣವಾದ ರಚನೆಯನ್ನು ವಿಕಾಸಗೊಳಿಸಿತು. ಜನಗಳಿಗೆ ನಡವಳಿಕೆಯ ನಿಯಮಗಳನ್ನು ವಿಧಿಸದ ಸಾರ್ವಭೌಮ ಮತ್ತು ಆಳುವ ವ್ಯವಸ್ಥೆಗಳು ವೇದಗಳ ಕಾಲದಲ್ಲೂ ಹಿಂದೂಗಳ ಸಮಾಜ ವ್ಯವಸ್ಥೆಯಲ್ಲಿ ಅಭಿವೃದ್ಧಿ ಹೊಂದಿದ್ದವೆಂದು ವಿದ್ವಾಂಸರು ಹೇಳುತ್ತಾರೆ. "ರಾಷ್ಟ್ರೀಯ ಜೀವನ ಮತ್ತು ಚಟುವಟಿಕೆಗಳು ದಾಖಲೆಗಳ ಪ್ರಕಾರ ಆದಿ ಕಾಲದಲ್ಲಿ ಜನಪ್ರಿಯ ಸದನಗಳು ಮತ್ತು ಸಂಸ್ಥೆಗಳ ಮೂಲಕ ಅಭಿವ್ಯಕ್ತಗೊಳ್ಳುತ್ತಿದ್ದವೆಂದು ವೇದಗಳಿಂದ ತಿಳಿಯುತ್ತದೆಂದು" ಹೇಳಲಾಗಿದೆ. ನಮ್ಮ ವೇದಗಳ ಕಾಲದ ಪೂರ್ವಜರ "ಸಮಿತಿ"ಯೇ ಈ ಸ್ವರೂಪದ ಅತ್ಯಂತ ದೊಡ್ಡ ಸಂಸ್ಥೆ. ಈ ಸಮಿತಿಗಳ ಕಾರ್ಯವನ್ನು ನಿಖರವಾಗಿ ಸಂಗ್ರಹಿಸುವುದು ಕಷ್ಟವಾಗಿದೆ. ಸಮಿತಿ ನಿರ್ವಹಿಸುತ್ತಿದ್ದ ಅತ್ಯಂತ ಪ್ರಮುಖವಾದ ವ್ಯವಹಾರವೆಂದರೆ ರಾಜ ಅಥವಾ ರಾಜನ್‌ನನ್ನು ಚುನಾಯಿಸುವುದು. ಸಮಿತಿಗೆ ಹಾಜರಾಗುವುದು ರಾಜನ ಕರ್ತವ್ಯವಾಗಿತ್ತೆಂದು ಸಹ ಕಂಡುಬರುತ್ತದೆ ಮತ್ತು ಸಮಿತಿಯು ರಾಜನನ್ನು ಅಭಿಷಿಕ್ತನನ್ನಾಗಿ ಮಾಡುತ್ತಿತ್ತು. ಚರ್ಚೆಯ ಕಾಲದಲ್ಲಿ ಸಭೆ ಸೇರುವ "ಸಮಿತಿ"ಗೆ ಒಪ್ಪಿಗೆಯಾಗುವ ಭಾಷಣಗಳನ್ನು ಮಾಡುತ್ತಿದ್ದರು. ಸಮಿತಿಗಳು ರಾಜಕೀಯ ವಿಷಯಗಳನ್ನು ಮಾತ್ರವಲ್ಲದೇ ನಾನಾ ಬಗೆಯ ಇತರ ವಿಷಯಗಳನ್ನು ಚರ್ಚಿಸುತ್ತಿದ್ದವು. "ಮುಕ್ತವಾದ ಚರ್ಚೆಯ ಹಕ್ಕು ಚರ್ಚೆಯು ಅಭಿವೃದ್ಧಿ ಹೊಂದಿದ ಹಂತಕ್ಕೆ ಸಾಕ್ಷಿಯಾಗಿತ್ತು; ಇನ್ನೊಬ್ಬರ ಅಭಿಪ್ರಾಯದ ಮೇಲೆ ಗೆಲುವು ಸಾಧಿಸುವ ಚರ್ಚಿಸುವವನ ಆತಂಕ - ಇವೆಲ್ಲಾ ಪರಿಗಣನೀಯ ಮಟ್ಟದ ಸಂಸ್ಕೃತಿಯ ದ್ಯೋತಕವಾಗಿವೆ." ಜನರೆಲ್ಲರಿಗೂ ಸಮಿತಿಯಲ್ಲಿ ಹಾಜರಿರುವ ಹಕ್ಕಿತ್ತೆಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಒಂದು ರೀತಿಯಲ್ಲಿ ಅದು ಜನಗಳ ಸಭೆಯೇ ಆಗಿತ್ತು. ಈ ಸಮಿತಿಗಳ ಜೊತೆಗೇ "ಸಭಾ"ಗಳು ಇದ್ದವೆಂದು ನಮಗೆ ಕಂಡುಬರುತ್ತದೆ. ಸಭಾಗಳೂ ಜನಪ್ರಿಯ ಸಂಸ್ಥೆಗಳಾಗಿದ್ದು ಸಮಿತಿಗಿಂತಲೂ ಹೆಚ್ಚು ಸಂಕೀರ್ಣವಾದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದವು. ಸಮಿತಿಯ ಕೈಕೆಳಗೆ ಅಧಿಕೃತವಾಗಿ ಕೆಲಸ ಮಾಡುತ್ತಿದ್ದ ಆಯ್ದ ಜನಗಳಿಂದ ಕೂಡಿದ ಸಂಸ್ಥೆಗಳೇ ಸಭಾಗಳೆಂದು ತಿಳಿದುಬರುತ್ತದೆ. ಸಭಾಗೆ ಅದರದೇ ಆದ ಅಧ್ಯಕ್ಷನಿದ್ದ ಮತ್ತು ಸಭಾದಲ್ಲಿ ಕೆಲವು ಹಿರಿಯರು ಅಧಿಕಾರಯುತ ಸ್ಥಾನಗಳನ್ನು ಹೊಂದಿದ್ದರೆಂದು ಗೊತ್ತಾಗುತ್ತದೆ. ಸಂದರ್ಭ ಬಂದಾಗ ಸಭಾಗಳು ನ್ಯಾಯ ನಿರ್ವಹಣೆ ಮಾಡುವ ನಿರ್ಣಾಯಕ ಸಂಸ್ಥೆಯೂ ಆಗಿದ್ದವೆಂದು ತಿಳಿದು ಬರುತ್ತದೆ. ಈ ಜನಪ್ರಿಯ ಸಂಸ್ಥೆಗಳು ಉನ್ನತ ಮಟ್ಟದ ನಾಗರಿಕತೆಯನ್ನು ಸೂಚಿಸುತ್ತವೆ ಮತ್ತು ಜನಗಳು ಸ್ವಯಮಾಡಳಿತದ ಸಂಸ್ಥೆಗಳನ್ನು ರಚಿಸಲು ಪ್ರಾರಂಭಿಸಿದ್ದವೆಂದೂ ತೋರಿಸುತ್ತದೆ. ಆ ಹಂತದಲ್ಲಿ ಜಾರಿಯಲ್ಲಿದ್ದ ಕಾನೂನಿಗೆ ನಮಗೆ ಸ್ಪಷ್ಟವಾದ ಪುರಾವೆ ಇಲ್ಲ. ಆದರೆ ಈ ಸಾಮಾಜಿಕ

ಪಂಗಡಗಳು ಮತೀಯ, ನೈತಿಕ ಮತ್ತು ಕಾನೂನಿನ ನಿಯಮಗಳ ಸಂಮಿಶ್ರಣದಿಂದ ನಿಯಂತ್ರಿತವಾಗಿದ್ದವೆಂದು ನಂಬಲು ಕಾರಣವಿದೆ.

ಪ್ರಾರಂಭದ ದೆಸೆಯ ವೇದಗಳಿಗೆ ರಾಜಪ್ರಭುತ್ವ ಮಾತ್ರ ಗೊತ್ತಿದ್ದರೆ, ವೇದಗಳ ಕಾಲದ ನಂತರದಲ್ಲಿ ಸ್ವಯಮಾಡಳಿತ ಸಂಸ್ಥೆಗಳ ಉದಯದ ಸೂಚನೆಯಿದ್ದು ಅವು ರಾಜತ್ವದ ಸ್ಥಾನಪಲ್ಲಟ ಮಾಡಿರುವಂತೆ ಕಾಣುತ್ತದೆ. "ಸಾರ್ವಭೌಮತ್ವದ (ರಾಜತ್ವ) ವಿಸರ್ಜನೆಯಾಗಿದೆ ಮತ್ತು ಪ್ರಜಾಸತ್ತಾತ್ಮಕ ಸರ್ಕಾರ ಅನೇಕ ಸ್ಥಳಗಳಲ್ಲಿ ರಚಿತವಾಗಿದೆ"ಯೆಂದು ಹೇಳುತ್ತಾರೆ. ಭಾರತದ ಅನೇಕ ಸ್ಥಳಗಳಲ್ಲಿ ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದ ವೇಳೆಗೆ ಗಣರಾಜ್ಯ ಸ್ವರೂಪದ ಸರ್ಕಾರ ಅಸ್ತಿತ್ವದಲ್ಲಿತ್ತೆನ್ನುವುದಕ್ಕೆ ಮಹಾಭಾರತದಲ್ಲಿ ಸೂಚನೆಗಳಿವೆ. ಸ್ವಾಭಾವಿಕವಾಗಿಯೇ ಈ ಜನಪ್ರಿಯ ಸರ್ಕಾರಗಳು ಕಾನೂನುಬದ್ಧ, ನೈತಿಕ ಮತ್ತು ಮತೀಯ ಬೋಧನೆಗಳಿಂದ ಸಂಯೋಜಿತವಾಗಿದ್ದ ನಿಯಮಗಳನ್ನು ಹೊಂದಿದ್ದವು. ತತ್ಕಾರಣವಾಗಿ ಸಮಾಜವನ್ನು ನಿಯಂತ್ರಿಸುವ ಜಾತ್ಯತೀತ ಅಂಗವಾಗಿ ಕಾನೂನಿನ ಸಿದ್ಧಾಂತ ತನ್ನ ನೈತಿಕ ಮತ್ತು ಮತೀಯ ಮೌಲ್ಯಗಳಿಂದ ಭಿನ್ನವಾಗಿದೆಯೆಂಬ ಭಾವನೆ ಇನ್ನೂ ಬೇರುಬಿಟ್ಟಿರಲಿಲ್ಲ.

ಯಾವ ಕಾನೂನಿನಿಂದ ಆಗಿನ ಕಾಲದ ದೈವಿಕ ಭಾವನೆಗಳಿಂದ ಸ್ವರ್ಗ ಮತ್ತು ಭೂಮಿ ಆಳಲ್ಪಟ್ಟಿತೋ ಅಂತಹ ಕಾನೂನಿಗೇ ವೇದಗಳ ಕಾಲದಲ್ಲಿ ಮೊರೆಹೋಗುತ್ತಿದ್ದರು. ವಿಶ್ವವ್ಯವಸ್ಥೆ ಮತ್ತು ಕಾನೂನನ್ನು ಸೂಚಿಸುವ ಪದವೆಂದರೆ "ಋತ". ಪಾಶ್ಚಿಮಾತ್ಯ ಜಗತ್ತಿನಲ್ಲಿ ಬಹಳ ಮಟ್ಟಿಗೆ ಚರ್ಚಿತವಾಗುತ್ತಿರುವ ತಾತ್ವಿಕ ಮತ್ತು ಕಾನೂನಿನ ಜಿಜ್ಞಾಸೆಗಳಿಗೆ ಮೂಲವಾಗಿದ್ದ ಪ್ರಕೃತಿ ನ್ಯಾಯಶಾಸ್ತ್ರ "ಋತ" ಎಂಬ ಪದಕ್ಕೆ ಹೋಲುವಂತೆ ಕಾಣುತ್ತದೆ. ಕಾನೂನಿನ ಸ್ಥಾನವನ್ನು ಗಳಿಸಿದ್ದು, ಯಾವುದನ್ನು ಆಚರಿಸದಿದ್ದರೆ ಶಿಕ್ಷೆಗೆ ಗುರಿಯಾಗುತ್ತಿದ್ದರೋ ಅಂತಹ ಜನಾಂಗವನ್ನು ಆಳುತ್ತಿದ್ದ ಸಂಪ್ರದಾಯಗಳು ಮತ್ತು ಆಚರಣೆಗಳು ನಿಸ್ಸಂಶಯವಾಗಿ ಆ ಕಾಲದಲ್ಲಿದ್ದವು. ಶ್ರುತಿಗಳು ಹಿಂದೂ ಕಾನೂನಿನ ಪ್ರಮುಖ ಮೂಲಗಳಲ್ಲೊಂದಾಗಿ ಪರಿಗಣಿಸಲ್ಪಟ್ಟಿದ್ದರೂ, ಆ ಶ್ರುತಿಗಳಲ್ಲಿ, ಯಾವುದನ್ನು ನಾವು ವಾಸ್ತವಿಕ ಕಾನೂನೆಂದು ಕರೆಯುತ್ತೇವೆಯೋ, ಅದನ್ನು ಅಷ್ಟಾಗಿ ಕಾಣುವುದಿಲ್ಲ.

ವೇದಗಳ ಅಭಿವೃದ್ಧಿಯ ಕಾಲದ ನಂತರ ಬಂದದ್ದೇ ಧರ್ಮಶಾಸ್ತ್ರಗಳ ಕಾಲ. ಬರಹಗಾರರು ಧರ್ಮಶಾಸ್ತ್ರಗಳ ಕಾಲವನ್ನು ಸೂತ್ರಗಳ ಕಾಲ ಮತ್ತು ಸ್ಮೃತಿಗಳ ಕಾಲವಾಗಿ ಮರುವಿಂಗಡಣೆ ಮಾಡಿದ್ದಾರೆ. ಸ್ಮೃತಿಗಳ ಚೌಕಟ್ಟಿನೊಳಗೆ ಸೇರಿಸಲ್ಪಟ್ಟಿರುವ ದೈವ ಪ್ರೇರಿತ ಕಾನೂನಿನಲ್ಲಿ ತನ್ನ ಅಡಿಪಾಯಗಳನ್ನು ಹಾಕಿರುವಂತೆ ಕಂಡುಬರುವ ಸಾಂಪ್ರದಾಯಿಕ ಕಾನೂನಿನ ವ್ಯವಸ್ಥೆಯ ವಿಕಾಸ ಮತ್ತು



ವಿಸ್ತರಣೆಯನ್ನು ಈ ಕಾಲದಲ್ಲಿ ನಾವು ಸುಲಭವಾಗಿ ಕಾಣಬಹುದು. ಧರ್ಮಶಾಸ್ತ್ರಗಳ ಕಾಲವನ್ನು ಹಿಂದೂ ಕಾನೂನಿನ ಸುವರ್ಣಯುಗವೆಂದೇ ಕರೆಯುತ್ತಾರೆ. ಆದರೆ ಧರ್ಮಶಾಸ್ತ್ರಗಳಲ್ಲಿಯೂ ಮತ ಮತ್ತು ನೀತಿಸೂತ್ರಗಳನ್ನು ಕಾನೂನಿನೊಡನೆ ಬೆರೆಸಿರುವುದು ಸ್ಪಷ್ಟವಾಗಿಯೇ ಇದೆ. ಅವು ಮತೀಯ ಮತ್ತು ನೈತಿಕ ಕಾನೂನಿನ ಬಗ್ಗೆ ಉಲ್ಲೇಖಿಸುತ್ತವೆ. ಜಾತಿಗಳು ಮತ್ತು ರಾಜರುಗಳ ಕರ್ತವ್ಯಗಳು, ಪೌರಕಾನೂನು ಮತ್ತು ದಂಡಶಾಸನಗಳ ಬಗ್ಗೆಯೂ ವ್ಯವಹರಿಸುತ್ತವೆ. ಮನು ಧರ್ಮಶಾಸ್ತ್ರದಲ್ಲಿ ಪವಿತ್ರವಾದ ಕಾನೂನಿನ ನಾಲ್ಕು ಮೂಲಗಳನ್ನು - ಶ್ರುತಿ, ಸ್ಮೃತಿ, ಸಂಪ್ರದಾಯಗಳು ಮತ್ತು ಗುಣವಂತರು ಮತ್ತು ಆತ್ಮಸಾಕ್ಷಿ (ಸ್ವಯಂ ಒಪ್ಪಿಗೆ) - ಇವುಗಳ ಉಲ್ಲಂಘನೆಗೆ ವಿಧಿಸುವ ವಿವಿಧ ಶಿಕ್ಷೆಗಳೆಂದು ಹೇಳುತ್ತಾರೆ. ಕಾನೂನು, ಮತ ಮತ್ತು ನೈತಿಕತೆಯ ಮಿಶ್ರಣ ಧರ್ಮಶಾಸ್ತ್ರಗಳಲ್ಲಾಗಿರುವುದಕ್ಕೆ ಇದೇ ಸಾಕ್ಷಿ. ಧರ್ಮಶಾಸ್ತ್ರಗಳ ಪ್ರತಿಪಾದಕರು, ಕೇವಲ ಕಾನೂನಿನ ಹೊಣೆಗಾರಿಕೆಗಳಿಗಿಂತ, ನೈತಿಕ ಮತ್ತು ಮತೀಯ ಹೊಣೆಗಾರಿಕೆಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿವೆಯೆಂದು ಪರಿಗಣಿಸುತ್ತಾರೆ. ಕೇವಲ ಕಾನೂನಿನ ಮಾತ್ರವಲ್ಲದೇ ಮತೀಯ ಮತ್ತು ನೈತಿಕ ಭಾವನೆಗಳೊಂದಿಗೆ ಸಂಘಟಿತವಾಗಿರುವ ಕರ್ತವ್ಯವೇ ಧರ್ಮವೆಂದು ವಿಶಾಲವಾದ ಅರ್ಥದಲ್ಲಿ ಹೇಳಬಹುದು. ಆಗಿನ ಕಾಲದಲ್ಲಿ ಸಮಾಜದ ನೈತಿಕ ಮತ್ತು ಸಾಂಸ್ಕೃತಿಕ ಆಚರಣೆಗಳೇ ಕಾನೂನಿನ ಮೂಲ ಅಡಿಪಾಯವೆಂದು ಇದು ಸ್ಪಷ್ಟವಾಗಿ ತೋರಿಸುತ್ತದೆ. ಆದರೆ, ಈ ಕಾಲದಲ್ಲಿ ನಡಾವಳಿಯ ಮತ್ತು ನೈತಿಕ ಮೌಲ್ಯಗಳಿಗಿಂತ ಭಿನ್ನವಾದ ಕಾನೂನಿನ ಭಾವನೆಯ ಉಗಮವನ್ನು ಗುರುತಿಸಬಹುದು. ಸ್ಮೃತಿ ಬರಹಗಾರರಲ್ಲಿ ಕೆಲವರು ಬರೆಯುವಾಗ ಅವನ್ನು ಮೂರು ಭಾಗಗಳಾಗಿ ವಿಂಗಡಿಸುತ್ತಾರೆ. ಅವೇನೆಂದರೆ - ಆಚಾರ, ವ್ಯವಹಾರ ಮತ್ತು ಪ್ರಾಯಶ್ಚಿತ್ತ. ಪೌರ ಕಾನೂನಿನ ನಿಯಮಗಳೇ ವ್ಯವಹಾರ. ಮತೀಯ ನಿಯಮಗಳು ಮತ್ತು ಆಚರಣೆಗಳನ್ನು ಆಚಾರ ಮತ್ತು ಪ್ರಾಯಶ್ಚಿತ್ತದಲ್ಲಿ ಕಾಣುತ್ತೇವೆ. ಸಮಾಜ ಬೆಳೆದಂತೆ ಮತ್ತು ನಗರೀಕರಣದ ಪರಿಣಾಮಗಳ ಅನುಭವದಿಂದ, ಕ್ರಮೇಣ 'ವ್ಯವಹಾರ' ಹೆಚ್ಚಿನ ಪ್ರಾಮುಖ್ಯತೆಯನ್ನು ಗಳಿಸಿತು. ನಂತರದ ಸ್ಮೃತಿಗಳು ವ್ಯವಹಾರದ ಬಗ್ಗೆ ಕೂಲಂಕಷವಾಗಿ ಬರೆದಿವೆ ಮತ್ತು ಕೆಲವು ಸ್ಮೃತಿ ರಚಯಿತರು ವ್ಯವಹಾರದ ಬಗ್ಗೆಯೇ ಬರೆದಿದ್ದಾರೆ. ಕಾನೂನಿನ ಬೆಳವಣಿಗೆ ಎಷ್ಟು ಮಹತ್ವಪೂರ್ಣವಾಗಿತ್ತೆಂದರೆ ಕಟ್ಟುನಿಟ್ಟಾಗಿ ಅದನ್ನು "ಹದಿನೆಂಟು ಶೀರ್ಷಿಕೆಗಳು ಮತ್ತು 132 ಉಪ ವಿಭಾಗಗಳಾಗಿ ವಿವರಿಸಿದ್ದಾರೆ. ಇದಲ್ಲದೇ ವಾಸ್ತವಿಕ ಮತ್ತು ನ್ಯಾಯ ನಿರ್ಣಾಯಕ ಕ್ರಮಕ್ಕೆ ಸಂಬಂಧಿಸಿದ ನಿಯಮಗಳನ್ನು ರೂಪಿಸಿದ್ದಾರೆ." ಆ ರೀತಿ ವಿಕಾಸಗೊಂಡ ವಾಸ್ತವಿಕ ಕಾನೂನು ವಿಶದವಾಗಿತ್ತು ಮತ್ತು ಅದು

ಪಾಶ್ಚಿಮಾತ್ಯ ನ್ಯಾಯ ವ್ಯವಸ್ಥೆಗೆ ಬುನಾದಿಯಂತಿರುವ ರೋಮನ್ನರ ಕಾನೂನಿನೊಡನೆ ತುಲನೆ ಮಾಡಬಹುದಾದಂತಹ ನ್ಯಾಯತತ್ವಗಳ ಮೇಲೆ ಆಧಾರಿತವಾಗಿತ್ತು. ಸಮಾಜದ ನಡವಳಿಕೆಯ ಮತ್ತು ನೈತಿಕ ಮೌಲ್ಯಗಳು ಹಾಗೂ ಸಂಸ್ಕೃತಿ ಮತ್ತು ಕಾನೂನಿನ ನಡುವಣ ನಿಕಟವಾದ ಸಂಬಂಧಕ್ಕೆ ಒತ್ತು ನೀಡಲು ನಾನು ಪ್ರಾಚೀನ ಭಾರತದಲ್ಲಿ ವಾಸ್ತವಿಕ ಕಾನೂನು ಹೊರಹೊಮ್ಮಿದ ಅಂಶವನ್ನು ಸಾಕಷ್ಟು ವಿಶದವಾಗಿ ಹೇಳಿದ್ದೇನೆ. ತನ್ನ ನಡವಳಿಕೆಯನ್ನು ರೂಪಿಸುವ ನಿಯಂತ್ರಣಗಳ ಸಂಪೂರ್ಣ ರಚನೆಯಲ್ಲಿ ಮಾನವ, ಅಭಿವೃದ್ಧಿಯ ಒಂದು ನಿರ್ದಿಷ್ಟ ಹಂತವನ್ನು ತಲುಪಿದ ಮೇಲೆ ಈ ಮೌಲ್ಯಗಳನ್ನು ವಿವಿಧ ಶೀರ್ಷಿಕೆಯಡಿಯಲ್ಲಿ ಉಪವಿಭಾಗ ಮಾಡಿದ್ದಾನೆ. ಕೆಲವನ್ನು ಮತೀಯ ಕ್ಷೇತ್ರಕ್ಕೆ, ಇನ್ನೂ ಕೆಲವನ್ನು ನೈತಿಕ ಕ್ಷೇತ್ರಕ್ಕೆ ಮತ್ತು ಇನ್ನೂ ಹಲವನ್ನು ವಾಸ್ತವಿಕ ಕಾನೂನಿನ ಕ್ಷೇತ್ರಕ್ಕೆ ಹಂಚಿದ್ದಾನೆ. ಈ ದೃಷ್ಟಿಯಲ್ಲಿ ವಾಸ್ತವಿಕ ಕಾನೂನು ಮಾನವನ ಸಂಸ್ಕೃತಿಯಲ್ಲಿ ಜನಿಸಿ ಅದರ ಅವಿಭಾಜ್ಯ ಅಂಗವಾಗಿದೆಯೆಂದು ಪ್ರಾಮಾಣಿಕವಾಗಿ ಹೇಳಬಹುದು. ಆದ್ದರಿಂದ ಕಾನೂನು ಮತ್ತು ಸಂಸ್ಕೃತಿಗಳ ನಡುವೆ ವಿರುದ್ಧ ಸಿದ್ಧಾಂತವು ಇರಲು ಸಾಧ್ಯವಿಲ್ಲ. ಮತ್ತು ಅವುಗಳ ನಡುವಣ ಆಂತರಿಕ ಸಂಬಂಧಗಳು ಅವಶ್ಯಕವಾಗಿ ನಿಕಟ ಹಾಗೂ ಆತ್ಮೀಯವಾಗಿರಲೇಬೇಕು. ಸಮಾಜಕ್ಕೆ ಸೇವೆ ಸಲ್ಲಿಸಲು ವಿನ್ಯಾಸಗೊಂಡಿರುವ ಕಾನೂನು ಸಮಾಜದ ಅಂಗೀಕೃತ ಭಾವನೆಗಳನ್ನು ಮರೆಯಲು ಸಾಧ್ಯವಿಲ್ಲ.

ಹಿಂದೂ ಸ್ಮೃತಿಗಳು ವಾಸ್ತವಿಕ ಕಾನೂನನ್ನು ನಡೆಸಿಕೊಂಡಿರುವ ರೀತಿಯಲ್ಲಿ ಒಂದು ಸಮಾಜದ ಸಂಸ್ಕೃತಿಯಲ್ಲಿ ಕಾನೂನಿನ ಅಡಿಪಾಯವಿರುವುದನ್ನು ನಿದರ್ಶನವಾಗಿ ನೀಡಬಹುದು. ಸಾರ್ವಭೌಮ ಸಂಸ್ಥೆಯ ಆಜ್ಞೆಗಳಾಗಲೀ, ಅಥವಾ ಕಾನೂನು ರಚನೆ ಮಾಡುವ ಉನ್ನತ ಪ್ರಾಧಿಕಾರದ ಆಜ್ಞೆಗಳಾಗಲೀ ಅವುಗಳಲ್ಲಿ ಕಂಡುಬರುವುದಿಲ್ಲ ಮತ್ತು ಅದಕ್ಕೆ ದಾಖಲೆಯೂ ಇಲ್ಲ. ದೈವೇಚ್ಛೆಗನುಗುಣವಾಗಿ ಮತ್ತು ವಿವೇಕದ ಸಲಹೆಗನುಗುಣವಾಗಿವೆಯೆಂದು ನಂಬಿಕೆ ಇರುವ ಅಂಗೀಕೃತ ನಡವಳಿಕೆಯ ಮೇಲೆ ಅದು ಆಧಾರಿತವಾಗಿದೆಯೆಂಬುದೇ ಅದರ ತಾತ್ಪರ್ಯ. ಸ್ಮೃತಿಗಳಲ್ಲಿ ಅಳವಡಿಸಿರುವ ಕಾನೂನು ವ್ಯವಸ್ಥೆ ನಿರ್ಧಾರಿತ ವ್ಯಕ್ತಿಗಳಿಗೆ ತೋರುವ ವಿಧೇಯತೆಯ ಸಾಮಾನ್ಯ ನಡವಳಿಕೆಯ ಮೇಲೆ ಆಧಾರಿತವಾದಂತೆ ತೋರುವುದಿಲ್ಲ. ವ್ಯವಸ್ಥೆಯ ಸಾಮಾನ್ಯ ನಿಯಮಗಳನ್ನು ಗುರುತಿಸಬೇಕಾಗಿರುವ ರೀತಿಯಲ್ಲಿ ಸ್ಪಷ್ಟಮಾಡುವ ಸರಳವಾದ ಅಥವಾ ಸಂಕೀರ್ಣವಾದ ನಿಯೋಜಕ ನಿಯಮದ ಸಾಮಾನ್ಯ ಒಪ್ಪಿಗೆಯ ಮೇಲೆ ಅದು ಆಧಾರಿತವಾಗಿದೆ. ಈ ಸ್ಮೃತಿಕಾರರ ಪ್ರಕಾರ ಸಾಮಾನ್ಯವಾಗಿ ಅಂಗೀಕೃತವಾದ ಉದ್ದೇಶವೆಂದರೆ ಧರ್ಮದ ಆಚರಣೆ ಮತ್ತು ಶಿಕ್ಷೆಯೆಂದರೆ ಜನಗಳಿಂದಲೇ ಮಾನ್ಯತೆ ಮಾಡಲ್ಪಟ್ಟ ಶಿಕ್ಷೆಗಳು. ವಾಸ್ತವಿಕವಾಗಿ



ಕಾನೂನನ್ನು ಜಾರಿಗೊಳಿಸುವುದು (ದಂಡ) ಸಾರ್ವಭೌಮನಿಂದ ಪ್ರಾರಂಭವಾಗುತ್ತಿತ್ತು. ರಾಜ ಮತ್ತು ಕಾನೂನು ಜನಗಳಿಂದ ಸೃಷ್ಟಿಯಾದವೆಂಬುದು ನ್ಯಾಯ ಸಂಸ್ಥೆಗಳ ಉಗಮದ ಒಂದು ಅಭಿಪ್ರಾಯವಾಗಿತ್ತು. ವೇದಗಳಲ್ಲಿ ಮತ್ತು ಸ್ಮೃತಿಗಳಲ್ಲಿ ಉಲ್ಲೇಖಿಸಿರುವ ಕಾನೂನಿನ ಮೂಲವೇ ಜನರೆಂದು ಮೇದಾತಿಥಿ ಮತ್ತು ವಿಜ್ಞಾನೇಶ್ವರ, ಮಹಾಭಾರತ ಮತ್ತು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಲಾಗಿದೆ. ಅಂಗೀಕಾರದಿಂದ ಅದು "ಅಂಗೀಕೃತನ್ಯಾಯ"ವಾಗಿತ್ತು Jus Receptum. ಇದು ಭಾಗಶಃ ದೈವಜನ್ಯವಾದ ಸಿದ್ಧಾಂತಗಳ ಸ್ಮರಣೆಗಳಾಗಿ ಮತ್ತು ಭಾಗಶಃ ಸಾಂಪ್ರದಾಯಿಕ ಮತ್ತು ರೂಢಿಯ ಕಾನೂನಿನ ಸ್ಮರಣೆಗಳಾಗಿವೆ. ಆ ಕಾನೂನಿನ ಹಿಂದಣ ಶಿಕ್ಷೆ ಯಾವುದೇ ಪರಮೋಚ್ಚ ವ್ಯಾವಹಾರಿಕ ಶಕ್ತಿಯ ನಿರ್ಧಾರವಲ್ಲ. ಆದರೆ ಕಾನೂನಿನಲ್ಲೇ ಅದು ಅಂತರ್ಗತವಾಗಿತ್ತು. ಅದರ ಮೂಲಗಳಿಗೆ ಸಂಬಂಧಪಟ್ಟಿದ್ದ ಅದರ ಪ್ರಕೃತಿ ಮತ್ತು ಪಾವಿತ್ರ್ಯತೆಗಳನ್ನು ಅದು ಅವಲಂಬಿಸಿತ್ತು.

ಕಾನೂನಿನ ಮೇಲೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಶಕ್ತಿಯುತ ಪ್ರಭಾವವನ್ನು ಸ್ಮೃತಿಕಾರರು ಒಪ್ಪಿದ್ದಾರೆ. ಸ್ಮೃತಿಕಾರರು ಕಾನೂನಿನ ರಚನೆ ಮಾಡಲಿಲ್ಲ. ದೈವಿಕ ಅಧಿಕಾರದಿಂದ ಮತ್ತು ಪೀಳಿಗೆಯಿಂದ ಪೀಳಿಗೆಗೆ ಕೊಡಲ್ಪಟ್ಟ ಸಂಪ್ರದಾಯಗಳ ಸಂಗ್ರಹಕಾರರಿಂದ ನೀಡಲ್ಪಟ್ಟ ಸಿದ್ಧಾಂತಗಳ ಪ್ರತಿಪಾದಕರು ಮಾತ್ರ ಆಗಿದ್ದರು. ಕಾಲಕ್ರಮೇಣ ಸ್ಮೃತಿಕಾರರು, ಶಾಸಕರ ಮತ್ತು ನ್ಯಾಯಾಲಯಗಳ ಕಾರ್ಯಗಳನ್ನು ಮೌನವಾಗಿ ನಿರ್ವಹಿಸಿದರು. ಈಚಿನ ದಿನಗಳನ್ನು ತುಲನಾತ್ಮಕವಾಗಿ ಹೊರತುಪಡಿಸಿ (ಪ್ರಾಚೀನ) ಭಾರತದಲ್ಲಿ ಯಾವ ಹಂತದಲ್ಲೂ ಕಾನೂನು ಕಟ್ಟಳೆಗಳು ಲಿಖಿತ ನ್ಯಾಯ ಸೂತ್ರಗಳ ರೂಪದಲ್ಲಿ ಜಾರಿಗೊಳ್ಳಲಿಲ್ಲ. ಕಾನೂನಿನಲ್ಲಿ ಪಂಡಿತರಾದ ಪೂಜ್ಯ ಋಷಿಗಳಿಂದ ಸಂಗ್ರಹಿಸಲ್ಪಟ್ಟ ಹಾಗು ವಿದ್ವಾಂಸರು ಸಂಗ್ರಹಿಸಿದ ಟೀಕಾಭಾಷ್ಯಗಳು, ಪ್ರಾಚೀನ ಕಾಲಗಳಲ್ಲಿ ರಾಜ ಮತ್ತು ನ್ಯಾಯಾಲಯಗಳು ನಿರ್ವಹಿಸುತ್ತಿದ್ದ ಕಾನೂನಿನ ಸಂಗ್ರಹವನ್ನು ಪ್ರತಿನಿಧಿಸಿದ್ದವು. ಸೈದ್ಧಾಂತಿಕವಾಗಿ ಮಾತ್ರ ರಾಜನಾದವನು ಕಾನೂನನ್ನು ಮಾಡಲಿಲ್ಲ ಅಥವಾ ಜಾರಿಗೊಳಿಸಲಿಲ್ಲ. ನಿಯಮದ ಪ್ರಕಾರ ಅವನೇ ಕಾನೂನಿನ ಅಡಿಯಲ್ಲಿದ್ದ ಹಾಗೂ ಶ್ರುತಿ, ಸ್ಮೃತಿಗಳಲ್ಲಿ ನಮೂದಿಸಿದ್ದ ಕಾನೂನಿಗೆ ಬದ್ಧನಾಗಿದ್ದ. ಪಟ್ಟಾಭಿಷೇಕದ ಸಮಯದಲ್ಲಿ ಕಾನೂನನ್ನು ಪಾಲಿಸುವುದಾಗಿ ಅವನು ತೆಗೆದುಕೊಳ್ಳುತ್ತಿದ್ದ ಪ್ರತಿಜ್ಞೆಯಲ್ಲದೇ, "ಅತ್ಯಂತ ಪ್ರಬಲವಾದ ಕಾನೂನು, ಹಿಂದೂಗಳ ಕಾಮನ್ ಲಾ" ಎಂಬುದು ಪುನಃ ಪುನಃ "ರಾಜನಿಗೂ ಮೇಲ್ಪಟ್ಟ ಕಾನೂನಾಗಿ ಘೋಷಿಸಲ್ಪಟ್ಟಿತ್ತು ಮತ್ತು ರಾಜರುಗಳ ರಾಜನಾಗಿಯೂ" ಘೋಷಿಸಲ್ಪಟ್ಟಿತ್ತು. ಸ್ಮೃತಿಕಾರರಲ್ಲಿ ಹಲವರು

ಮತ್ತು ನಂತರದ ಭಾಷ್ಯಕಾರರ ಮೇಲೆ, ಸಮಾಜದಲ್ಲಿ ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಮತ್ತು ಬದಲಾಗಿರುವ ಸಾಮಾಜಿಕ ಮೌಲ್ಯಗಳಿಗನುಗುಣವಾಗಿ ಕಾನೂನನ್ನು ಮಾರ್ಪಡಿಸುವ ಹೊಣೆ ಬಿತ್ತು. ಶ್ರುತಿಗಳು ವ್ಯಕ್ತಪಡಿಸಿರುವ ಮತ್ತು ಸ್ಮೃತಿಗಳು ದಾಖಲು ಮಾಡಿರುವ ಕಾನೂನನ್ನು ಅನುಸರಿಸುವಂತೆ ನಟಿಸುವ ಭಾಷ್ಯಕಾರ, ಆ ಕಾನೂನನ್ನು, ಸ್ಮೃತಿಯ ಕೃತಿಗಳಿಗೆ ವಿವಿಧ ವಿಶ್ಲೇಷಣೆಗಳನ್ನು ಮಾಡುವ ಮೂಲಕ, ಬದಲಾದ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತೆ ಮಾಡಲು ಪ್ರಯತ್ನಿಸುತ್ತಾನೆ. ಪ್ರಚಲಿತ ಸಾಮಾಜಿಕ ಪ್ರಜ್ಞೆ ಮತ್ತು ಸಾಮಾಜಿಕ ತತ್ವಗಳಿಗೆ ಹೊಂದಿಕೊಳ್ಳಲು ಕಾನೂನಿನಲ್ಲಿ ಆಗಿಂದಾಗ್ಗೆ ಬದಲಾವಣೆಗಳನ್ನು ಮತ್ತು ಸುಧಾರಣೆಗಳನ್ನು ಸೇರಿಸಿದರು. ನಮ್ಮ ನ್ಯಾಯಾಲಯಗಳು ಸೂಕ್ತವಾದ ವಿಶ್ಲೇಷಣೆಯ ನೆಪದಲ್ಲಿ ಪದೇ ಪದೇ ಮಾಡುವಂತೆ, ಅದೇ ರೀತಿಯಲ್ಲಿ ಬಹುವಾಗಿ ಇವುಗಳನ್ನು ಸೇರಿಸಲಾಯಿತು.

ಸಮಸ್ತ ಉಪಖಂಡದಲ್ಲೆಲ್ಲಾ ಹರಡಿದ್ದ ಹಿಂದೂ ಸಂಸ್ಕೃತಿ ಸ್ವಾಭಾವಿಕವಾಗಿಯೇ ಒಂದು ಪ್ರದೇಶಕ್ಕಿಂತ ಇನ್ನೊಂದರಲ್ಲಿ ಭಿನ್ನವಾಗಿತ್ತು. ಪ್ರಾದೇಶಿಕ ನಂಬಿಕೆಗಳು, ಸಂಪ್ರದಾಯಗಳು ಮತ್ತು ಆಚರಣೆಗಳಿಗನುಗುಣವಾಗಿ ಬೇರೆ ಬೇರೆ ಪ್ರದೇಶಗಳ ಭಾಷ್ಯಕಾರರು ಒಂದೇ ಸ್ಮೃತಿಯ ಮೇಲೆ ವಿತರಣೆ ನೀಡುವಾಗ ಕಾನೂನಿನ ವಿಶ್ಲೇಷಣೆಗಳನ್ನು ಮಾಡುತ್ತಿದ್ದರು. ಸಾಮಾಜಿಕ ಆಚರಣೆಗಳು ಮತ್ತು ಸಂಪ್ರದಾಯಗಳಿಗೆ ಅನುಗುಣವಾಗಿರುವಂತೆ ಬದಲಾದ ಆ ಹಿಂದೂ ಕಾನೂನನ್ನೇ ಭಾರತಕ್ಕೆ ಬಂದಾಗ ಮುಸ್ಲಿಮರು ಮತ್ತು ನಂತರ ಬಂದ ಆಂಗ್ಲರು ಕಂಡದ್ದು. ರಾಷ್ಟ್ರದ ಉದ್ದಗಲಕ್ಕೂ ಬಲಿಷ್ಠವಾದ ಅನಿವಾರ್ಯವಾದ ಪ್ರಭಾವವನ್ನು ಬೀರಿದ್ದ ವಿವಿಧ ಸಂಸ್ಕೃತಿಗಳು, ವಿದೇಶೀ ಆಳ್ವಿಕೆಗಾರರು ಪ್ರತಿ ಪ್ರದೇಶದಲ್ಲೂ ಆಳ್ವಿಕೆ ನಡೆಸುವಾಗ ಆಚರಣೆಯಲ್ಲಿರುವ ಹಿಂದೂ ಕಾನೂನಿನ ವಿವಿಧ ಪದ್ಧತಿಗಳನ್ನು ಜಾರಿಗೊಳಿಸಿದ್ದರು. ಬಂಗಾಳದ ಹಿಂದೂ ಒಟ್ಟು ಕುಟುಂಬ ವ್ಯವಸ್ಥೆಯ ಕಾನೂನನ್ನು ಸಾಮಾಜಿಕ ಬದಲಾವಣೆ ಮಹತ್ತರವಾಗಿ ಮಾರ್ಪಡಿಸಿತ್ತು ಮತ್ತು ಸುಪ್ರಸಿದ್ಧ ಭಾಷ್ಯಕಾರನಾದ ಜೀಮೂತವಾಹನ ಹಿಂದೂ ಕಾನೂನಿಗೆ ತಾನು ಬರೆದ ಭಾಷ್ಯದಲ್ಲಿ ಬಂಗಾಳದಲ್ಲಿ ಸಾಮಾಜಿಕ ಬದಲಾವಣೆಯಿಂದ ಮಾರ್ಪಾಡು ಹೊಂದಿದ್ದ ಹಿಂದೂ ಕಾನೂನನ್ನೇ ಪ್ರತಿಪಾದಿಸಿದ. ಆದರೆ ಹತ್ತಿರವೇ ಇದ್ದ ಮಿಥಿಲೆಯಲ್ಲಿ ಕಾನೂನಿನ ಹೆಚ್ಚು ಭಾಗ ಆ ಪ್ರದೇಶಗಳಲ್ಲಿ ವಾಸಿಸುವ ಜನಗಳ ಆಚರಣೆಗಳು ಮತ್ತು ಭಾವನೆಗಳನ್ನು ಪ್ರತಿಬಿಂಬಿಸುವ ತನ್ನ ಹಿಂದಿನ ನಿರ್ಮಲ ಸ್ಥಿತಿಯನ್ನೇ ಉಳಿಸಿಕೊಂಡಿತು. ಹಿಂದೂ ಕಾನೂನಿನ ವಿವಿಧ 'ಪಂಥ'ಗಳಾಗಿ ಪರಿಗಣಿಸಲ್ಪಟ್ಟಿರುವುದಕ್ಕೆ, ಹಿಂದೂ ಕಾನೂನಿನ ಮೇಲೆ ಹಿಂದೂ ಸಮಾಜದ ವಿವಿಧ



ಕ್ಷೇತ್ರಗಳ ಬಲಿಷ್ಠವಾದ ಪ್ರಭಾವಕ್ಕೆ ಇದಕ್ಕಿಂತ ಹೆಚ್ಚಿನ ಸಮಂಜಸವಾದ ಸಾಕ್ಷ್ಯವನ್ನು ನೀಡಲಾಗುವುದಿಲ್ಲ. ಶತಮಾನಗಳಷ್ಟು ಹಳೆಯದಾದ ತನ್ನ ಇತಿಹಾಸದುದ್ದಕ್ಕೂ ಹಿಂದೂ ಕಾನೂನು ಹಿಂದೂ ಜೀವನ ಮತ್ತು ಭಾವನೆಗಳೊಡನೆ ಹೊಂದಾಣಿಕೆ ಮಾಡಿಕೊಂಡಿದೆ. ಮೇಯ್ನ್‌ನ ಮಾತುಗಳಲ್ಲಿ ಹೇಳುವುದಾದರೆ "ಈಗ ಅಸ್ತಿತ್ವದಲ್ಲಿರುವುದಕ್ಕೆ ಸ್ವಾಭಾವಿಕ ಪೂರ್ವಗಾಮಿಯಾಗಿ ಕಳೆದುಹೋದ ಕಾಲಕ್ಕೆ ಅವಕಾಶ ನೀಡಿಯೂ, ಇರುವ ಕಾನೂನಿನ ಪರಿಸ್ಥಿತಿಗೆ ಆದಿಕಾಲದ ಸಂಸ್ಕೃತದ ಬರಹಗಳು ಸಾಕ್ಷ್ಯವಾಗುತ್ತವೆ. ಆಗ ಅಸ್ತಿತ್ವದಲ್ಲಿದ್ದ ಹಿಂದೂ ಜೀವನದ ವಿಶಾಲವಾದ ವಾಸ್ತವಿಕ ಸಂಗತಿಗಳೊಡನೆ ಸಾಕಷ್ಟು ಚೆನ್ನಾಗಿ ತನ್ನ ಸಾಮಾನ್ಯ ಸ್ವರೂಪಗಳಲ್ಲಿ ಮತ್ತು ಅದರ ಅನೇಕ ವಿವರಗಳೊಡನೆ ಹೋಲುವ ವಾಸ್ತವಿಕ ಸಂಗತಿಗಳನ್ನು ನಂತರದ ಭಾಷ್ಯಕಾರರು ಅಷ್ಟೇ ಸಮನಾಗಿ ವಿವರಿಸುವುದು ಸ್ವಾಭಾವಿಕವೇ ಆಗಿದೆ; ಉದಾಹರಣೆಗೆ ಹೇಳುವುದಾದರೆ ಅವಿಭಕ್ತ ಕುಟುಂಬದ ಸ್ಥಿತಿಗೆ ಸಂಬಂಧಿಸಿದಂತೆ, ಉತ್ತರಾಧಿಕಾರದ ತತ್ವಗಳು ಮತ್ತು ಕ್ರಮ, ವಿವಾಹ ಮತ್ತು ದತ್ತುಸ್ವೀಕಾರ ಇತ್ಯಾದಿಗಳನ್ನು ನಿಯಂತ್ರಿಸುವ ನಿಯಮಗಳು."

ಪ್ರಾಚೀನ ಭಾರತದಲ್ಲಿ ಕಾನೂನಿನ ಒಂದು ಬಹು ಮುಖ್ಯವಾದ ಮೂಲವೇ ಸಂಪ್ರದಾಯ. ಸಾಮಾಜಿಕ ಮೌಲ್ಯಗಳು ಕಾನೂನಿನ ಮೇಲೆ ಬೀರುತ್ತಿದ್ದ ಶಕ್ತಿಯುತ ಪ್ರಭಾವವನ್ನು ಈ ಸಂಗತಿ ಪ್ರತಿಬಿಂಬಿಸುತ್ತದೆ. ಸಂಪ್ರದಾಯವನ್ನು ಹಿಂದೂ ಕಾನೂನಿನ ಮೂರನೆಯ ಮೂಲವಾಗಿ ಮನು ಪರಿಗಣಿಸುತ್ತಾನೆ. ಸ್ಮೃತಿಗಳು ಮತ್ತು ಭಾಷ್ಯಗಳಲ್ಲಿ ಉಲ್ಲೇಖಿಸದ ವಿಷಯಗಳನ್ನು ಕುರಿತು, ಆಚರಣೆ ಅವುಗಳಲ್ಲಿ ಅಳವಡಿಸಿರುವ ಕಾನೂನಿಗೆ ಪೂರಕವಾಗಬಲ್ಲವು. ಸ್ಮೃತಿಗಳಲ್ಲಿ ಅಳವಡಿಸಿರುವ ಕಾನೂನಿಗೆ ವಿರುದ್ಧವಾಗಿ ಒಂದು ಸಂಪ್ರದಾಯ ಅಸ್ತಿತ್ವದಲ್ಲಿದ್ದರೂ, ಅದು ಕಾನೂನಿನ ಬದ್ಧಪಡಿಸುವ ಮೂಲವೇ ಆಗುತ್ತದೆ. ಸಂಪ್ರದಾಯಗಳನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು ಮತ್ತು ಆ ಸಂಪ್ರದಾಯಗಳು ಸ್ಮೃತಿಯ ನಿಯಮಗಳನ್ನು ಉಲ್ಲಂಘಿಸುತ್ತವೆ ಅಥವಾ ಅದಕ್ಕೆ ಪೂರಕವಾಗುತ್ತವೆ ಎಂಬುದನ್ನು ಸ್ಮೃತಿಗಳೇ ಮೇಲಿಂದ ಮೇಲೆ ಒತ್ತಿಹೇಳಿವೆ. ಎಲ್ಲಾ ಮೊಕದ್ದಮೆಗಳನ್ನು ಸ್ಥಳೀಯ ಆಚರಣೆಗಳಿಂದ ತೆಗೆದುಕೊಂಡ ತತ್ವಗಳ ಆಧಾರದ ಮೇಲೆ ತೀರ್ಮಾನಿಸುವುದು ರಾಜನಾದವನ ಕರ್ತವ್ಯವೆಂದು ಮನು ಘೋಷಿಸುತ್ತಾನೆ. ಮುಂದುವರಿದು ಮನು - "ಪವಿತ್ರವಾದ ಕಾನೂನನ್ನು ತಿಳಿದಿರುವ ರಾಜನು ಜಾತಿ, ಜಿಲ್ಲೆ, ವೃತ್ತಿ ಸಂಘಗಳ ಮತ್ತು ಕುಟುಂಬ ಎನ್ನುತ್ತಾನೆ. ಕಾನೂನುಗಳ ಬಗ್ಗೆ ವಿಚಾರ ಮಾಡಲೇಬೇಕು ಮತ್ತು (ಆ ಪ್ರಕಾರ) ಪ್ರತಿಯೊಬ್ಬರ ವೈಶಿಷ್ಟ್ಯವಾದ ಕಾನೂನನ್ನು ನಿರ್ಧರಿಸಬೇಕು," ಪೌರ ಕಾನೂನಿನ ಬಗ್ಗೆ ಮಾತ್ರ ವ್ಯವಹರಿಸುವ ನಾರದ ಹೀಗೆ ಹೇಳುತ್ತಾನೆ - "ಸಂಪ್ರದಾಯ

ಪ್ರತಿಯೊಂದನ್ನೂ ತೀರ್ಮಾನಿಸುತ್ತದೆ ಮತ್ತು ಪವಿತ್ರ ಕಾನೂನನ್ನೂ ರದ್ದು ಮಾಡುತ್ತದೆ"; ಮತ್ತು ಬಹಳ ಹಿಂದಿನ ಬರಹಗಾರರಲ್ಲೊಬ್ಬರು ಹೇಳುತ್ತಾರೆ - "ಪ್ರತಿಯೊಂದು ದೇಶ ಅಥವಾ ಪ್ರಾಂತ್ಯದಲ್ಲಿ ಪೀಳಿಗೆಯಿಂದ ಪೀಳಿಗೆಗೆ ನಿರಂತರವಾಗಿ ಬಂದಿರುವ ಪ್ರಾಚೀನ ಆಚರಣೆಯನ್ನು ಎಂದಿಗೂ ಶಾಸ್ತ್ರಗಳ ಬಲದ ಮೇಲೆ ರದ್ದು ಮಾಡುವಂತಿಲ್ಲ." ಕಾನೂನಿನ ಮೂಲವಾಗಿ ಸಂಪ್ರದಾಯದ ಪ್ರಾಧಾನ್ಯತೆಯನ್ನು ಮಿತಾಕ್ಷರ ಒತ್ತಾಯಪೂರ್ವಕವಾಗಿ ಹೇಳುತ್ತದೆ ಮತ್ತು ಗ್ರಂಥಗಳಿಂದ ಉಲ್ಲೇಖಿಸುತ್ತಾ ಹೀಗೆ ಹೇಳುತ್ತದೆ - "ಪವಿತ್ರವಾದ ಶಾಸನಗಳಿಂದ ವ್ಯಕ್ತವಾಗಿ ಬೋಧಿಸಲ್ಪಟ್ಟ ಆಚರಣೆಗಳೂ ಹಳತಾಗಿ ಹೋಗಬಹುದು ಮತ್ತು ಸಾರ್ವಜನಿಕ ಅಭಿಪ್ರಾಯಕ್ಕೆ ಅದು ವಿರೋಧವಾಗಿದ್ದರೆ ಅದನ್ನು ತ್ಯಜಿಸಲೇ ಬೇಕು." ಸ್ಮೃತಿಕಾರರು ಮತ್ತು ಮಹಾನ್ ಹಿಂದೂ ಭಾಷ್ಯಕಾರರ ದಿನಗಳಲ್ಲಿ ಕಾನೂನು ನಿಜವಾಗಿಯೂ ಸಮಾಜದ ವಿಧೇಯ ಸೇವಕನಾಗಿತ್ತು. ದೇಶದ ವಿವಿಧ ಭಾಗಗಳಲ್ಲಿ ಹಿಂದೂ ಕಾನೂನಿನ ಪ್ರಕಾರ ಸ್ತ್ರೀಯರ ಆಸ್ತಿಯಲ್ಲಿನ ಹಕ್ಕುಗಳ ಅಭಿವೃದ್ಧಿಯ ಕಥೆ, ಸಾಮಾಜಿಕ ಬದಲಾವಣೆ ಕಾನೂನುಗಳ ಮೇಲೆ ಮಾಡಿರುವ ಪರಿಣಾಮಕ್ಕೆ ಸಾಕ್ಷಿಯಾಗಿದೆ. ವಿಶದವಾಗಿ ಹೇಳುವುದಾದರೆ ಕಟ್ಟುನಿಟ್ಟಿನ ಹಿಂದೂ ಕಾನೂನು ಒಬ್ಬ ಸ್ತ್ರೀಗೆ ಗಂಡಸರಿಂದ ಅವಳು ಉತ್ತರಾಧಿಕಾರಿಯಾಗಿ ಪಡೆದ ಆಸ್ತಿಯಲ್ಲಿನ ನಿರ್ಬಂಧಿತ ಹಕ್ಕುಗಳಿಗಿಂತ ಹೆಚ್ಚೇನನ್ನೂ ಕೊಡುವುದಿಲ್ಲ. ಅದರಲ್ಲಿನ ಉದ್ದೇಶವಾದರೂ ಆ ಆಸ್ತಿ ತುಂಬಾ ಹತ್ತಿರದ ಗಂಡುವಾರಸುದಾರರಿಗೆ ಹೋಗತಕ್ಕದ್ದು.

ಆದರೆ ದೇಶದ ವಿವಿಧ ಭಾಗಗಳಲ್ಲಿ ಉದಾರ ಪ್ರವೃತ್ತಿಗಳು ಅಭಿವೃದ್ಧಿಗೊಂಡು, ಅದರ ಪರಿಣಾಮವಾಗಿ, ದಕ್ಷಿಣದ ಕೆಲವು ಭಾಗಗಳಲ್ಲಿ ಸ್ತ್ರೀಯರ ಆಸ್ತಿಯ ಹಕ್ಕು ಮತ್ತು ಉತ್ತರದ ಕೆಲವು ಭಾಗಗಳಲ್ಲಿ ಸ್ತ್ರೀಯರ ಆಸ್ತಿಯ ಹಕ್ಕಿನ ನಡುವೆ ಸ್ಪಷ್ಟವಾದ ಎಲ್ಲೆಯ ಗೆರೆ ಉದಯಿಸಿತು.

ಭಾರತದ ದಕ್ಷಿಣದ ಒಂದು ಭಾಗದಲ್ಲಿ ಇಂದಿಗೂ ಅಸ್ತಿತ್ವದಲ್ಲಿರುವ ಮರುಮಕ್ಕತಾಯಮ್ ಕಾನೂನು, ಸಾಮಾಜಿಕ ಸಂಪ್ರದಾಯ ಮತ್ತು ಸಾಮಾಜಿಕ ಮೌಲ್ಯಗಳಿಗನುಗುಣವಾಗಿ ಕಾನೂನು ಇರಲೇಬೇಕೆಂಬುದಕ್ಕೆ ಒಂದು ಪ್ರಬಲವಾದ ನಿದರ್ಶನವಾಗಿದೆ. ಅಲ್ಲಿ ಸ್ತ್ರೀಯೇ ಕುಟುಂಬದ ಮುಖ್ಯಸ್ಥೆ ಮತ್ತು ಆಸ್ತಿ ಮಹಿಳೆಯರಿಗೇ ಸೇರುತ್ತದೆ. ಗಂಡಸರಿಗೆ ಉತ್ತರಾಧಿಕಾರ ಇರುವ ನಿಯಮ ಆಚರಣೆಯಲ್ಲಿರುವ ವಿಶಾಲವಾದ ರಾಷ್ಟ್ರದ ಒಂದು ಭಾಗದಲ್ಲಿ ಮುಂದುವರಿದುಕೊಂಡು ಬಂದಿರುವ ಈ ಪ್ರಾಚೀನ ತಾಯಾಳಿಕೆ ಕುಟುಂಬ ವ್ಯವಸ್ಥೆ, ಸಂಸ್ಕೃತಿ ಮತ್ತು ಸಾಮಾಜಿಕ ಆಚರಣೆಗಳು ಕಾನೂನಿನ ಮೇಲೆ ಬೀರುವ ಪ್ರಭಾವಕ್ಕೆ ಇದಕ್ಕಿಂತ ಹೆಚ್ಚಿನ ಶ್ಲಾಘನೆ ಪ್ರಾಯಶಃ ಇರಲಾರದು.



ಭಾರತದಲ್ಲಿ ಅವಿಭಕ್ತ ಕುಟುಂಬದ ಆಸ್ತಿಗೆ ಸಂಬಂಧಿಸಿದ ಕಾನೂನಿಗೆ ಬೆಳವಣಿಗೆ ಒಂದು ರೀತಿಯಲ್ಲಿ ಆಸ್ತಿಗೆ ಸಂಬಂಧಿಸಿದಂತೆ ಸಾಮಾಜಿಕ ಮೌಲ್ಯಗಳಲ್ಲಾಗಿರುವ ಬದಲಾವಣೆಯನ್ನು ಪ್ರತಿಬಿಂಬಿಸುತ್ತದೆ. ಗ್ರಾಮೀಣ ಜನಾಂಗ ಆಸ್ತಿಯ ಮೇಲೆ ಒಟ್ಟು ಸ್ವಾಮ್ಯವನ್ನು ಹೊಂದಿದ್ದ ಕಾಲವೊಂದಿತ್ತು ಮತ್ತು ಆ ರೀತಿಯ ಸ್ವಾಮ್ಯದಲ್ಲಿರುವ ಗೋಮಾಳದ ಭೂಮಿಗಳ ಮೇಲಿರುವ ಸಾಮೂಹಿಕ ಹಕ್ಕುಗಳು ಇಂದಿಗೂ ಉಳಿದಿವೆ. ಸಮಾಜ ಬೆಳೆದಂತೆಲ್ಲಾ ಕುಟುಂಬ ಬಲಿಷ್ಠವಾಗಿ, ಆಸ್ತಿ ಪಟ್ಟಭದ್ರವಾಗಿದ್ದ ಘಟಕವೂ ಆಗಿತ್ತು. ಮರಣಹೊಂದಿದವರ ಆತ್ಮಗಳಿಗೆ ಶಾಂತಿ ಕೋರುವ ಉತ್ತರಕ್ರಿಯಾದಿಗಳಿಗೆ ಅತ್ಯಂತ ಪ್ರಾಮುಖ್ಯತೆಯನ್ನು ನೀಡುವ ಮತದ ಪ್ರಭಾವದ ಫಲವಾಗಿ ಭಾಗಶಃ ಒಂದು ನಿರ್ದಿಷ್ಟವಾದ ಹಂತದೊಳಗಿರುವ, ಉತ್ತರಕ್ರಿಯಾದಿಗಳನ್ನು ಮಾಡುವ, ಹಿಂದೂಗಳ ವಾರಸುದಾರರು ಹುಟ್ಟಿನಿಂದ ತಮ್ಮ ಪೂರ್ವಜರ ಆಸ್ತಿಯಲ್ಲಿ ಹಕ್ಕನ್ನು ಗಳಿಸಿದರು. ಪ್ರಾರಂಭದಲ್ಲಿ ಈ ಕುಟುಂಬದ ಆಸ್ತಿಯಲ್ಲಿನ ಸಹಸ್ವಾಮ್ಯವನ್ನು ಬೇರ್ಪಡಿಸಲು ಸಾಧ್ಯವಿರಲಿಲ್ಲ. ಆದರೆ ಬದಲಾಗುತ್ತಿರುವ ಭಾವನೆಗಳು ಮೂಲ ಗ್ರಂಥಗಳಿಗೆ ಮಾಡಿದ ಬದಲಾದ ವಿಶ್ಲೇಷಣೆಗಳ ಮೇಲೆ ಆಧಾರಿತವಾದ ಹೊಸ ಕಾನೂನಿನ ನಿಯಮಗಳನ್ನು ವಿಕಾಸಗೊಳಿಸಿದವು. ಅದರ ಫಲವಾಗಿ ಸಹಭಾಗಿಗಳ ಮಧ್ಯೆ ಕುಟುಂಬದ ಆಸ್ತಿಯ ವಿಭಾಗ ಅನುಷ್ಠಾನಕ್ಕೆ ಬಂದಿತು. ದೇಶದ ನಿರ್ದಿಷ್ಟವಾದ ಕೆಲವು ಭಾಗಗಳಲ್ಲಿ ಕಾನೂನಿನ ಮೇಲೆ ಜನಗಳ ಆಚರಣೆಗಳ ಸಾಮಾಜಿಕ ಪರಿಣಾಮ ಎಷ್ಟು ಚೆನ್ನಾಗಿತ್ತೆಂದರೆ, ಜನ್ಮದಿಂದ ಆಸ್ತಿಯಲ್ಲಿ ಒಂದು ಆಸಕ್ತಿಯನ್ನು ಗಳಿಸುವ ತತ್ವವು ಸಂಪೂರ್ಣವಾಗಿ ಕಣ್ಮರೆಯಾಯಿತು.

ಹಿಂದೂ ಕಾನೂನಿಗೇ ವೈಶಿಷ್ಟ್ಯಪೂರ್ಣವಾಗಿರುವ ಗಂಡು ಮಕ್ಕಳನ್ನು ದತ್ತು ತೆಗೆದುಕೊಳ್ಳುವ ವ್ಯವಸ್ಥೆ, ಜನಾಂಗ ಆಳವಾಗಿ ಅಂಗೀಕರಿಸಿರುವ ಮತೀಯ ನಂಬಿಕೆಗಳಲ್ಲಿ ಮೂಲವನ್ನು ಹೊಂದಿದೆ. ದತ್ತು ತೆಗೆದುಕೊಳ್ಳುವವನಿಗೆ ಮತ್ತು ಅವನ ಪೂರ್ವಜರ ಆತ್ಮಗಳಿಗೆ ಪಿಂಡ ಪ್ರದಾನ ಮತ್ತು ತರ್ಪಣಗಳನ್ನು ದತ್ತು ಪುತ್ರನಾದವನು ಮಾಡುವುದರಿಂದ ಅವರಿಗೆ ಮುಕ್ತಿ ದೊರಕುವುದೆಂಬುದು (ಸ್ವಾಭಾವಿಕ ಗಂಡು ಮಕ್ಕಳಿಲ್ಲದಾಗ) ಈ ವ್ಯವಸ್ಥೆಯನ್ನು ಬೆಂಬಲಿಸುವುದಕ್ಕೆ ಪ್ರಧಾನ ಉದ್ದೇಶವಾಗಿ ಮುಂದುವರಿಯಿತು. ಪ್ರಾಯಶಃ ಈ ಪದ್ಧತಿ ಇನ್ನಾವ ಕಾನೂನಿನ ವ್ಯವಸ್ಥೆಯಲ್ಲೂ ಕಾಣಸಿಗುವುದಿಲ್ಲ. ತಮ್ಮ ಗಂಡಂದಿರಿಗೆ ಮುಕ್ತಿ ದೊರಕಲು ದತ್ತು ತೆಗೆದುಕೊಳ್ಳುವ ಅಧಿಕಾರವನ್ನು ವಿಧವೆಯರಿಗೂ ನೀಡಲಾಯಿತು. ಮತೀಯ ನಂಬಿಕೆಗಳು ಮಾರ್ಪಾಡು ಹೊಂದಿದಂತೆಲ್ಲಾ, ಕಾನೂನುಬದ್ಧ ದತ್ತು ಸ್ವೀಕಾರಕ್ಕೆ ಅಗತ್ಯವಾದ ಕಟ್ಟುನಿಟ್ಟಾದ ನಿಯಮಗಳಲ್ಲಿ ಸಡಿಲಿಕೆಯುಂಟಾಯಿತು. ಜಾತ್ಯಾತೀತ

ಉದ್ದೇಶ ಹೆಚ್ಚು ಹೆಚ್ಚಾಗಿ ಪ್ರಧಾನವಾಯಿತು. ಜೈನರಂತಹ ಹಿಂದೂ ಜನಾಂಗದ ಕೆಲವು ಭಾಗಗಳಲ್ಲಿ, ದತ್ತುಸ್ವೀಕಾರ ಶುದ್ಧವಾದ ಜಾತ್ಯತೀತ ನೆಲಗಟ್ಟನ್ನು ಹೊಂದಿತು. ಜನಾಂಗದ ಇನ್ನಿತರ ಭಾಗಗಳಲ್ಲಿ ದತ್ತು ಸ್ವೀಕಾರ ಈ ರೀತಿ ಆಗಲಿಲ್ಲ.

ಗಂಡುಮಕ್ಕಳು, ಗಂಡುಮೊಮ್ಮಕ್ಕಳು ಮತ್ತು ಒಟ್ಟು ಕುಟುಂಬದ ಆಸ್ತಿಯಲ್ಲಿ ಅವರಿಗೆ ಪಾಲಿರುವಷ್ಟು ತಮ್ಮ ಪೂರ್ವಜರ ಸಾಲಗಳನ್ನು ತೀರಿಸಬೇಕೆಂದು ಹಿಂದೂ ಕಾನೂನು ವಿಧಿಸಿರುವ ಹೊಣೆಗಾರಿಕೆಯಲ್ಲಿ, ಸಮಾಜದಲ್ಲಿನ ಮತೀಯ ನಂಬಿಕೆಗಳು ಸಮಕಾಲೀನ ಕಾನೂನಿನ ಮೇಲೆ ಬೀರುವ ಪ್ರಭಾವವೂ ಕಂಡುಬರುತ್ತದೆ. ತನ್ನ ಸಾಲಗಳನ್ನು ತೀರಿಸದೇ ಸತ್ತ ಪೂರ್ವಜನ ಆತ್ಮಕ್ಕೆ ಶಾಂತಿಯೇ ಇರುವುದಿಲ್ಲವೆಂಬ ನಂಬಿಕೆಯೇ ಹೊಣೆಗಾರಿಕೆಯ ಮೂಲವಾಗಿದೆ. ಆದ್ದರಿಂದಲೇ ಗಂಡುಮಕ್ಕಳ ಮೇಲಣ ಹೊಣೆಗಾರಿಕೆಯನ್ನು ಧರ್ಮಶ್ರದ್ಧೆಯುಳ್ಳ ಹೊಣೆಗಾರಿಕೆಯೆಂದು ವಿವರಿಸಲಾಯಿತು. ಅದರ ಕಾಠಿಣ್ಯಗಳನ್ನು ಕಡಿಮೆ ಮಾಡಿದ್ದರೂ, ಹೊಣೆಗಾರಿಕೆ ಇಂದಿಗೂ ಬದುಕುಳಿದಿದೆ.

ಅಂತಿಮವಾಗಿ, ಸಾಮಾಜಿಕ ಬದಲಾವಣೆ ಮತ್ತು ಪರಿವರ್ತನೆ ಮತ್ತು ಕಾನೂನಿನ ಬೆಳವಣಿಗೆ ನಡುವಣ ಸಂಬಂಧವನ್ನು ಅಧ್ಯಯನ ಮಾಡುವುದರಲ್ಲಿ ಆಸಕ್ತರಾದ ಯಾರೇ ಆಗಲೀ, ಯುಗಗಳಿಂದ, ಕಾಲದಿಂದ ಕಾಲಕ್ಕೆ ಹಿಂದೂ ಕಾನೂನಿನಲ್ಲಿ ಆಚರಣೆಯಲ್ಲಿರುವ ವಿವಾಹದ ಸ್ವರೂಪಗಳ ಕಡೆ ಕಣ್ಣು ಹಾಯಿಸುವುದಕ್ಕಿಂತ ಉತ್ತಮವಾದದ್ದನ್ನು ಮಾಡಲು ಸಾಧ್ಯವಿಲ್ಲ. ಈ ಸ್ವರೂಪಗಳಲ್ಲಿ ಪ್ರತಿಯೊಂದೂ ಸಮಾಜದ ಸಂಸ್ಕೃತಿ ಮತ್ತು ಸಾಮಾಜಿಕ ಬೆಳವಣಿಗೆಯ ಒಂದು ಹಂತಕ್ಕೆ ಮಾದರಿಯಾಗುತ್ತದೆ. ಬಲಪ್ರಯೋಗದಿಂದ ನಡೆಸಲ್ಪಟ್ಟ ಮದುವೆಗಳನ್ನೊಳಗೊಂಡ ಹಳೆಯ ಮಾದರಿಗಳು ಈಗ ಹಳತಾಗಿ ಹೋಗಿ, ಅವುಗಳನ್ನು ಮಾನ್ಯತೆ ಇಲ್ಲದ ವಿವಾಹ ಸ್ವರೂಪಗಳಾಗಿ ಕರೆಯಲಾಗಿದೆ. ಪ್ರಚಲಿತ ಸಾಮಾಜಿಕ ಆಚರಣೆಗಳು ಮತ್ತು ಭಾವನೆಗಳಿಗೆ ಅನುಗುಣವಾಗಿರುವ "ಬ್ರಹ್ಮ" ಮತ್ತು "ಅಸುರ" ಮಾದರಿಯ ಎರಡು ವಿವಾಹಗಳು ಮಾತ್ರ ಎಂಟು ಮಾದರಿಗಳ ಪೈಕಿ ಇಂದಿಗೂ ಬದುಕುಳಿದಿವೆ.

ನಾನು ಈಗ ವಿಶದಪಡಿಸಿರುವ ಚಿತ್ರ, ಪ್ರಾಚೀನ ಭಾರತದಲ್ಲಿ ಸಮಾಜ ಮತ್ತು ಅದರ ಸಂಪ್ರದಾಯಗಳು ಮತ್ತು ನಂಬಿಕೆಗಳು ಕಾನೂನಿನ ಮೇಲೆ ವ್ಯಾಪಕವಾದ ಪರಿಣಾಮವನ್ನು ಬೀರಿವೆ ಮತ್ತು ಕಾನೂನೇನಾದರೂ ಬದಲಾಗಬೇಕಾದರೆ, ಅದರ ಬದಲಾವಣೆಗೆ ಚಾಲಕ ಬಲ ಸಮಾಜದಲ್ಲಿಯೇ ಉಗಮಹೊಂದಬೇಕು. ಅಂತಹ ಅಭಿಪ್ರಾಯ ಸರಿಯಲ್ಲವೆಂದೇ ನನ್ನ ಚಿಂತನೆ, ಬಹುತೇಕ ದೇಶಗಳಲ್ಲಿ ಕಾನೂನನ್ನು ರೂಪಿಸುವುದರಲ್ಲಿ ಸಮಾಜವೇ ಪ್ರಧಾನವಾದ



ಪ್ರಭಾವವನ್ನು ಬೀರುತ್ತಿತ್ತೆಂಬುದು ನಿಸ್ಸಂಶಯವಾದದ್ದು. ಕಾನೂನನ್ನು ಪ್ರಗತಿಪರವಾಗಿ ಮಾಡುತ್ತಿದ್ದ ಮತ್ತು ಸಮಾಜವನ್ನೇ ಬದಲಾಯಿಸುವ ಉಪಕರಣವನ್ನಾಗಿ ಕಾನೂನನ್ನು ರೂಪಿಸುತ್ತಿದ್ದ ಬುದ್ಧಿವಂತ ಹಾಗೂ ದೂರದೃಷ್ಟಿಯುಳ್ಳ ಜನಗಳೂ ಅದೇ ಕಾಲದಲ್ಲಿ ಇದ್ದರು. ಮಹಾನ್ ಸ್ಮೃತಿಕಾರ ಮುನಿಗಳು ಮತ್ತು ವಿದ್ವಾಂಸರಾದ ಭಾಷ್ಯಕಾರರು ಬದಲಾಗುತ್ತಿರುವ ಅಗತ್ಯತೆಗಳಿಗೆ ಕಾನೂನನ್ನು ಹೊಂದಾಣಿಕೆ ಮಾಡುವುದರಲ್ಲಿ ನಿರ್ವಹಿಸಿದ ಪಾತ್ರವನ್ನು ನಾವು ನೋಡಿದ್ದೇವೆ. ದ್ರಷ್ಟಾರರಾದ ಅವರು ಮಹತ್ತರವಾದ ಪಾತ್ರವನ್ನೇ ಆಗಿಂದಾಗ್ಗೆ ನಿರ್ವಹಿಸಿದರು. ಸಾಮಾಜಿಕ ಅಭಿಪ್ರಾಯ ರೂಪುಗೊಳ್ಳುವುದಕ್ಕೆ ಮುಂಚೆಯೇ ಅವರು ಆಗಿಂದಾಗ್ಗೆ ಬದಲಾವಣೆಗಳನ್ನು ಮಾಡುತ್ತಿದ್ದರು, ಮತ್ತು ಜನಾಂಗದಲ್ಲಿ ಹೊಸ ಸಂಪ್ರದಾಯಗಳು ಮತ್ತು ಆಚರಣೆಗಳು ರಚಿತವಾಗಲು ಸಹಾಯಕರಾಗಿದ್ದರು. ಈ ಕಾನೂನು ರಚನಾಕಾರರು ಮತ್ತು ವಿದ್ವತ್ತಿನಿಂದ ಕೂಡಿದ ಬ್ರಾಹ್ಮಣರು, ನ್ಯಾಯ ನಿರ್ವಹಣೆಯಲ್ಲಿ ದೊರೆಗೆ ಮತ್ತು ಅವನ ಅಧಿಕಾರಿಗಳಿಗೆ ಸಲಹೆ ನೀಡುತ್ತಿದ್ದರು. ಅವರು ದೂರದೃಷ್ಟಿಯುಳ್ಳವರಾಗಿ ಕಾಲದಿಂದ ಕಾಲಕ್ಕೆ ನ್ಯಾಯಮೀಮಾಂಸೆ ಮತ್ತು ಸಿದ್ಧಾಂತಗಳನ್ನು ರೂಪಿಸಿ ಪ್ರಗತಿಪಥಕ್ಕೆ ಬೆಳಕು ಚೆಲ್ಲಿದರು. ಸಮಾಜದ ನಿರ್ಮಾಣಕಾರರೂ ದೂರದೃಷ್ಟಿಯುಳ್ಳವರೂ ಮತ್ತು ವಿದ್ವಾಂಸರೂ ಆಗಿದ್ದ ಈ ಕಾನೂನು ರಚನಾಕಾರರಿಲ್ಲದಿದ್ದರೆ, ಪ್ರಾಚೀನ ಭಾರತ ತನ್ನ ವೈಭವವನ್ನು ಮೆರೆದು ಕಲೆ, ಸಾಹಿತ್ಯ ಮತ್ತು ತತ್ವಶಾಸ್ತ್ರಗಳಲ್ಲಿ ಗಮನಾರ್ಹ ಪ್ರಗತಿಯನ್ನು, ಸಾಧಿಸಲು ಆಗುತ್ತಿರಲಿಲ್ಲ.

* * * *

# ೩. ಆಧುನಿಕ ಭಾರತದಲ್ಲಿ ಕಾನೂನು ಮತ್ತು ಸಂಸ್ಕೃತಿ

ಹಿಂದಿನ ಅಧ್ಯಾಯದಲ್ಲಿ ನಾವು ಪ್ರಾಚೀನ ಭಾರತದಲ್ಲಿ ಕಾನೂನು ಮತ್ತು ಸಂಸ್ಕೃತಿಯನ್ನು ಕುರಿತು ಹೇಳಿದ್ದಾಯಿತು. ನಮ್ಮ ಚರ್ಚೆಯ ಉದ್ದೇಶಗಳಿಗಾಗಿ ಪ್ರಾಚೀನ ಮತ್ತು ಆಧುನಿಕ ಭಾರತದ ನಡುವೆ ರೇಖೆಯನ್ನೆಳೆಯುವುದು ಕಷ್ಟವೇ ಸರಿ. ಭಾರತದ ಮಟ್ಟಿಗೆ ಹೇಳುವುದಾದರೆ "ಕ್ರಿ. ಶ. 700ರ ನಂತರದ ಅವಧಿ ಕತ್ತಲೆಯ ಮತ್ತು ಒಡಕಿನ ಅವಧಿಯೇ ಆಗಿತ್ತು. ಜನಪ್ರಿಯ ಸಂಸ್ಥೆಗಳು ನಶಿಸಿದವು ಮತ್ತು ಹಿಂದೂ ಸಂಪ್ರದಾಯಗಳು ಕ್ಷೀಣಿಸಿದವು. ವಿದೇಶೀಯರಿಂದ ಮೇಲಿಂದ ಮೇಲೆ ದಂಡಯಾತ್ರೆಗಳು ಪ್ರಾರಂಭವಾದ ಅವಧಿಯನ್ನು ಭಾರತೀಯ ಇತಿಹಾಸದ ಪ್ರಾಚೀನ ಮತ್ತು ಆಧುನಿಕ ಅವಧಿಗಳ ನಡುವಣ ವಿಭಜಕವೆಂದೇ ನಮ್ಮ ಉದ್ದೇಶಕ್ಕಾಗಿ ಪರಿಗಣಿಸಬಹುದು."

ಒಂದಾದ ಮೇಲೊಂದರಂತೆ ಅಲೆಗಳಂತೆ ಬಂದ ಮುಸ್ಲಿಮರ ದಂಡಯಾತ್ರೆಗಳು ಪ್ರಥಮತಃ ಉಪಖಂಡದ ಉತ್ತರ ಮತ್ತು ಪಶ್ಚಿಮ ಭಾಗಗಳ ಮೇಲೆ ನಡೆದು ನಂತರ ದಕ್ಷಿಣದ ಕೊನೆಯವರೆಗೂ ವ್ಯಾಪಿಸಿದವು. ಭಾರತೀಯರ ಆಚರಣೆಗಳು, ನಡೆನುಡಿ ಮತ್ತು ಸಂಸ್ಕೃತಿಯ ಮೇಲೆ ಅವು ನಿಸ್ಸಂಶಯವಾಗಿ ತೀವ್ರ ಪರಿಣಾಮವನ್ನುಂಟುಮಾಡಿದವು. ಆದಾಗ್ಯೂ, ಭಾರತೀಯ ಚಿಂತನದ ರೀತಿ ಮತ್ತು ಜೀವನದ ರೀತಿಯ ಚೇತರಿಸಿಕೊಳ್ಳುವ ಶಕ್ತಿ ಎಷ್ಟರಮಟ್ಟಿಗೆ ಇತ್ತೆಂದರೆ ಮತ್ತು ಹಿಂದೂ ಮತ ಮತ್ತು ತತ್ವಶಾಸ್ತ್ರದ ಚೈತನ್ಯ ಎಷ್ಟು ಹೊಂದಿಕೊಂಡು ಹೋಗುವಂತಿತ್ತೆಂದರೆ ಮುಸ್ಲಿಮರ ಪ್ರಭಾವಗಳು ಪ್ರಾಚೀನ ಭಾರತೀಯ ವಿನ್ಯಾಸದ ಆಯಕಟ್ಟನ್ನು ಮಾತ್ರ ಸ್ಪರ್ಶಿಸಿದವೆಂದು ಹೇಳಬಹುದು. ಹಿಂದೂಗಳ ಆಚರಣೆಗಳು ಮತ್ತು ನಡತೆಗಳ ಬಹುಭಾಗವನ್ನು ಮುಸ್ಲಿಮರು ಮುಟ್ಟಲಿಲ್ಲ. ಕೇಂದ್ರಸ್ಥಾನದಲ್ಲಿ ಆಳುವವರಿಂದ ನಿಯಂತ್ರಿಸಲ್ಪಟ್ಟ ನ್ಯಾಯಾಲಯಗಳು ಪಂಡಿತರಿಂದ ವ್ಯಾಖ್ಯಾನಿಸಲ್ಪಟ್ಟಿದ್ದ ಶಾಸ್ತ್ರಗಳ ಪ್ರಕಾರವೇ ಹಿಂದೂ ಕಾನೂನನ್ನು ವಿಶ್ಲೇಷಿಸುತ್ತಿದ್ದವು. ಜನಸಂಖ್ಯೆಯ ಬಹುಭಾಗಕ್ಕೆ ಗ್ರಾಮ ಪಂಚಾಯಿತಿಗಳು ಮತ್ತು ಗ್ರಾಮೀಣ ಆಡಳಿತ ತಾವು ಹೊಂದಿಕೊಂಡಿದ್ದರ ಕಾನೂನುಗಳ ಪ್ರಕಾರವೇ ಆಡಳಿತ ನಡೆಸಿದವು.



ಹಿಂದೂಗಳ ಭಾವನೆಗಳು ಮತ್ತು ಜೀವನ ಶೈಲಿ ಎಷ್ಟು ವ್ಯಾಪಕವಾಗಿತ್ತೆಂದರೆ, ಭಾರತದಲ್ಲೇ ನೆಲೆಸಿದ ಮುಸ್ಲಿಮರು ಮತ್ತು ಅವರ ಸಂತತಿಯವರು ಕಾಲಕ್ರಮೇಣ ಹಿಂದೂ ಸಂಸ್ಕೃತಿ ಮತ್ತು ಹಿಂದೂ ಜೀವನ ಶೈಲಿಯ ಪ್ರಮುಖವಾದ ವೈಶಿಷ್ಟ್ಯಗಳನ್ನು ಅಳವಡಿಸಿಕೊಂಡರು. ಆದರೆ ಮುಸ್ಲಿಮರ ದಂಡಯಾತ್ರೆಗಳು ಮತ್ತು ನಂತರದ ಮುಸ್ಲಿಮರ ಪ್ರಭಾವಗಳು ಹಿಂದೂ ಸಮಾಜದ ಮೇಲೆ ಯಾವ ಗಣನೀಯ ಗುರುತನ್ನು ಬಿಡಲಿಲ್ಲವೆಂದು ಮಾತ್ರ ಹೇಳಲಾಗದು. ಭಾರತದಲ್ಲೇ ನೆಲೆಸಿದ್ದ ಮುಸ್ಲಿಮರು ಹಿಂದೂ ಚಿಂತನೆಗಳು ಮತ್ತು ಸಂಪ್ರದಾಯಗಳಿಂದ ಬಹುಮಟ್ಟಿಗೆ ಪ್ರಭಾವಿತರಾಗಿದ್ದರೂ, ಹಿಂದೂಗಳು ಕೂಡ ತಮ್ಮ ಸರದಿ ಬಂದಾಗ ಮುಸ್ಲಿಮರ ಅನೇಕ ಅಭ್ಯಾಸಗಳು ಮತ್ತು ಆಲೋಚನೆಯ ಸ್ವಭಾವಗಳನ್ನು ಅಂತರ್ಗತ ಮಾಡಿಕೊಂಡರು. ಭಾರತದ ಕೆಲವು ಭಾಗಗಳಲ್ಲಿ ಪರ್ದಾ ಪದ್ಧತಿ ಇರುವುದೇ ಇದಕ್ಕೆ ಸಾಕ್ಷಿಯಾಗಿದೆ. ಇದಲ್ಲದೇ ಆಗಿನ ದಿನಗಳ ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಗಳೂ ಸಾಕ್ಷಿಯಾಗಿವೆ. ಪ್ರಾಯಶಃ ಮುಸ್ಲಿಮರ ಮೇಲೆ ಹಿಂದೂ ಸಮಾಜದ ಹೆಚ್ಚಿನ ಪ್ರಭಾವಕ್ಕೆ ಕಾರಣವೆಂದರೆ, ಹೆಚ್ಚು ಪ್ರಾಚೀನವಾದ ಮತ್ತು ಹೆಚ್ಚು ಅಭಿವೃದ್ಧಿಹೊಂದಿದ ಜೀವನ ವ್ಯವಸ್ಥೆಯೊಡನೆ ಶಕ್ತಿಯುತವಾದ ಮುಸ್ಲಿಂ ನಾಗರಿಕತೆ ಸಂಪರ್ಕ ಪಡೆದದ್ದು. ಜನಸಂಖ್ಯೆಯ ಎರಡು ಬೃಹತ್ ಭಾಗಗಳ ನಡುವೆ ಭಾವನೆಗಳು ಮತ್ತು ಸಂಪ್ರದಾಯಗಳ ಪರಸ್ಪರ ವಿನಿಮಯದ ವಿಷಯಕ್ಕೂ ನಮ್ಮ ಪರಿಗಣನೆಯ ವಿಷಯವಾದ ಕಾನೂನು ಮತ್ತು ಸಂಸ್ಕೃತಿಯ ಪರಸ್ಪರ ಸಂಬಂಧಕ್ಕೂ ಯಾವ ರೀತಿಯಾದ ಇಲ್ಲ. ಅದು ಎರಡು ಸಂಸ್ಕೃತಿಗಳ ಸಂಯೋಜನೆಯಾಗಿದ್ದು, ಒಂದು ಇನ್ನೊಂದನ್ನು ನಿರ್ದಿಷ್ಟವಾದ ಮಟ್ಟಕ್ಕೆ ಕೊಂಡೊಯ್ದು, ನಾವೀಗ ಮಾನ್ಯತೆ ನೀಡಿರುವ ಭಾರತೀಯ ಸಂಸ್ಕೃತಿಯಾಗಿ ಪರ್ಯವಸಾನಗೊಂಡಿತು.

ಮೊದಲು ವ್ಯಾಪಾರಿಗಳಾಗಿ ಭಾರತಕ್ಕೆ ಬಂದ ಬ್ರಿಟಿಷರು ಮತ್ತು ನಂತರದ ದಿನಗಳಲ್ಲಿ ಅವರು ಆಳರಸರಾದದ್ದು ಸಂಪೂರ್ಣವಾಗಿ ಬೇರೆ ತರಹದ ವೈಶಿಷ್ಟ್ಯಗಳನ್ನು ಹೊಂದಿತ್ತು. ಅದು ವಿಶಾಲವಾದ ಮತ್ತು ಅಧಿಕ ಪ್ರಮಾಣದ ಪರಿಣಾಮವನ್ನು ಉಪಖಂಡದಲ್ಲಿ ವಾಸವಾಗಿದ್ದವರ ಕಾನೂನು, ಜೀವನ ಮತ್ತು ಸಂಸ್ಕೃತಿಯ ಮೇಲೆ ಬೀರಿತು. ಬ್ರಿಟಿಷರು ಭಾರತವನ್ನು ಮುಸ್ಲಿಮರಂತೆ, ತಮ್ಮ ಮನೆಯಾಗಿ ಮಾಡಿಕೊಳ್ಳಲಿಲ್ಲ. ಆದರೆ ಅವರು ತಮ್ಮೊಡನೆ ತಮ್ಮ ಕಾನೂನುಗಳು ಮತ್ತು ಸರ್ಕಾರದ ಮಾದರಿಗಳನ್ನು ತಂದರು. ಅದು ಕ್ರಮೇಣ ದೇಶವನ್ನೇ ಪರಿವರ್ತಿಸಿತು ಮತ್ತು ಸಂಪೂರ್ಣವಾಗಿ ಸ್ಥಳೀಯ ಕಾನೂನುಗಳ ಮತ್ತು ಆಡಳಿತ ವ್ಯವಸ್ಥೆಯನ್ನು ಬದಲಾಯಿಸಿತು. ಇವುಗಳು ಅಗತ್ಯವಾಗಿ ಜನಗಳ ಜೀವನ ಮತ್ತು ಪದ್ಧತಿಗಳ ಮೇಲೆ ಅಧಿಕ ಪ್ರಮಾಣದ ಪರಿಣಾಮಗಳನ್ನುಂಟು ಮಾಡಿದವು. ಮತ್ತು

ಶತಮಾನಗಳ ಅವಧಿಯಲ್ಲಿ ಧ್ಯೇಯೋದ್ದೇಶಗಳಲ್ಲಿ ಕ್ರಾಂತಿಯನ್ನೇ ಉಂಟುಮಾಡಿದವು. ವಿಶಾಲವಾದ ಮತ್ತು ಜನಭರಿತವಾದ ಪ್ರದೇಶಗಳಲ್ಲಿ ಹೀಗಾಗುವುದು ಅಪರೂಪವೆಂದೇ ಹೇಳಬೇಕು.

ದೇಶದಲ್ಲಿ ಬ್ರಿಟಿಷರ ಆಡಳಿತ ಭದ್ರವಾಗಿ ತಳ ಊರಿದ ಕೂಡಲೇ ಜಾರಿಗೊಳಿಸಿದ ನ್ಯಾಯಾಡಳಿತ ವ್ಯವಸ್ಥೆ ಮುಸ್ಲಿಮರು ಮತ್ತು ಹಿಂದೂಗಳ ಕಾಲದ ನ್ಯಾಯಾಡಳಿತ ವ್ಯವಸ್ಥೆಗಿಂತ ಬಹುಮಟ್ಟಿಗೆ ಭಿನ್ನವಾಗಿತ್ತು. ಆಂಗ್ಲರು ಕ್ರಮೇಣ ನ್ಯಾಯ, ಧರ್ಮ ಮತ್ತು ಸತ್ ಪ್ರಜ್ಞೆಯ ಹೆಸರಿನಲ್ಲಿ ಆಡಳಿತ ನಡೆಸಿದ್ದೂ ಭಾರತೀಯರಿಗೆ ವಿದೇಶೀಯವೇ ಆಗಿತ್ತು. ಹಿಂದೂಗಳಿಗೆ ಮತ್ತು ಮುಸ್ಲಿಮರಿಗೆ ಅವರ ವೈಯಕ್ತಿಕ ಕಾನೂನುಗಳನ್ನೇ ಸಾಧ್ಯವಾದಷ್ಟು ಮಟ್ಟಿಗೆ ಅನ್ವಯಿಸಲು ಪ್ರಯತ್ನಿಸಿದರೆಂಬುದು ಸಂಶಯಾತೀತವೇ ಸರಿ. ಆದರೆ ಈ ಕಾನೂನುಗಳು ಜನಗಳ ಜೀವನ ಮತ್ತು ಪದ್ಧತಿಗಳ ಒಂದು ಕಿರಿದಾದ ಭಾಗಕ್ಕೆ ಮಾತ್ರ ಸೀಮಿತವಾಗಿದ್ದವು. ಕಂದಾಯವನ್ನು ಕೊಡುತ್ತಿದ್ದ ಕೃಷಿಕ, ತನ್ನ ವ್ಯವಹಾರವನ್ನು ನಡೆಸುತ್ತಿದ್ದ ವ್ಯಾಪಾರಿ ಮತ್ತು ಬೆಳೆಯುತ್ತಿದ್ದ ನಗರಗಳು ಮತ್ತು ಪಟ್ಟಣಗಳಲ್ಲಿ ವಾಸಿಸುತ್ತಿದ್ದ ಜನರು, ಆಂಗ್ಲರ ಕಾಮನ್ ಲಾ ಮತ್ತು ಶಾಸನಗಳು ಮತ್ತು ಆಂಗ್ಲರ ಧರ್ಮನ್ಯಾಯದ ನಿಯಮಗಳ ಹಿಂದಣ ಮೂಲತತ್ವಗಳ ಮೇಲೆ ಬಹುಮಟ್ಟಿಗೆ ಆಧಾರಿತವಾದ ಕಾನೂನುಗಳ ಬೃಹತ್ ಜಾಲಬಂಧವನ್ನೇ ಕ್ರಮೇಣ ಎದುರಿಸಬೇಕಾಯಿತು. ಈ ರೀತಿ ವಿನ್ಯಾಸಗೊಂಡ ಕಾನೂನುಗಳ ವ್ಯವಸ್ಥೆ ತಾವು ಪರಿಣಾಮ ಉಂಟುಮಾಡಿದ ಜನಗಳ ಜೀವನ, ಭಾವನೆಗಳು ಮತ್ತು ಆಚರಣೆಗಳ ಮೇಲೆ ಮಹತ್ತರ ಪ್ರಭಾವವನ್ನು ಬೀರಿದ್ದು ಅನಿವಾರ್ಯವೇ ಆಗಿತ್ತು.

ಬಂಗಾಳದ ಸ್ಥಿರವಾದ ಭೂ ಕಂದಾಯ ವ್ಯವಸ್ಥೆ ಮತ್ತು ಬ್ರಿಟಿಷರು ಶಾಸನ ರೂಪದಲ್ಲಿ ತಂದ ನಿಯಮಗಳ ರೂಪದ ಇನ್ನಿತರ ಶಾಸನಗಳು ಭೂವ್ಯವಸಾಯಕ್ಕೆ ಸಂಬಂಧಿಸಿದ ಜೀವನದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದವು. ಆಂಗ್ಲರು ಈ ನಿಯಮಗಳನ್ನು ಜಾರಿಗೊಳಿಸಿದ್ದಕ್ಕೆ ಕಾರಣ ಪ್ರಭಾವಶಾಲೀ ಶ್ರೀಮಂತ ಜಮೀನುದಾರರ ಒಂದು ವರ್ಗವನ್ನೇ ಸೃಷ್ಟಿ ಮಾಡಿ, ತುರ್ತು ಪರಿಸ್ಥಿತಿಯಲ್ಲಿ ವಿದೇಶೀ ಸರ್ಕಾರದ ನೆರವಿಗೆ ಬರುವಂತೆ ಮಾಡುವುದೇ ಆಗಿತ್ತೆಂದು ಹೇಳಲಾಗಿದೆ. ಉದ್ದೇಶವೇನೇ ಇರಲಿ, ವಾಸ್ತವಿಕವಾಗಿ ಭೂವ್ಯವಸಾಯ ಮಾಡುತ್ತಿದ್ದವನಿಗೆ ಕುಂದುಂಟುಮಾಡುವಂತೆ ಗ್ರಾಮೀಣ ಭಾಗಗಳಲ್ಲಿ ಗಮನಾರ್ಹ ಬದಲಾವಣೆಯನ್ನು ಉಂಟುಮಾಡುವುದೇ ಈ ಆಡಳಿತಾತ್ಮಕ ನಿರ್ಧಾರಕ್ಕೆ ಕಾರಣವಾಗಿತ್ತು. ಜಮೀನನ್ನು ವ್ಯವಸಾಯ ಮಾಡಿದ ಬೃಹತ್ ಸಂಖ್ಯೆಯ ಮಧ್ಯವರ್ತಿಗಳ ಬೆಳವಣಿಗೆಗೆ ಕ್ರಮೇಣ ಇದು ದಾರಿಮಾಡಿತು. ಇದರಿಂದ ಬರುವ ಆದಾಯದಿಂದ ಈ ಮಧ್ಯವರ್ತಿಗಳು



ಜೀವಿಸಿ ಕೊಬ್ಬಿದರು. ಕಾಲಕ್ರಮೇಣ ಮಧ್ಯವರ್ತಿಗಳಿಂದ ಗೇಣಿದಾರನಾಗಿದ್ದವನ ಸ್ಥಿತಿ ನಾಶವಾಗುತ್ತಲೇ ಹೋಯಿತು. ದುಬಾರಿ ಕಂದಾಯವನ್ನು ವಿಧಿಸುವುದರ ವಿರುದ್ಧ ರಕ್ಷಣೆ ನೀಡಲು ಮತ್ತು ಜಮೀನುದಾರರ ಒತ್ತಡಗಳಿಂದ ರಕ್ಷಿಸಲು ಶೀಘ್ರವೇ ಕಾನೂನು ಮಾಡಬೇಕಾಯಿತು. ರಾಷ್ಟ್ರದ ಈಶಾನ್ಯಭಾಗ ಮತ್ತು ಮಧ್ಯಭಾಗಗಳಲ್ಲಿ ಹರಡಿದ್ದ ಜಮೀನ್ದಾರೀ ವ್ಯವಸ್ಥೆ ದಕ್ಷಿಣದ ಕೊನೆಯವರೆವಿಗೂ ವ್ಯಾಪಿಸಿತ್ತು. ರಾಷ್ಟ್ರದ ಸಾಮಾಜಿಕ ಜೀವನದ ಮೇಲೆ ಆಂಗ್ಲರ ಕಾನೂನುಗಳು ಸಾಮಾನ್ಯವಾಗಿ ಹೆಚ್ಚು ಪ್ರಭಾವವನ್ನು ಬೀರಿದರೂ, ಈ ನಿಯಂತ್ರಣಗಳಷ್ಟು ಪ್ರಭಾವಿತವಾಗಿರುವ ಇನ್ನಾವುದನ್ನೂ ಆಯ್ಕೆ ಮಾಡುವುದು ಕಠಿಣವೇ ಸರಿ. ಜನಸಂಖ್ಯೆಯ ಹತ್ತನೆಯ ಒಂಬತ್ತು ಭಾಗದಷ್ಟು ಜನ ಜಮೀನನ್ನು ಅವಲಂಬಿಸಿರುವುದರಿಂದ ಈ ಮಾರ್ಪಾಡುಗಳು ಭೂಮಿಯನ್ನು ಉಳುವ ಬಹು ದೊಡ್ಡ ಸಂಖ್ಯೆಯ ಮೇಲೆ ಪರಿಣಾಮ ಬೀರಿದವು. ಈ ರೈತರುಗಳು ಸ್ಥಿರವಾದ ಭೂ ಕಂದಾಯ ವ್ಯವಸ್ಥೆಯಿಂದ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು ಮತ್ತು ಆ ವ್ಯವಸ್ಥೆಯಿಂದ ಆಚರಣೆಗೆ ಬಂದ ಅನೇಕ ಭೂ ವ್ಯವಸ್ಥೆಗಳ ಮೇಲೂ ಪರಿಣಾಮ ಉಂಟಾಯಿತು. ಇಷ್ಟಲ್ಲದೇ ರಾಷ್ಟ್ರದಲ್ಲಿ ಬಹು ದೊಡ್ಡ ವೈವಿಧ್ಯತೆಯಿಂದ ಕೂಡಿದ ಭೂ ಹಿಡುವಳಿ ವ್ಯವಸ್ಥೆಗಳು ಉದ್ಭವಿಸಿದವು.

ರಾಷ್ಟ್ರದ ಕೆಲವು ನಿರ್ದಿಷ್ಟ ಭಾಗಗಳಲ್ಲಿ ಭೂಕಂದಾಯ ವ್ಯವಸ್ಥೆಯ ಕಾನೂನಿನಲ್ಲಿರದ ಮಹತ್ವದ ಬದಲಾವಣೆಗಳನ್ನು ಬಿಟ್ಟು, ರಾಷ್ಟ್ರದ ವಿವಿಧ ಭಾಗಗಳಿಗೆ ಅನ್ವಯವಾಗುವ ಕಾನೂನುಗಳ ವೈವಿಧ್ಯತೆಯ ಕಾರಣ ತುಂಬಾ ಗೊಂದಲವನ್ನುಂಟುಮಾಡುವ ಸ್ಥಿತಿಗತಿಗಳುಂಟಾದವು. ಪರಸ್ಪರ ತುಂಬಾ ಭಿನ್ನವಾಗಿರುವ ಆದರೆ ಸಹಬಾಳ್ವೆ ನಡೆಸುತ್ತಾ ಸಮಾನವಾಗಿದ್ದ ಈ ಕಾನೂನುಗಳ ಮಿಶ್ರಣದ ಕಾರಣ 1833ರ ಪ್ರಣಾಳಿಕೆಯ ಶಾಸನ ರಚನೆಯಾಯಿತು. ಈ ಶಾಸನ ಭಾರತದ ಮೊದಲ ಕಾನೂನು ಆಯೋಗದ ರಚನೆಗೆ ಸೂಕ್ತ ವಿಧಿಗಳನ್ನೊದಗಿಸಿತು. ಸಂಸತ್ತಿನಲ್ಲಿ ಮಸೂದೆಯ ಮೇಲೆ ಮಾತನಾಡಿದ ಮೆಕಾಲೆಯವರು ಹೀಗೆ ಹೇಳಿದರು "ಭಾರತದಷ್ಟು ಕಾನೂನು ಸಂಗ್ರಹದ ಅಗತ್ಯತೆಯಿದ್ದ ಇನ್ನಾವ ದೇಶವೂ ಇಲ್ಲವೆಂದು ನಂಬುತ್ತೇನೆ."

ಬದಲಾಗುತ್ತಿದ್ದ ಕಾನೂನಿನ ಅಗತ್ಯತೆಗಳಿಗೆ ಭಾರತೀಯ ಕಾನೂನನ್ನು ಹೊಂದಾಣಿಕೆ ಮಾಡಲು ಪ್ರಯತ್ನಿಸುತ್ತಿದ್ದ ಪ್ರಾಚೀನ ಟೀಕಾಕಾರರು ಮರೆಯಾಗಿಬಿಟ್ಟಿದ್ದರು. ಅದರ ಬದಲಾಗಿ, ಬ್ರಿಟಿಷರ ಆಡಳಿತದ ಕೆಳಗೆ ಬ್ರಿಟಿಷರ ನ್ಯಾಯತತ್ವದಲ್ಲಿ ನುರಿತು ತರಬೇತಿ ಹೊಂದಿದ್ದ ಭಾರತೀಯ ನ್ಯಾಯಶಾಸ್ತ್ರಜ್ಞರಿಂದ ನೆರವು ಪಡೆದ ಅನೇಕ ಆಂಗ್ಲ ನ್ಯಾಯಶಾಸ್ತ್ರಜ್ಞರು, ಭಾರತ ರಾಷ್ಟ್ರದ ಜೀವನ ಮತ್ತು

ಚಟುವಟಿಕೆಗಳನ್ನು ನಿಯಂತ್ರಿಸಲು ವಿನ್ಯಾಸಗೊಂಡಿರುವ ನ್ಯಾಯಸೂತ್ರಗಳು ಮತ್ತು ಕಾನೂನುಗಳನ್ನು ಸೂತ್ರೀಕರಣಗೊಳಿಸಲು ಕೆಲಸ ಮಾಡುತ್ತಿದ್ದುದನ್ನು ಕಾಣುತ್ತೇವೆ. ಭಾರತೀಯ ಪ್ರಜೆಗಳ ಆವಶ್ಯಕತೆಗಳಿಗೆ ಹೊಂದಿಕೊಳ್ಳುವಂತೆ ನ್ಯಾಯತತ್ವಗಳು ಮತ್ತು ನ್ಯಾಯಸಿದ್ಧಾಂತಗಳನ್ನು ಬಹುದೂರದ ನಾಗರಿಕತೆಯೊಂದರಲ್ಲಿ ರೂಪಿಸಲು ಅವರು ಪ್ರಯತ್ನಿಸುತ್ತಿದ್ದರು. ಅದೇನೂ ಅಷ್ಟು ಸುಲಭವಾದ ಕಾರ್ಯವಾಗಿರಲಿಲ್ಲ. ಆದಾಗ್ಯೂ ತಮ್ಮ ಮಹತ್ತರ ಪ್ರಯತ್ನದಲ್ಲಿ ಸಾಕಷ್ಟು ಯಶಸ್ಸನ್ನು ಗಳಿಸಿದರು. ಅವರ ಪರಿಶ್ರಮಗಳ ಪ್ರಥಮ ಫಲಿತಾಂಶವೇ ಪ್ರಪ್ರಥಮ ಬಾರಿಗೆ ಭಾರತದಾದ್ಯಂತ ಅಪರಾಧ ಮತ್ತು ಶಿಕ್ಷೆಗೆ ಸಂಬಂಧಿಸಿದ ಸಂಘಟಿತ ಕಾನೂನಾದ 1860ರ ಭಾರತೀಯ ದಂಡಸಂಹಿತೆ. ಆ ಕಾನೂನು ಬಹು ಕಡಿಮೆ ತಿದ್ದುಪಡಿಗಳಿಂದ ಒಂದು ಶತಮಾನಕ್ಕೂ ಮೀರಿ ಜಾರಿಯಲ್ಲಿದೆ. ಹಳೆಯದಾದ ಮತ್ತು ಕೆಲವು ಸಂದರ್ಭಗಳಲ್ಲಿ ಪ್ರಾಚೀನ ಹಿಂದೂ ಮತ್ತು ಮುಸ್ಲಿಂ ಅಪರಾಧ ಕಾನೂನಿಗೆ ಬದಲಾಗಿ ರಾಷ್ಟ್ರದಲ್ಲಿ, ಇಂಗ್ಲೆಂಡಿನಲ್ಲಿ ಜಾರಿಯಲ್ಲಿದ್ದ ಅಪರಾಧಿ ಕಾನೂನಿಗಿಂತ ಅನೇಕ ವಿಷಯಗಳಲ್ಲಿ ಮುಂದಾಗಿದ್ದ ಕ್ರಿಮಿನಲ್ ಕಾನೂನಿನ ವ್ಯವಸ್ಥೆಯೊಂದನ್ನು ಜಾರಿಗೆ ತರಲಾಯಿತು. ಜನರ ಜೀವನ ಮತ್ತು ಆಚರಣೆಗಳ ಮೇಲೆ ಅದರ ಪರಿಣಾಮಗಳನ್ನು ಮೌಲ್ಯಮಾಪನ ಮಾಡಲು ಕಷ್ಟವಾದರೂ, ನಿಸ್ಸಂಶಯವಾಗಿ ಅದು ಅಗಾಧ ಪ್ರಭಾವ ಬೀರಿತ್ತು.

ಇದಾದ ಕೂಡಲೇ ದಂಡ ನ್ಯಾಯ ಮತ್ತು ಪೌರ ವಿಷಯಗಳಲ್ಲಿ ಪ್ರಕ್ರಿಯೆಯನ್ನು ವಿಧಿಸುವ ನಿಯಮ ಸಂಗ್ರಹಗಳು ಜಾರಿಗೆ ಬಂದವು. ಅವು ಪ್ರಕ್ರಿಯಾ ಕ್ಷೇತ್ರಕ್ಕೆ ಸಂಬಂಧಿಸಿದ್ದರೂ, ನಿಸ್ಸಂಶಯವಾಗಿ ಭಾರತೀಯ ಸಮಾಜದ ಮೇಲೆ ಆಳವಾದ ಪ್ರತಿಕ್ರಿಯೆಯನ್ನುಂಟು ಮಾಡಿದವು. ತನ್ನ ಸಹಜ ಚಟುವಟಿಕೆಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ನ್ಯಾಯಾಡಳಿತ ವ್ಯವಸ್ಥೆ ಸಮಾಜಕ್ಕೆ ಅತ್ಯಗತ್ಯ. ಪ್ರಕ್ರಿಯಾ ಶಾಸನಗಳು ಸಾಮಾಜಿಕ ಜೀವನದ ಮೇಲೆ ತಮ್ಮದೇ ಆದ ಪ್ರಭಾವವನ್ನು ಸಹ ಬೀರುತ್ತವೆ. ಈ ಪ್ರಕ್ರಿಯಾ ಶಾಸನಗಳು ಕ್ರಮೇಣ ಭಾರತೀಯ ಜನಜೀವನ ಇನ್ನೂ ಹೆಚ್ಚಿಗೆ ಸುವ್ಯವಸ್ಥಿತವಾಗಲು ಕಾರಣವಾದವೆಂದು ಹೇಳಿದರೆ, ನನ್ನ ದೃಷ್ಟಿಯಲ್ಲಿ ಇಲ್ಲವೆನ್ನುವಂತಿಲ್ಲ.

ಸಮಾಜ ಅಭಿವೃದ್ಧಿಹೊಂದಲು ಮತ್ತು ಬೆಳೆಯಲು ನೆರವು ನೀಡುವಲ್ಲಿ ಕಾನೂನುಗಳು ಉಪಕರಣಗಳಲ್ಲೊಂದಾಗಿವೆ. ಉದ್ಭವಿಸಿರುವ ಸಾಮಾಜಿಕ ಆವಶ್ಯಕತೆ ಅಥವಾ ಉದ್ಭವಿಸಬಹುದೆಂದು ನಿರೀಕ್ಷಿಸಿರುವ ಸಾಮಾಜಿಕ ಆವಶ್ಯಕತೆಯನ್ನು ಎದುರಿಸಲು ಸರ್ವೇಸಾಮಾನ್ಯವಾಗಿ ಕಾನೂನಿನಲ್ಲಿ ಬದಲಾವಣೆ ಆಗುತ್ತದೆ. ಅಭಿವೃದ್ಧಿ ಹೊಂದುತ್ತಿದ್ದ ಭಾರತೀಯ ವ್ಯಾಪಾರ ವಾಣಿಜ್ಯ ಈ ಕ್ಷೇತ್ರವನ್ನು



ನಿಯಂತ್ರಿಸುವ ಸ್ಥಳೀಯ ಕಾನೂನುಗಳು ಈ ಚಟುವಟಿಕೆಗಳನ್ನು ನಿಯಂತ್ರಿಸಲು ಅಸಮರ್ಪಕ ಇಲ್ಲವೇ ತೊಡಕಿನಿಂದ ಕೂಡಿವೆಯೆಂದು ಮನಗಂಡವು. ಕೂಡಲೇ ಆಂಗ್ಲ ಕರಾರಿನ ಕಾನೂನನ್ನು ಸ್ವಲ್ಪಸ್ವಲ್ಪವಾಗಿ ಅನ್ವಯಿಸಲು ರಾಷ್ಟ್ರದಲ್ಲಿ ಪ್ರಾರಂಭವಾಯಿತು. ಆಧುನಿಕ ವಾಣಿಜ್ಯ ವ್ಯವಹಾರದ ಬೆಳವಣಿಗೆಯೇ ಆಂಗ್ಲ ಕಾನೂನಿನ ಮೊರೆ ಹೋಗುವ ಹಿಂದಣ ನಿಜವಾದ ಸಕಾರಣಯುತ ಶಕ್ತಿಯಾಗಿತ್ತೆಂದು ಹೇಳಲಾಗಿದೆ. ಆಧುನಿಕ ವ್ಯಾಪಾರಕ್ಕೆ ಬನಿಯನಾಗಿ ಇಲ್ಲವೇ ಆಂಗ್ಲವ್ಯಾಪಾರೀ ಸಂಸ್ಥೆಯ ಗುಮಾಸ್ತನಾಗಿ ಭಾಗವಹಿಸಿದ ಹಿಂದೂಮತೀಯ ತನ್ನ ವ್ಯವಹಾರಗಳಿಗೆ ತನ್ನ ಯಜಮಾನನಿಗೆ ಅನ್ವಯವಾಗುವ ಕಾನೂನೇ ಅನ್ವಯವಾಗಬೇಕೆಂದು ಬಯಸುತ್ತಿದ್ದ. ತನ್ನದೇ ಆದ ಕಾನೂನಿನ ಪ್ರಯೋಜನವನ್ನು ಕೆಲವು ರೀತಿಯಲ್ಲಿ ತನಗೆ ನೀಡಬೇಕೆಂಬ ಮಹತ್ತರ ಆಕಾಂಕ್ಷೆಯನ್ನು ಹಿಂದೂವಾಗಲೀ, ಮುಸ್ಲಿಮನಾಗಲೀ ಹೊಂದಿದ್ದರೂ, ಮಿಕ್ಕ ವಿಷಯಗಳಲ್ಲಿ ಎಲ್ಲರಿಗೂ ಅನ್ವಯವಾಗುವಂತಹ, ಕಾರ್ಯಸಾಧ್ಯವಾದಂತಹ "ಕಾಮನ್ ಲಾ" ಹೊಂದಿರಬೇಕೆಂದು ಅವನು ಬಯಸುತ್ತಿದ್ದ. ಅದೇ 1872ರ ಭಾರತೀಯ ಕರಾರಿನ ಶಾಸನದ ಮೂಲ. ಸಮಗ್ರ ರಾಷ್ಟ್ರಕ್ಕೇ ಅನ್ವಯವಾಗುವಂತಹ ಏಕರೂಪವಾದ ಪ್ರಥಮ ವಾಸ್ತವಿಕ ಪೌರ ಕಾನೂನಿನ ನಿಯಮ ಸಂಗ್ರಹವಾಗಿ ಅದು ವಿನ್ಯಾಸಗೊಂಡಿತ್ತು. ಇದಾದನಂತರ ವಾಣಿಜ್ಯ ವ್ಯವಹಾರಗಳು ಸುಸೂತ್ರವಾಗಿ ನಡೆಯುವಂತೆ ಮತ್ತು ಅಭಿವೃದ್ಧಿ ಹೊಂದುತ್ತಿರುವ ವಾಣಿಜ್ಯ ಕ್ಷೇತ್ರದ ಅಗತ್ಯತೆಗಳನ್ನು ಪೂರೈಸಲು ಮಾಡಲ್ಪಟ್ಟ ಶಾಸನವೇ ವ್ಯವಹಾರದ ಹುಂಡಿಗಳ ಶಾಸನ (Negotiable Instruments Act) ವೆಂದು ಹೇಳಬಹುದು. ಸಮಾಜದ ಸಾಕಷ್ಟು ಭಾಗಗಳ ಮೇಲೆ ಪರಿಣಾಮ ಬೀರಿದ ಭಾರತೀಯ ವ್ಯವಸ್ಥೆಗೆ ಅಳವಡಿಸಲ್ಪಟ್ಟ ಈ ಪೌರ ಕಾನೂನುಗಳು ಮತ್ತು ಪ್ರಸ್ತಾಪ ಮತ್ತು ಅಂಗೀಕಾರಕ್ಕೆ ಸಂಬಂಧಿಸಿದ ಮತ್ತು ಅನೇಕ ಇನ್ನಿತರ ನ್ಯಾಯತತ್ವಗಳ ಜಟಿಲತೆಗಳು ಭಾರತೀಯನ ಮನಸ್ಸಿನಲ್ಲಿ ಎಷ್ಟು ಗೊಂದಲದ ಭಾವನೆಯನ್ನುಂಟು ಮಾಡಿದ್ದವೆಂಬುದನ್ನು ಯಾರಾದರೂ ಊಹಿಸಬಹುದು. ವಾಣಿಜ್ಯದ ಅಭಿವೃದ್ಧಿಗೆ ನೆರವು ನೀಡುವ ಮೂಲ ಉದ್ದೇಶದಿಂದ ಮಾಡಲ್ಪಟ್ಟ ಶಾಸನವಾಗಿದ್ದರೂ, ಅವು ನಿಸ್ಸಂಶಯವಾಗಿ ಭಾರತೀಯ ವ್ಯಾಪಾರಿಯ ಮನಸ್ಸಿನ ಮೇಲೆ ಮಹತ್ತರವಾದ ರಚನಾತ್ಮಕ ಪರಿಣಾಮವನ್ನುಂಟುಮಾಡಿತು. ತನಗೆ ಇದುವರೆಗೂ ಹೊಂದಾಣಿಕೆಯಾಗಿದ್ದ ನಿಯಮಗಳಿಗಿಂತ ಭಿನ್ನವಾಗಿದ್ದ ವಾಣಿಜ್ಯದಲ್ಲಿನ ನ್ಯಾಯಸಮ್ಮತ ಸಂಬಂಧಗಳ ಆಧಾರಗಳನ್ನು ಬದಲಾಯಿಸಿದ್ದು ಮಾತ್ರವಲ್ಲದೇ ಈ ಕಾನೂನುಗಳು ಅವನು ನಡೆಸುತ್ತಿದ್ದ ವ್ಯಾಪಾರದ ರೀತಿ ನೀತಿಗಳ ಮೇಲೆ ಪರಿಣಾಮ ಬೀರಿದವು. ಸಮಾಜದ ಪ್ರಮುಖ ಗುಂಪುಗಳ ಅಭಿವೃದ್ಧಿಯ

ಮೇಲೆ ಪ್ರಭಾವ ಬೀರಿದ ಈ ಕಾನೂನುಗಳು ಸ್ಪಷ್ಟವಾದ ಮಾರ್ಗದರ್ಶಕ ಸೂತ್ರಗಳಾಗಿದ್ದವು.

ನಿಯಮಸಂಗ್ರಹ ಪ್ರಕ್ರಿಯೆ ಶೀಘ್ರವೇ ಆಸ್ತಿಗೆ ಸಂಬಂಧಿಸಿದ ಕಾನೂನನ್ನು ಒಳಗೊಂಡಿತು ಮತ್ತು ತನ್ಮೂಲಕ ಜನರನ್ನು ಪಾಶ್ಚಿಮಾತ್ಯ ಸಮಾಜಗಳು ಅಭಿವೃದ್ಧಿಪಡಿಸಿದ ಆಧುನಿಕ ನ್ಯಾಯ ಸಿದ್ಧಾಂತಗಳೊಡನೆ ಮುಖಾಮುಖಿಯಾಗುವಂತೆ ಮಾಡಿದವು. ಈ ಸಿದ್ಧಾಂತಗಳು ಹಿಂದೂ ಮತ್ತು ಮುಸ್ಲಿಮರ ಕಾನೂನಿನ ವ್ಯವಸ್ಥೆಗಳ ಸೂತ್ರಗಳಿಗಿಂತ ಭಿನ್ನವಾಗಿದ್ದವು. ಆ ಆಸ್ತಿಗೆ ಸಂಬಂಧಿಸಿದ ಕಾನೂನುಗಳು ಜನತೆಯ ಬಹುದೊಡ್ಡ ಭಾಗದ ಮೇಲೆ ಪರಿಣಾಮ ಬೀರಿದವು ಮತ್ತು ಅವರ ಸ್ವತ್ತುಗಳನ್ನು ಪರಭಾರೆ ಮಾಡುವುದಕ್ಕೆ ಸಂಬಂಧಿಸಿದ ಅವರ ಭಾವನೆಗಳನ್ನು ರೂಪುಗೊಳಿಸುವುದರಲ್ಲಿ ಮಹತ್ತರ ಪಾತ್ರವಹಿಸಿದವು.

ಇಂಗ್ಲೆಂಡಿನ ಕಾಮನ್ ಲಾ, ಶಾಸನಗಳು ಮತ್ತು ನ್ಯಾಯ ಸಿದ್ಧಾಂತಗಳು ಭಾರತೀಯ ಕಾನೂನಿನ ಮೇಲೆ ಬೀರಿದ ಪ್ರಭಾವ ತುಂಬಾ ವ್ಯಾಪಕವಾಗಿತ್ತು ಮತ್ತು ಸಂಕೀರ್ಣವಾಗಿತ್ತು. ಅದರ ಪರಿಣಾಮ "ಭಾರತೀಯ ಕಾಮನ್ ಲಾ" ಅಸ್ತಿತ್ವಕ್ಕೆ ಬಂದಿತ್ತು. ಈ ಸಂಘರ್ಷದ ಪರಿಣಾಮವಾಗಿ ಭಾರತ ಪಡೆದ ಸಾಮಾನ್ಯ ನಿಯಮಗಳ ಸಂಗ್ರಹಕ್ಕೆ "ಭಾರತೀಯ ಕಾಮನ್ ಲಾ" ಎಂದು ಹೆಸರು ಬಂದಿತು. ಆಂಗ್ಲ ನ್ಯಾಯತತ್ವದೊಡನೆ ಶತಮಾನಕ್ಕೂ ಮೀರಿದ ಸಂಪರ್ಕಗಳಿಂದ ಜನ್ಮತಾಳಿದ "ಭಾರತೀಯ ಕಾಮನ್ ಲಾ" ಭಾರತೀಯನ ಜೀವನದ  ಪ್ರತಿಯೊಂದು ವಿಧಿವಿಧಾನಗಳ ಮೇಲೆ ಪರಿಣಾಮ  ಬೀರಿತು.

ಈಸ್ಟ್ ಇಂಡಿಯ ಕಂಪನಿ ಮತ್ತು ನಂತರ ಬ್ರಿಟಿಷ್ ದೊರೆ ರಾಷ್ಟ್ರದ ಆಡಳಿತ ಸೂತ್ರವನ್ನು ಹಿಡಿದಾಗ ರಾಷ್ಟ್ರದ ಪ್ರಜೆಗಳ ವೈಯಕ್ತಿಕ ಕಾನೂನುಗಳನ್ನು ಯಾವ ರೀತಿಯಿಂದಲೂ ಬದಲಾಯಿಸುವುದಿಲ್ಲವೆಂದು ಮೇಲಿಂದ ಮೇಲೆ ಆಶ್ವಾಸನೆ ನೀಡುತ್ತಿದ್ದರೂ, ಆಂಗ್ಲ ನ್ಯಾಯಾಧೀಶರು ಮತ್ತು ಆಂಗ್ಲ ನ್ಯಾಯವ್ಯವಸ್ಥೆಯಲ್ಲಿ ತರಬೇತಿ ಹೊಂದಿದ ಭಾರತೀಯ ನ್ಯಾಯಾಧೀಶರು, ಇದೇ ರೀತಿ ತರಬೇತಿ ಪಡೆದ ಆಂಗ್ಲ ಮತ್ತು ಭಾರತೀಯ ವಕೀಲರ ನೆರವಿನಿಂದ ಮುಸ್ಲಿಂ ಮತ್ತು ಹಿಂದೂಗಳ ವೈಯಕ್ತಿಕ ಕಾನೂನುಗಳಲ್ಲಿ ಮಹತ್ತರ ಬದಲಾವಣೆಗಳನ್ನು ತಂದರು. ಹಿಂದೂಗಳ ಉಯಿಲಿನ ಕಾನೂನು, ಬಹುಮಟ್ಟಿಗೆ ಆಂಗ್ಲ ನ್ಯಾಯಸೂತ್ರಗಳ ಸಂಪರ್ಕದಿಂದ ಉದ್ಭವಿಸಿದ ತತ್ವಗಳ ಮೇಲೆ ಆಧಾರಿತವಾಗಿದೆ.  ಹಿಂದೂಗಳಲ್ಲಿ ಸ್ವಯಾರ್ಜಿತ ಆಸ್ತಿಗೆ ಇದ್ದ ಹೆಚ್ಚಿನ ಮನ್ನಣೆ ಮತ್ತು ಸ್ತ್ರೀಯರಿಗೆ ಇತ್ತೀಚೆಗೆ ಹೆಚ್ಚುತ್ತಿರುವ ಆಸ್ತಿಯ ಮೇಲಣ ಹಕ್ಕು ಆಂಗ್ಲ ನ್ಯಾಯತತ್ವದ ಪ್ರಭಾವದಿಂದಲೇ ಎಂಬುದನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು.



ಮುಸ್ಲಿಮರ ಕಾನೂನಿನ ಮೂಲತತ್ವಗಳು, ಆಂಗ್ಲ ನ್ಯಾಯ ವ್ಯವಸ್ಥೆಯಲ್ಲಿ ತರಬೇತಿ ಪಡೆದ ನ್ಯಾಯಶಾಸ್ತ್ರಜ್ಞರು ಬೀರಿದ ಪ್ರಭಾವದಿಂದ ಅನೇಕ ವಿಷಯಗಳಲ್ಲಿ ಮುಸ್ಲಿಂ ನ್ಯಾಯತತ್ವಗಳೂ ಬದಲಾವಣೆ ಹೊಂದಿದವೆಂಬುದನ್ನು ಇದೇ ರೀತಿ ಸುಲಭವಾಗಿ ಹೇಳಬಹುದು.

ಭಾರತೀಯ ನ್ಯಾಯತತ್ವದೊಳಗೆ ಮತ್ತು ಭಾರತೀಯ ನ್ಯಾಯಾಂಗ ವ್ಯವಸ್ಥೆಯ ರಚನೆಯೊಳಗೆ ಆಂಗ್ಲ ಕಾನೂನಿನ ತತ್ವಗಳು, ನಿಯಮಗಳು ಮತ್ತು ಸಂಪ್ರದಾಯಗಳು ಆಳವಾಗಿ ಒಳಹೊಕ್ಕು ಸಾಮಾನ್ಯ ಭಾರತೀಯನ ಜೀವನ ಮತ್ತು ಚಿಂತನೆಯ ಮೇಲೆ ಪರಿಣಾಮ ಬೀರದಿರಲು ಸಾಧ್ಯವೇ ಇರಲಿಲ್ಲ. ಸುಮಾರು ಒಂದೂವರೆ ಶತಮಾನಗಳ ಕಾಲ ನಡೆದ ಈ ಪ್ರಕ್ರಿಯೆಯಿಂದ ಖಚಿತವಾಗಿ ಈ ಕೆಲವು ಮಾತುಗಳನ್ನು ಹೇಳುವುದು ಸುರಕ್ಷಿತವಾದುದು. ಈ ದೀರ್ಘಕಾಲದಲ್ಲಿ ಸಾಮಾಜಿಕ ಅಗತ್ಯಗಳು ಮತ್ತು ಕಾನೂನಿನ ಪರಿವರ್ತನೆ ನಡುವಣ ಮೇಲಾದ ಮೇಲಣ ಅನ್ಯೋನ್ಯ ಕ್ರಿಯೆಯ ಫಲವಾಗಿ ಕಾನೂನು ಮಾರ್ಗದರ್ಶನ ಮಾಡಿತು ಮತ್ತು ಸಮಾಜವನ್ನು ರೂಪುಗೊಳಿಸಲು ಸಹಾಯಮಾಡಿತು.

ಇದುವರೆಗೆ ನಾವು ಬ್ರಿಟಿಷರ ಕಾಲದಲ್ಲಿ ರಚಿಸಲ್ಪಟ್ಟ ಸಾಮಾನ್ಯ ಕಾನೂನುಗಳು ಮತ್ತು ಸಾಮಾಜಿಕ ವ್ಯವಸ್ಥೆಯ ಮೇಲೆ ಅವುಗಳ ಪ್ರಭಾವವನ್ನು ಕುರಿತು ಚರ್ಚಿಸಿದ್ದೇವೆ. ಭಾರತೀಯರ ಪದ್ಧತಿಗಳು ಮತ್ತು ಆಳವಾಗಿ ಬೇರೂರಿರುವ ಆಚರಣೆಗಳಲ್ಲಿ ಒಳಪ್ರವೇಶ ಮಾಡಲು ಆಂಗ್ಲರು ಇಷ್ಟಪಡದಿದ್ದರೂ ಸಹ, ಆಂಗ್ಲರು ಜಾಗೃತ ಸಾರ್ವಜನಿಕ ಅಭಿಪ್ರಾಯದ ಒತ್ತಡದ ಫಲವಾಗಿ ಕೆಲವು ಸಲ ಗೊತ್ತಾದ ಸಾಮಾಜಿಕ ಆಚರಣೆಗಳೊಳಗೆ ಮಧ್ಯಪ್ರವೇಶಿಸುವ ಶಾಸನಗಳನ್ನು ಮಾಡಬೇಕಾಯಿತು. ಈ ಸಂದರ್ಭದಲ್ಲಿ ನಾವು 1829ರ ಸತಿ ನಿಯಂತ್ರಣ ಶಾಸನದ ಮುನ್ನುಡಿಯನ್ನು ನೆನಪಿಸಿಕೊಳ್ಳುವುದು ನಿಜಕ್ಕೂ ಕುತೂಹಲಕರವೇ ಹೌದು. ಅದು ಈ ರೀತಿ ಹೇಳುತ್ತದೆ. "ಸತಿ ಪದ್ಧತಿಯ ಆಚರಣೆ ಮಾನವನ ಸ್ವಭಾವದ ಭಾವನೆಗಳಿಗೇ ವಿರುದ್ಧವಾಗಿವೆ. ಇದನ್ನೊಂದು ಕಡ್ಡಾಯ ಕರ್ತವ್ಯವಾಗಿ ಹಿಂದೂ ಮತದಲ್ಲಿ ಎಲ್ಲೂ ಹೇಳಿಲ್ಲ. ಅದಕ್ಕೆ ವಿರುದ್ಧವಾಗಿ, ಪರಿಶುದ್ಧವಾದ ಜೀವನ ಮತ್ತು ನಿವೃತ್ತಿಯನ್ನು ವಿಧವೆಯಾದವಳು ನಡೆಸುವುದೇ ಸೂಕ್ತವೆಂದು ವಿಶಿಷ್ಟವಾಗಿ ಮತ್ತು ವಿವೇಚನಾಯುತವಾಗಿ ಅಗಾಧವಾದ ಬಹುಮತದ ಆಚರಣೆಯಿದೆ. ಈ ವಿಷಯಗಳಿಂದ ಪ್ರೇರಿತವಾಗಿ ಗೌರ್ನರ್ ಜನರಲ್ ಮಂಡಲಿಯು ಈ ಕೆಳಕಂಡ ನಿಯಮಗಳನ್ನು ಸ್ಥಾಪಿಸುವುದು ಸೂಕ್ತವೆಂದು ಭಾವಿಸಿತು. ಹೀಗೆ ಮಾಡುವಾಗ ಮಂಡಲಿಯವರಿಗೆ, ಭಾರತದಲ್ಲಿನ ಬ್ರಿಟಿಷ್ ಸರ್ಕಾರದ ವ್ಯವಸ್ಥೆಯ ಮೊದಲ ಮತ್ತು ಅತ್ಯಂತ ಮುಖ್ಯವಾದ ತತ್ವಗಳಿಂದ ವಿಮುಖರಾಗಲು ಉದ್ದೇಶಿಸದೇ

ಈ ನಿಯಮವನ್ನು ಜಾರಿಗೊಳಿಸಿದ್ದೇವೆ. ಆ ತತ್ವಗಳೇನೆಂದರೆ ಜನತೆಯ ಎಲ್ಲಾ ಪಂಗಡದವರೂ ತಮ್ಮ ಮತೀಯ ಆಚರಣೆಗಳನ್ನು ಕ್ಷೇಮವಾಗಿ ಪಾಲಿಸಬಹುದು. ಹಾಗೆ ಆಚರಿಸುವಾಗ ನ್ಯಾಯ ಮತ್ತು ಮಾನವೀಯತೆಯ ಪ್ರಮುಖ ಆಜ್ಞಾವಿಧಿಗಳನ್ನು ಉಲ್ಲಂಘಿಸದೇ ಆಚರಿಸಬೇಕು. ಇಂತಹ ಅನಾಗರಿಕ ಆಚರಣೆಯಿಂದ ಆಘಾತಗೊಂಡ ಪ್ರಬಲವಾದ ಸಾರ್ವಜನಿಕ ಅಭಿಪ್ರಾಯದ ಫಲವಾಗಿ ಈ ಶಾಸನ ಜಾರಿಗೆ ಬಂದಿತು."

ಹಿಂದೂ ಸಮಾಜದ ಬಹುದೊಡ್ಡ ಸಂಖ್ಯೆ ಹಿಂದೂ ಕಾನೂನಿನ ಪ್ರಾಚೀನ ತತ್ವಗಳ ಮೇಲೆ ಆಧಾರಿತವಾದ ಭಾವನೆಗಳನ್ನು ಇನ್ನೂ ಹೊಂದಿದ್ದರೂ, ವಿವಿಧ ದಿಶೆಗಳಲ್ಲಿ ಸುಧಾರಣೆಯನ್ನು ಬಯಸುವ ಬುದ್ಧಿಜೀವಿಗಳೂ ಹೆಚ್ಚುತ್ತಿದ್ದರು. ಬ್ರಿಟಿಷ್ ಆಡಳಿತಗಾರರ ವಿರೋಧವಿದ್ದಾಗ್ಯೂ, ಆ ಬುದ್ಧಿಜೀವಿಗಳ ಒತ್ತಡದಿಂದ ಭಾರತದ ಶಾಸನ ಗ್ರಂಥದಲ್ಲಿ ಉತ್ತರಾಧಿಕಾರದ ವಿಷಯದಲ್ಲಿ ಜಾತೀಯ ಅನರ್ಹತೆಗಳ ರದ್ದತಿ, ಹಿಂದೂ ವಿಧವೆಯರ ಪುನರ್ವಿವಾಹದ ಹಕ್ಕಿಗೆ ಮನ್ನಣೆ ನೀಡುವ ಶಾಸನ ಮತ್ತು ಪೌರ ಕಾನೂನಿನಡಿಯಲ್ಲಿ ಜನಗಳು ವಿವಾಹ ಮಾಡಿಕೊಳ್ಳಲು ನೆರವಾಗುವ ವಿಶೇಷ ವಿವಾಹ ಶಾಸನಗಳು ಬಂದವು. ಉತ್ತರಾಧಿಕಾರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಜಾತಿಗೆ ಸಂಬಂಧಿಸಿದ ಅನರ್ಹತೆಗಳನ್ನು ರದ್ದುಪಡಿಸಿದ ಶಾಸನ ಮತವನ್ನು ವರ್ಜಿಸುವುದು ಇಲ್ಲವೇ ಜಾತಿಯಿಂದ ಹೊರಹಾಕುವ ಹಿಂದೂ ಕಾನೂನಿನ ನಿಯಮಗಳನ್ನು ವಾಸ್ತವಿಕವಾಗಿ ಪಕ್ಕಕ್ಕೆ ಸರಿಸಿತು. ಇವು ಮತ್ತು ಇದೇ ತರಹದ ಕೆಲವು ಸುಧಾರಣೆಗಳು, ಜನಾಂಗದಲ್ಲಿನ ಸುಧಾರಣೆಯಲ್ಲಿ ಉತ್ಸುಕರಾಗಿದ್ದ ಮತ್ತು ಮುಖಂಡತ್ವ ವಹಿಸಿದ್ದ ಒಂದು ಸಣ್ಣ ಗುಂಪಿನ ಕಾರ್ಯದ ಫಲವಾಗಿತ್ತು.

ನಾನು ಇದುವರೆಗೆ ಹೇಳಿದ್ದರಲ್ಲಿ ಬಹುಭಾಗ ಬ್ರಿಟಿಷ್ ಇಂಡಿಯಾಕ್ಕೆ ಮಾತ್ರ ಸೀಮಿತವಾಗಿತ್ತೆಂಬುದು ಗಮನಾರ್ಹ. ಬ್ರಿಟಿಷ್ ಇಂಡಿಯಾ ಉಪಖಂಡದ ಮೂರನೆಯ ಎರಡು ಭಾಗದಷ್ಟಿತ್ತು. ರಾಷ್ಟ್ರದ ಉಳಿದ ಭಾಗಗಳಲ್ಲಿ ಅನೇಕ ಭಾರತೀಯ ಆಳರಸರು ಆಳುತ್ತಿದ್ದರು. ಮತ್ತು ಇವರ ಸಂಸ್ಥಾನಗಳು ಸಾಮಾಜಿಕ ಮತ್ತು ರಾಜಕೀಯ ಪ್ರಗತಿಯ ವಿವಿಧ ಹಂತಗಳಲ್ಲಿದ್ದವು. ಈ ಸಂಸ್ಥಾನಗಳು ಮತ್ತು ಅಲ್ಲಿನ ಪ್ರಜೆಗಳು ಬ್ರಿಟಿಷರಿಂದ ಬಳುವಳಿಯಾಗಿ ಬಂದ ಕಾನೂನಿನ ನೇರ ಪ್ರಭಾವಕ್ಕೆ ಒಳಗಾಗಲಿಲ್ಲ. ಆದರೆ ಅನೇಕ ಭಾರತೀಯ ಸಂಸ್ಥಾನಗಳನ್ನು ಹೊಂದಿದ್ದ ಹಾಗೂ ವೈವಿಧ್ಯತೆಯಿಂದ ಕೂಡಿದ ರಾಷ್ಟ್ರದ ಮೂರನೆಯ ಒಂದು ಭಾಗ, ಭಾರತೀಯ ಭೂಪ್ರದೇಶದ ಬ್ರಿಟಿಷ್ ಭಾಗಗಳ ನಡುವೆ ಹಂಚಿ ಹೋಗಿದ್ದವು. ಇದಲ್ಲದೇ ಬ್ರಿಟಿಷ್ ಪ್ರದೇಶಗಳೊಡನೆ ನಿಕಟವಾದ ಮತ್ತು ನಿರಂತರವಾದ ಸಂಪರ್ಕವನ್ನು ಹೊಂದಿದ್ದವು. ಬ್ರಿಟಿಷ್ ಇಂಡಿಯದ ಬ್ರಿಟಿಷರ ಪ್ರಭಾವದಿಂದ ಪರಿವರ್ತನೆ ಹೊಂದುತ್ತಿದ್ದ



ಕಾನೂನುಗಳ ಪರಿಣಾಮ ಈ ಪ್ರದೇಶಗಳ ಜನಸಂಖ್ಯೆಯ ಮೇಲಾಗಿತ್ತು. ಆದರೆ ಇದು ಒಂದು ವಿಧದಲ್ಲಿ ಮಂದಗತಿಯ ಪ್ರಕ್ರಿಯೆಯೇ ಆಗಿತ್ತು.

ಇಂಡಿಯ ಸ್ವಾತಂತ್ರ್ಯವನ್ನು ಪಡೆದಾಗ ಅದರ ಒಂದು ಭಾಗ ಪಾಕಿಸ್ಥಾನವಾಗಿ ರಚಿತವಾಯಿತು. ಆದರೆ ಭಾರತವಾಗಿ ಉಳಿದದ್ದು ಶೀಘ್ರವೇ ನಮ್ಮ ರಾಷ್ಟ್ರ ನಿರ್ಮಾಪಕರು ತೆಗೆದುಕೊಂಡ ಪ್ರಬಲವಾದ ಮತ್ತು ವ್ಯವಹಾರಕೌಶಲದಿಂದ ಕೂಡಿದ ಕಾನೂನುಗಳಿಂದ ಒಂದು ಸಂಘಟಿತ ಮತ್ತು ಸಂಪೂರ್ಣ ಘಟಕವಾಯಿತು. ಈ ಸಂಘಟಿತ ಘಟಕಕ್ಕೆ ಸರ್ಕಾರದ ಒಂದು ರೂಪವನ್ನು ಒದಗಿಸುವ ಹೊಣೆಗಾರಿಕೆ ಸಂವಿಧಾನದ ಸ್ಥಾಪಕ ಪಿತೃಗಳದಾಗಿತ್ತು. ಅವರು ಒಕ್ಕೂಟದ ಮಾದರಿಯನ್ನು ಆಯ್ಕೆ ಮಾಡಿದರು ಮತ್ತು ಅಂತಿಮವಾಗಿ ನಮ್ಮ ಸಂವಿಧಾನದಲ್ಲಿ ಅದೇ ಅಳವಡಿಸಲ್ಪಟ್ಟಿತು.

ಸಂವಿಧಾನವೇ ಮೂಲಭೂತ ಕಾನೂನಾಗಿದ್ದು ಅದು ಸಾಮಾನ್ಯ ಕಾನೂನುಗಳನ್ನು ಮಾಡುವ ಕ್ರಮವನ್ನು ಉಲ್ಲೇಖಿಸುತ್ತದೆ ಮತ್ತು ಯಾವ ಉದ್ದೇಶಗಳಿಗಾಗಿ ಅವನ್ನು ಮಾಡಬಹುದೆಂಬುದನ್ನು ಸೂಚಿಸುತ್ತದೆ. ರಾಷ್ಟ್ರದ ಜೀವನ ಮತ್ತು ಪದ್ಧತಿಗಳ ಮೇಲೆ ಅದರ ಪರಿಣಾಮ ತುಂಬಾ ಗಹನವಾದದ್ದು ಮತ್ತು ಆಳವಾಗಿ ಬೇರೂರಿರುವುದೇ ಆಗಿದೆ.

ರಾಷ್ಟ್ರಕ್ಕೆ ನೀಡಲ್ಪಟ್ಟ ಒಕ್ಕೂಟದ ಸಂವಿಧಾನ, ಜನತೆಯ ಬಹುಭಾಗದ ಮೇಲೆ ಒಳ್ಳೆಯದಕ್ಕಾಗಲೀ, ಕೆಟ್ಟದಕ್ಕಾಗಲೀ, ಪುನಶ್ಚೇತನಗೊಳಿಸುವ ಪರಿಣಾಮ ಹೊಂದಿತ್ತು. 1935ರ ಭಾರತ ಸರ್ಕಾರದ ಶಾಸನದಡಿಯಲ್ಲಿ ಪ್ರಾಂತ್ಯಗಳು ಸ್ವಯಮಾಡಳಿತವನ್ನೆಂದಿಗೂ ಹೊಂದಿರಲಿಲ್ಲ ಮತ್ತು ಅವು ಸಾರ್ವಭೌಮ ಘಟಕಗಳೂ ಆಗಿರಲಿಲ್ಲ. ಯಾವ ದೃಷ್ಟಿಯಲ್ಲಿಯೂ ಅವು ಸ್ವತಂತ್ರ ರಾಜ್ಯಗಳಾಗಿರಲಿಲ್ಲ. ಆದಾಗ್ಯೂ, ಸಂವಿಧಾನ ಈ ರಾಜ್ಯಗಳನ್ನು ಭಾರತೀಯ ಒಕ್ಕೂಟದ ಮೂಲ ರಚನಾ ಘಟಕಗಳನ್ನಾಗಿ ಮಾಡಿದೆ ಮತ್ತು ಅಂತಹ ಘಟಕಗಳಿಗಾಗಿ ಅವು ಒಂದು ದೃಷ್ಟಿಯಲ್ಲಿ ಅವು ಸಂವಿಧಾನದತ್ತವಾದ ಬೃಹತ್ ಸಾರ್ವಭೌಮಾಧಿಕಾರವನ್ನು ಹೊಂದಿವೆ. ನಂತರದ ಶಾಸನ ರಾಜ್ಯ ವಿಭಾಗಗಳನ್ನು ಪುನರ್ರಚಿಸಿ ಅವುಗಳನ್ನು ಭಾಷಾವಾರು ಘಟಕಗಳನ್ನಾಗಿ ಪರಿವರ್ತಿಸಿದೆ. ಮೂಲಭೂತ ಕಾನೂನುಗಳಿಂದ ಮತ್ತು ಈ ರೀತಿ ಶಾಸನಗಳಿಂದ ಜಾರಿಗೆ ತರಲ್ಪಟ್ಟ ಬದಲಾವಣೆಗಳು ಈ ಘಟಕಗಳಲ್ಲಿ ವಾಸಿಸುವ ಜನರ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿವೆ. ಒಂದು ರೀತಿಯಲ್ಲಿ ಅವು ಈ ಮೂಲರಚನಾ ಘಟಕಗಳ ಏಕರೂಪತೆಯನ್ನು ಹೆಚ್ಚಿಸಿವೆ. ಆದರೆ ಈ ಘಟಕಗಳ ಪ್ರಜೆಗಳು ಹೆಚ್ಚು ಹೆಚ್ಚಾಗಿ ನಿರ್ದಿಷ್ಟ ಘಟಕಗಳ ಪ್ರಜೆಗಳಾಗಿ ವರ್ತಿಸಲು ಪ್ರಾರಂಭಿಸಿದ್ದಾರೆಯೇ ವಿನಾ, ಭಾರತದ ರಾಷ್ಟ್ರೀಯರಾಗಿ ಅಲ್ಲ. ಈ ಘಟಕಗಳ ಪ್ರಜೆಗಳು ಈ ಘಟಕಗಳ ಭಾಷೆ, ಅಭಿವೃದ್ಧಿ ಮತ್ತು

ಕೈಗಾರಿಕೆಗಳ ಬಗ್ಗೆಯೇ ಚಿಂತಿಸಲು ತೊಡಗಿ, ಅವುಗಳ ಬೆಳವಣಿಗೆಗೆ ಕಂಟಕ ಪ್ರಾಯರಾಗಿದ್ದಾರೆ. ಈ ಪ್ರಕ್ರಿಯೆ ಎಷ್ಟು ಮುಂದುವರಿದಿದೆಯೆಂದರೆ ಈ ಕೆಲವು ಘಟಕಗಳ ಕೆಲವು ಪ್ರಜೆಗಳು ಒಕ್ಕೂಟದಿಂದಲೇ ಬೇರ್ಪಡುವ ಚಿಂತನೆಯನ್ನು ಪ್ರಾರಂಭಿಸಿದ್ದಾರೆ. ಈ ವಿಷಯಗಳ ರಾಜಕೀಯ ಅಂಶಗಳನ್ನು ವಿಶ್ಲೇಷಿಸುವುದು ಇಲ್ಲಿ ನಮ್ಮ ಉದ್ದೇಶವಲ್ಲ. ಒಂದು ರಾಷ್ಟ್ರದ ಸಂವಿಧಾನವನ್ನು ಸ್ಥಾಪಿಸಿರುವ ಮೂಲಭೂತ ಕಾನೂನು, ಯಾವ ರೀತಿ ಅದರಲ್ಲಿ ವಾಸಿಸುವ ಜನರ ಮನಸ್ಸು ಮತ್ತು ಚಿಂತನೆಗಳ ಮೇಲೆ ಆಳವಾದ ಪರಿಣಾಮ ಬೀರಬಲ್ಲದೆಂಬುದಕ್ಕೆ ಒತ್ತು ನೀಡಲು ಅವುಗಳನ್ನು ಪ್ರಸ್ತಾಪಿಸಿದ್ದೇನೆ.

ಭಾರತದ ಪ್ರಜೆಗಳು ಸಾಮಾಜಿಕ ನ್ಯಾಯ ಮತ್ತು ಸಮಾನತೆಗಳನ್ನು ಅಭಿವೃದ್ಧಿಪಡಿಸಲು ಸಂವಿಧಾನಬದ್ಧರಾಗಿದ್ದಾರೆ. ಸಂವಿಧಾನದ ನಾಲ್ಕನೆಯ ಭಾಗದಲ್ಲಿ ಈ ಗುರಿಗಳನ್ನು ಸಾಧಿಸಲು ರಾಜ್ಯ ಯಾವ ನೀತಿಗಳನ್ನು ಪಾಲಿಸಬೇಕೆಂಬುದರ ಬಗ್ಗೆ ನಿರ್ದೇಶಕ ತತ್ವಗಳನ್ನು ಬರೆಯಲಾಗಿದೆ. ಈ ರಾಜ್ಯನೀತಿ ನಿರ್ದೇಶಕ ತತ್ವಗಳು ರಾಜ್ಯದ ನೌಕೆಯನ್ನು ಸುಖೀರಾಜ್ಯದ ಮಾರ್ಗದಲ್ಲಿ ಚಲಿಸುವಂತೆ ಮಾಡುತ್ತವೆ. ಸಾಮಾನ್ಯ ಮನುಷ್ಯನಿಗೆ ಸೌಲಭ್ಯಗಳನ್ನು ಭದ್ರಪಡಿಸುವಂತಹ ವಿನ್ಯಾಸಗಳನ್ನು ಈ ತತ್ವಗಳು ಹೊಂದಿವೆ. ಜನಾಂಗದ ವಾಸ್ತವಿಕ ಸಂಪನ್ಮೂಲಗಳ ನ್ಯಾಯಯುತ ಹಂಚಿಕೆಯನ್ನು ಖಚಿತಪಡಿಸುವುದು, ಜನಾಂಗಕ್ಕೆ ಹಾನಿಯುಂಟುಮಾಡುವಂತಹ ಸಂಪತ್ತಿನ ಶೇಖರಣೆ ಮತ್ತು ಉತ್ಪಾದನಾ ಸಾಧನಗಳನ್ನು ತಡೆಯುವುದೂ ಈ ತತ್ವಗಳ ಉದ್ದೇಶವಾಗಿದೆ. ಈ ನಿರ್ದೇಶಕ ತತ್ವಗಳು ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸಮಾಜವನ್ನು ಪುನರ್ರಚಿಸಲು ರಾಜ್ಯಗಳಿಗೆ ಸ್ಪಷ್ಟವಾದ ಪ್ರಣಾಳಿಕೆಯೊಂದನ್ನು ಕೊಟ್ಟಿವೆ. ಹೊಸದಾಗಿ ರೂಪುಗೊಂಡ ನಮ್ಮ ದೇಶ ಅಂಗೀಕರಿಸಿದ ಶಾಸನ ಮತ್ತು ಅದರ ಆಡಳಿತಾತ್ಮಕ ನಿರ್ಧಾರಗಳು ಈ ನಿರ್ದೇಶನಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿವೆ.

ರಾಷ್ಟ್ರಾದ್ಯಂತ ಜಾರಿಗೆ ಬಂದ ಭೂ ಸುಧಾರಣಾ ಶಾಸನ ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿಯನ್ನುಂಟು ಮಾಡಿದೆಯೆಂದು ವಿವರಿಸಬಹುದು. ಸ್ವಲ್ಪ ಅಥವಾ ನಾಮಮಾತ್ರದ ಪರಿಹಾರವನ್ನು ನೀಡುವ ಮೂಲಕ ಮಧ್ಯವರ್ತಿಗಳಿಗೆ ಅವರ ಭೂಮಿಯ ಮೇಲಣ ಹಕ್ಕನ್ನು ನಿರಾಕರಿಸಲಾಗಿದೆ. ಮಧ್ಯವರ್ತಿಗಳಾಗಿ ಸಣ್ಣ ಆದಾಯಗಳಿಂದ ತಮ್ಮ ಜೀವನ ನಿರ್ವಹಣೆ ಮಾಡುತ್ತಿದ್ದ ಸಹಸ್ರಾರು ಜನರು ಈಗಲೇ ಇರುವ ಅಸಂಖ್ಯಾತ ನಿರುದ್ಯೋಗಿಗಳ ಗುಂಪಿಗೆ ಸೇರಿದ್ದಾರೆ. ಶಾಸನದ ಮೂಲಕ ಭೂಮಿತಿಯನ್ನು ರಾಷ್ಟ್ರದ ಅನೇಕ ಭಾಗಗಳಲ್ಲಿ ವಿಧಿಸಲಾಗಿದೆ. ಅದರಿಂದ ಮಿತಿಗಿಂತ ಹೆಚ್ಚಾಗಿ ಭೂಮಿಯನ್ನು ಹೊಂದಿರುವವನಿಂದ ಭೂಮಿಯನ್ನು



ಸ್ವಾಧೀನಪಡಿಸಿಕೊಂಡು ಭೂರಹಿತರಿಗೆ ಅಥವಾ ಸಣ್ಣ ಹಿಡುವಳಿದಾರರಿಗೆ ಹಂಚಲಾಗಿದೆ. ಶಾಸನದ ಬದಲಾವಣೆಯ ಪ್ರಾಬಲ್ಯದಿಂದ ರೈತವಾರೀ ಪ್ರದೇಶಗಳೂ ತಪ್ಪಿಸಿಕೊಳ್ಳಲಾಗಿಲ್ಲ. ಇದರ ಜೊತೆಗೆ ಶ್ರೀಮಂತ ವರ್ಗಗಳ ಮೇಲೆ ನೇರ ತೆರಿಗೆಯನ್ನು ವಿಧಿಸಲಾಗಿದೆ. ವಿಧಿಸಿರುವ ತೆರಿಗೆ ವಿಶ್ವದ ಇನ್ನಾವ ದೇಶದಲ್ಲೂ ಇಷ್ಟು ಹೆಚ್ಚಾಗಿಲ್ಲ. ಅಸಮಾನತೆಯ ನಿರ್ಮೂಲನೆ ಮತ್ತು ಸಮಾಜದ ಶ್ರೀಮಂತ ವರ್ಗಗಳನ್ನು ಹೆಚ್ಚು ಕಡಿಮೆ ಇನ್ನಿತರ ವರ್ಗಗಳ ಮಟ್ಟಕ್ಕೆ ತರುವ ಘನ ಉದ್ದೇಶದಿಂದಲೇ ಈ ರೀತಿ ಮಾಡಲಾಗಿದೆ.

ಅಸ್ಪೃಶ್ಯತೆಯ ಆಚರಣೆಯನ್ನು ಸಂವಿಧಾನ ರದ್ದುಮಾಡಿದೆ ಮತ್ತು ಯಾವುದೇ ರೀತಿಯಲ್ಲಿ ಅದರ ಆಚರಣೆಯನ್ನು ನಿಷೇಧಿಸಲಾಗಿದೆ. ಯಾವುದೇ ರೀತಿಯಲ್ಲಿ ಅಸ್ಪೃಶ್ಯತೆಯನ್ನು ಆಚರಿಸುವುದು ಕಾನೂನಿನಿಂದ ಶಿಕ್ಷಿಸಲ್ಪಡುವ ಅಪರಾಧವಾಗಿದೆ. ಹಿಂದೂ ಮತೀಯ ಸಂಸ್ಥೆಗಳು ಸಾರ್ವಜನಿಕ ಸ್ವರೂಪದ್ದಾಗಿದ್ದರೆ ಹಿಂದೂಗಳ ಎಲ್ಲಾ ವರ್ಗಗಳು ಹಾಗೂ ವಿಭಾಗಗಳಿಗೆ ಮುಕ್ತವಾಗಿರಬೇಕು. ಸಂವಿಧಾನದಲ್ಲಿನ ಈ ಉಲ್ಲೇಖಕ್ಕೆ ಬೆಂಬಲವಾಗಿ ವಿವಿಧ ರಾಜ್ಯಗಳಲ್ಲಿ ಈ ಸಂಸ್ಥೆಗಳನ್ನು ಅಸ್ಪೃಶ್ಯರಿಗೂ ತೆರೆದಿಡುವ ಶಾಸನವನ್ನು ಜಾರಿಗೆತರಲಾಗಿದೆ. ಇದರಿಂದ ತೊಂದರೆಗೀಡಾದ ವರ್ಗಗಳು ಭೂ ಮತ್ತು ಸಾಮಾಜಿಕ ಸುಧಾರಣಾ ಅಲೆಗಳ ವಿರುದ್ಧ ಈಜಲು ಮೇಲಿಂದ ಮೇಲೆ ಮತ್ತು ರೋಷೋನ್ಮತ್ತ ಪ್ರಯತ್ನಗಳನ್ನು ಮಾಡಿವೆ. ಆದರೆ ನ್ಯಾಯಾಲಯಗಳು ಸಂವಿಧಾನದ ವಿಧಿಗಳಿಗೆ ಮನ್ನಣೆ ನೀಡಿ ಅವರುಗಳಿಗೆ ಪರಿಹಾರವನ್ನು ನೀಡಲು ನಿರಾಕರಿಸಿವೆ.

ಶತಮಾನಗಳಿಂದ ಹಿಂದೂ ಸಮಾಜವನ್ನು ಪೀಡಿಸಿರುವ ಇನ್ನಿತರ ಸಾಮಾಜಿಕ ಪಿಡುಗುಗಳನ್ನು ನಿವಾರಿಸಲು ಶಾಸನಗಳ ಮೂಲಕ ಪ್ರಯತ್ನಗಳನ್ನು ಮಾಡಲಾಗಿದೆ. ಬಾಲ್ಯವಿವಾಹಗಳು ಮತ್ತ ವರದಕ್ಷಿಣೆ ನೀಡುವಿಕೆಯಂತಹ ಪಿಡುಗುಗಳ ವಿರುದ್ಧ ಹೋರಾಡಲು ಶಾಸನ ಪ್ರಯತ್ನಿಸಿದೆ. ಹಿಂದೂ ಜನಾಂಗದ ನಿರ್ದಿಷ್ಟ ವಿಭಾಗಗಳಿಂದ ಪ್ರತಿರೋಧವಿದ್ದಾಗ್ಯೂ, ಹಿಂದೂ ಕಾನೂನಿನ ಬಹುದೊಡ್ಡ ಭಾಗಗಳು ನಿಯಮ ಸಂಗ್ರಹಕ್ಕೊಳಗಾಗಿ ಆಧುನೀಕರಣಗೊಂಡಿವೆ.

ವಿಶಾಲವಾದ ದೃಷ್ಟಿಯಲ್ಲಿ ನೋಡಿದರೆ ಇತಿಹಾಸದ ಪಥದುದ್ದಕ್ಕೂ ಸಂಸ್ಕೃತಿಗೆ ಸರಿಸಮನಾಗಿಯೇ ಕಾನೂನು ಬಂದಿದೆ. ಕೆಲವು ಸಲ ಹಿಂದೆ ಬಿದ್ದಿದೆ. ಕೆಲವೊಮ್ಮೆ ಕಾನೂನೇ ಮಾರ್ಗದರ್ಶನ ನೀಡಿ, ಕಾನೂನಿಗೂ ಮತ್ತು ಸಂಸ್ಕೃತಿಗೂ ನಡುವಣ ಅಂತರ ಹೆಚ್ಚಾಗದಂತೆ ಯಾವಾಗಲೂ ಎಚ್ಚರ ವಹಿಸಿದೆ. ಸಂವಿಧಾನವನ್ನು ಜಾರಿಗೆ ತಂದನಂತರ ಸಮಾಜವನ್ನು ಕಾನೂನಿಗೆ ತಕ್ಕಂತೆ ಸಜ್ಜುಗೊಳಿಸಲು ಮತ್ತು ತೀವ್ರಗತಿಯಲ್ಲಿ ವೇಗವಾಗಿ ಚಲಿಸುವಂತೆ ಮಾಡಲು ಭಾರತದಂತೆ ಇನ್ನಾವ

ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲೂ, ದಿಟ್ಟವಾದ ಪ್ರಯತ್ನ ನಡೆದಿರುವುದು ಅಪರೂಪವೇ ಸರಿ. ದಿಟ್ಟವಾದ ಮತ್ತು ಅಸದೃಶವಾದ ಈ ಪ್ರಯೋಗದ ಫಲಿತಾಂಶಗಳನ್ನು ಎಲ್ಲರೂ ಆಸಕ್ತಿಯಿಂದ ಮತ್ತು ತುಂಬ ತವಕದಿಂದ ಕಾದು ನೋಡುತ್ತಿದ್ದಾರೆ.

* * * *



## ಗ್ರಂಥಋಣ


ಕಾಪ್ಲೆಸ್ಟಾನ್ ಎಫ್.ಸಿ., ಅಕ್ವಿನಾಸ್, 1955

ಫ್ರೀಡ್‌ಮನ್ ಡಬ್ಲ್ಯೂ, ಲೀಗಲ್ ಥಿಯರಿ, 1953

ಲಾ ಇನ್ ಚೇಂಜಿಂಗ್ ಸೊಸೈಟಿ 1959

ಹೆರಾಲ್ಡ್ ಜಾನ್ (ಸಂ.) ಲೈಫ್ ಆಫ್ ಲಾ - ರೀಡಿಂಗ್ಸ್ ಆನ್ ದಿ ಗ್ರೋತ್ ಆಫ್ ಲೀಗಲ್ ಇನ್‌ಸ್ಟಿಟ್ಯೂಷನ್ಸ್, 1964

ಹಕ್ಸ್‌ಲೀ, ಜೆ., ನಾಲೆಡ್ಜ್, ಮೊರಾಲಿಟಿ ಅಂಡ್ ಡೆಸ್ಟಿನಿ, 1957

ಜಯಸ್ವಾಲ್ ಕೆ.ಪಿ., ಹಿಂದೂ ಪಾಲಿಟಿ, 1924

ಲ್ಯಾಪ್ಲಿ ಎ.ಬಿ., ದಿ ರೈಟಿಂಗ್ಸ್ ಆಫ್ ಅಬ್ರಹಾಂ ಲಿಂಕನ್, 1906

ಮೆಲ್ಟ್‌ಜರ್, ಮೈಲ್‌ಸ್ಟೋನ್ಸ್ ಟು ಅಮೆರಿಕಾಸ್ ಲಿಬರ್ಟಿ, 1906

ಮೇಯ್ನ್ ಹೆಚ್., ಹಿಂದೂ ಲಾ ಅಂಡ್ ಯುಸೇಜಸ್, 1938

ಮಾರಿಸನ್ ಮತ್ತು ಕಾಮೇಜರ್, ದಿ ಗ್ರೋತ್ ಆಫ್ ದಿ ಅಮೆರಿಕನ್ ರಿಪಬ್ಲಿಕ್, ಸಂಪುಟ ೧ 1958

ಮುಖರ್ಜಿ ಬಿ.ಕೆ., ದಿ ಹಿಂದೂ ಲಾ ಆಫ್ ರಿಲಿಜಿಯಸ್ ಅಂಡ್ ಚಾರಿಟಬಲ್ ಟ್ರಸ್ಟ್, 1962

ಮುಲ್ಲರ್ ಹೆಚ್.ಜೆ., ದಿ ಯೂಸಸ್ ಆಫ್ ದಿ ಪಾಸ್ಟ್, 1963

ಪಾಮರ್, ಸಿ, ದಿ ಫೋರ್ಟೀನ್ತ್ ಅಮೆಂಡ್‌ಮೆಂಟ್ : ಸಂ ರಿಫ್ಲೆಕ್ಷನ್ಸ್ ಆನ್ ಸೆಗ್ರಿಗೇಷನ್ ಇನ್ ಸ್ಕೂಲ್ಸ್, 49, ಅಮೆರಿಕನ್ ಬಾರ್ ಅಸೋಸಿಯೇಷನ್ ಜರ್ನಲ್, ಪುಟ 645.

ಟಾಯಿನ್‌ಬೀ, ಎ., ಎ ಹಾರ್ಮೋನಿಯಸ್ ಅಪ್ರೋಚ್ ಟು ರಿಲಿಜನ್, 1956

ಎ ಸ್ಟಡಿ ಆಫ್ ಹಿಸ್ಟರಿ, ಸಂ 9, 1955


2ನೇ ಭಾಷಣದಲ್ಲಿ ಉಲ್ಲೇಖಿಸಿರುವ ಹಿಂದೂ 'ಸಮಿತಿ' ಮತ್ತು 'ಸಭಾ'ಗಳನ್ನು ಕುರಿತು ಪೂರ್ಣ ವಿವರ ಜಯಸ್ವಾಲರ "ಹಿಂದೂ ಪಾಲಿಟಿ"ಯಲ್ಲಿ ದೊರಕುತ್ತದೆ. ಮುಲ್ಲಾರವರ "ಪ್ರಿನ್ಸಿಪಲ್ಸ್ ಆಫ್ ಹಿಂದೂ ಲಾ" ( 12 Ed, 1959) ಕೃತಿಗೆ ನ್ಯಾಯಮೂರ್ತಿ ಎಸ್.ಟಿ. ದೇಸಾಯ್‌ರವರು ಬರೆದಿರುವ ಸಾಮಾನ್ಯ ಮುನ್ನುಡಿಯಲ್ಲಿ ಪ್ರಾಚೀನ ಮತ್ತು ಆಧುನಿಕ ಕಾಲದಲ್ಲಿ ಹಿಂದೂ ಕಾನೂನಿನ ಬೆಳವಣಿಗೆ ಮತ್ತು ಅಭಿವೃದ್ಧಿಯ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಗಿದೆ.

* * * *